
ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

ಮಾರ್ಚ್ 2, 2011 ರೂ. 12/-

ಗುಜರಾತ್ SIT ವರದಿ ನ್ಯಾಯದ ಗರ್ಭಪಾತ



ಪ್ಲೇಬಾಯ್ ಸ್ವಾಮಿ ಕದ್ದ ದುಡ್ಡಲ್ಲಿ ಆಸ್ತಿ ಮಾಡಿದ



ಟೀವಿ ನಟಿಯರಿಗೆ ಪಿಂಪ್‌ಗಳ ಕಾಟ!

ವಿಶ್ವ ಕನ್ನಡ ಸಮ್ಮೇಳನ ಕೇಸರಿಮಯ

ಮೈಸೂರು ಕಳಚಿ ಬಿತ್ತು ಪಕ್ಷಗಳ ಮುಖವಾಡ

ಕೃಷಿ ಬಜೆಟ್ ರೈತಾಪಿಯ ಬಡಬಡಿಕೆ ಯಡ್ಡಿಯ ಬುಡಬುಡಿಕೆ!



ಬಿಜೆಪಿ ಖಜಾಂಚಿಯೂ ನಟಿ ಸವಿತಾಳೂ

ನೋ ಕಾಮೆಂಟ್ಸ್

"ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಆರೆಸ್ಸೆಸ್ ಪ್ರಚಾರಕರ ಖರ್ಚನ್ನು ನಿಭಾಯಿಸುವುದು ಜನರಿಂದ ಸಂಗ್ರಹಿಸುವ ಗುರುದಕ್ಷಿಣೆ ಹಣದಿಂದಲ್ಲ, ಬದಲಿಗೆ ಆ ರಾಜ್ಯಗಳ ಬಿಜೆಪಿ ಸರ್ಕಾರವೇ ಆ ಕಾರ್ಯಕರ್ತರ ಖರ್ಚನ್ನು ನಿಭಾಯಿಸುತ್ತವೆ. ಈಗ ಆರೆಸ್ಸೆಸ್ಸಿನ ಹೊಸ ತಲೆಮಾರಿನ ಕಾರ್ಯಕರ್ತರು ರೈಲಿನಲ್ಲಿ ಎರಡನೇ ದರ್ಜೆ-ಬೋಗಿಯಲ್ಲಿ ಪ್ರಯಾಣ ಮಾಡಲು ಅಸಹ್ಯ ಪಟ್ಟುಕೊಳ್ಳುತ್ತಾರೆ ಮಾತ್ರವಲ್ಲ ಬಳಸಲು ಬಂದರೂ ಬರದಿದ್ದರೂ ಹೊಸ ಮಾದರಿ ಲ್ಯಾಪ್‌ಟಾಪ್‌ಗಾಗಿ ಹಾತೊರೆಯುತ್ತಾರೆ. ಈ ಎಲ್ಲಾ ವೆಚ್ಚಗಳನ್ನು ಆ ರಾಜ್ಯಗಳ ಬಿಜೆಪಿ ಸರ್ಕಾರವೇ ಭರಿಸುತ್ತದೆ. ಹೀಗಾಗಿ ಬಿಜೆಪಿ ಆಡಳಿತದಲ್ಲಿರುವ ರಾಜ್ಯಗಳಲ್ಲಿ ಆರೆಸ್ಸೆಸ್ ಬಿಜೆಪಿಯನ್ನು ಪ್ರಭಾವಿಸುತ್ತಿಲ್ಲ. ಉಲ್ಟಾ ಬಿಜೆಪಿಯೇ ಆರೆಸ್ಸೆಸ್‌ಅನ್ನು ಪ್ರಭಾವಿಸುತ್ತಿದೆ."

\- ಸೋಪನ್ ಜೋಷಿ, ತೆಹೆಲ್ಕಾದಲ್ಲಿ

"ಗೋಧ್ರಾ ಘಟನೆಯ ಬಗ್ಗೆ ಜನರಲ್ಲಿ ಅಪಾರ ಆಕ್ರೋಶವಿದೆ. ಹಿಂದೂ-ಮುಸಲ್ಮಾನರಿಬ್ಬರನ್ನೂ ಸಮಾನವಾಗಿ ನೋಡಬೇಕೆಂಬ ನೀತಿ ಈಗ ಸರಿಹೋಗುವುದಿಲ್ಲ. ಹಿಂದೂಗಳು ತಮ್ಮ ಆಕ್ರೋಶವನ್ನು ಹರಿಬಿಡಲು ಅವಕಾಶ ಮಾಡಿಕೊಡಬೇಕು ಎಂದು ಮೋದಿ ಪೊಲೀಸ್ ಉನ್ನತಾಧಿಕಾರಿಗಳ ಸಭೆಯಲ್ಲಿ ಹೇಳಿದ್ದು ನಿಜ."

-ಸಂಜೀವ್ ಭಟ್, ಡಿಐಜಿ, ಗುಜರಾತ್

"ಅಂತರ್ಜಾತಿ ವಿವಾಹಗಳಿಗೆ ಕಳೆದ ಶತಮಾನದಲ್ಲಿದ್ದ ಅಡೆತಡೆ ಈಗಿಲ್ಲ. ಅಂತರ್ಜಾತಿ ವಿವಾಹ ಮಾಡಿಕೊಂಡವರು ಮತ್ತು ಅವರ ಮಕ್ಕಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಇರಬೇಕು. ಇದರಿಂದ ಇಂತಹ ವಿವಾಹಗಳನ್ನು ಪ್ರೋತ್ಸಾಹಿಸಿದಂತಾಗುತ್ತದೆ. ಇತ್ತೀಚೆಗೆ ಕೆಲ ಸಾಂಪ್ರದಾಯಿಕ ಶಕ್ತಿಗಳು ಅಂತರ್ಜಾತಿ ಪ್ರೇಮ ವಿವಾಹವನ್ನು ವಿರೋಧಿಸುತ್ತಿವೆ. ಇದು ಪುರೋಹಿತಶಾಹಿ ವ್ಯವಸ್ಥೆಯ ಕಪಿಮುಷ್ಠಿ ಸಡಿಲಗೊಳ್ಳುತ್ತಿರುವುದರ ಸಂಕೇತ."

-ಪ್ರೊ. ರವಿವರ್ಮ ಕುಮಾರ್

ನಂಬಿದ್ರೆನಂಬಿ ಬಿಟ್ರೆಬಿಡಿ

"ಯುವಕರು ಮರಳಿ ಹಳ್ಳಿಯತ್ತ ತೆರಳುವ ಅಗತ್ಯವಿದೆ. ಕೃಷಿಗೆ ಉತ್ತೇಜನ ನೀಡುವುದರ ಜೊತೆಗೆ ಹಳ್ಳಿಗಳಲ್ಲಿ ಬದುಕಿನ ಅವಕಾಶವನ್ನು ಉತ್ತಮಗೊಳಿಸುವ ರೀತಿ ಬಜೆಟ್ ರೂಪಿಸಲಾಗುವುದು. ಆದರಿಂದ ಕೃಷಿ ಅವಲಂಬಿತರ ಸಂಖ್ಯೆ ಕಡಿಮೆಯಾಗುತ್ತಿದೆ ಎಂಬ ಕೊರಗು ದೂರವಾಗುವುದು. ಅದಕ್ಕಾಗಿ ಬಜೆಟ್‌ನಲ್ಲಿ ಕೃಷಿಗೆ ಹೆಚ್ಚು ಉತ್ತೇಜನ ನೀಡುತ್ತೇನೆ."

\- ಯಡಿಯೂರಪ್ಪ

ಯಡ್ಡಿಗೆ ಮಾತ್ರ ಇರುವುದು ಒಂದೇ ಬೆರಳು!

"ಪ್ರತಿಪಕ್ಷಗಳು ನನಗೆ ಕೊಟ್ಟಷ್ಟು ಕಿರುಕುಳವನ್ನು ಬೇರೆ ಯಾರಿಗಾದರೂ ಕೊಟ್ಟಿದ್ದರೆ ಹುಚ್ಚು ಹಿಡಿದು ಓಡಿಹೋಗುತ್ತಿದ್ದರು. ಇಂದು ಒಳ್ಳೆಯದು ಮಾಡುವುದೇ ಅಪರಾಧವಾಗಿದೆ. ಒಂದು ಬೆರಳಿನಿಂದ ಇನ್ನೊಬ್ಬರನ್ನು ದೂರಿದರೆ ಉಳಿದ ನಾಲ್ಕು ಬೆರಳು ನಮ್ಮನ್ನು ತೋರಿಸುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು."

\- ಯಡಿಯೂರಪ್ಪ

ಪಾರ್ಲಿಮೆಂಟು ಮತ್ತು ಅಸೆಂಬ್ಲಿಗಳನ್ನು ವಿಸರ್ಜಿಸಬೇಕು!

"ಅಪರಾಧ ಹಿನ್ನೆಲೆಯುಳ್ಳವರಿಗೆ ಪಕ್ಷಗಳು ಟಿಕೆಟ್ ನೀಡದಂತೆ ಚುನಾವಣಾ ಆಯೋಗ ಲಕ್ಷ್ಮಣ ರೇಖೆ ಹಾಕಬೇಕು. ಸ್ಪೀಕರ್‌ಗಳು ಪಕ್ಷಾಂತರ ನಿಷೇಧ ಕಾಯಿದೆಯನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಈ ಬಗ್ಗೆ ರಾಜ್ಯಪಾಲರು ಮತ್ತು ರಾಷ್ಟ್ರಪತಿಗಳು ಚಿಂತಿಸಬೇಕು. ವ್ಯಾಪಾರಿಗಳು ಚುನಾವಣೆಗೆ ಸ್ಪರ್ಧಿಸದಂತೆ ಸುಧಾರಣೆ ಕೈಗೊಳ್ಳಬೇಕು."

\- ಎನ್. ನಾರಾಯಣಸ್ವಾಮಿ, ಸಚಿವ

ನೀತಿಯಿಲ್ಲದ ಕಾನೂನೂ ಒಂದು ಕಾನೂನೇ?

"ಮುಖ್ಯಮಂತ್ರಿ ಯಡಿಯೂರಪ್ಪ ಅಧಿಕಾರದಲ್ಲಿ ಮುಂದುವರೆಯಲು ಕಾನೂನಿನಲ್ಲಿ ಅವಕಾಶವಿದೆ. ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಡುವುದು ಅವರಿಗೆ ಬಿಟ್ಟ ವಿಚಾರ."

\- ಎಚ್.ಆರ್.ಭಾರದ್ವಾಜ್, ರಾಜ್ಯಪಾಲರು

ಬೌದ್ಧಿಕ ವ್ಯಭಿಚಾರದ ಮತ್ತೊಂದು ರೂಪ!

"ವಾಸ್ತವವಾಗಿ ದೊಡ್ಡ ದೊಡ್ಡ ಹಗರಣಗಳಿಂದ ದೇಶದ ಅಭಿವೃದ್ಧಿ ದರಕ್ಕೆ ಧಕ್ಕೆಯಾಗಿಲ್ಲ. ಏಕೆಂದರೆ ಈಗ ಭ್ರಷ್ಟಾಚಾರವು ಮೂಲಭೂತವಾಗಿ ರಿಯಲ್ ಎಸ್ಟೇಟ್, ಗಣಿಗಾರಿಕೆ ಮತ್ತು ಸರಕಾರಿ ಗುತ್ತಿಗೆಗಳಿಗೆ ಮಾತ್ರ ಸೀಮಿತಗೊಂಡಿದೆ. ಈ ಕ್ಷೇತ್ರಗಳಲ್ಲಿ ರಾಜಕಾರಣಿಗಳಿಗೆ ದೊಡ್ಡಮಟ್ಟದಲ್ಲಿ ಹಣ ಸಂದಾಯವಾಗುತ್ತಿರುವುದು ನಿಜವೇ ಆದರೂ ಅದರಲ್ಲಿ ಹಣ ಬರಬೇಕೆಂದರೆ ಅವರು ಅದಿರು ತೆಗೆಯಲು, ನಿರ್ಮಾಣ ಚಟುವಟಿಕೆ ಹೆಚ್ಚಲು ಸಹಾಯ ಮಾಡಲೇಬೇಕಾಗುತ್ತದೆ. ಆದ್ದರಿಂದ ದೊಡ್ಡ ಮಟ್ಟದ ಭ್ರಷ್ಟಾಚಾರದಿಂದ ಆರ್ಥಿಕ ಅಭಿವೃದ್ಧಿಗೆ ಧಕ್ಕೆಯಿಲ್ಲ, ಸಮಸ್ಯೆ ಇರುವುದು ಕೆಳಹಂತದ ಭ್ರಷ್ಟಾಚಾರದಲ್ಲಿ, ಮಾಧ್ಯಮಗಳೂ ಸಹ ದೊಡ್ಡ ಮಟ್ಟದ ಭ್ರಷ್ಟಾಚಾರಗಳ ವರದಿಗಿಂತ ಕೆಳಹಂತದ ಭ್ರಷ್ಟಾಚಾರದ ಬಗ್ಗೆ ಹೆಚ್ಚು ಗಮನ ನೀಡಬೇಕು."

-ಸ್ವಾಮಿನಾಥನ್ ಅಯ್ಯರ್, ಅರ್ಥಶಾಸ್ತ್ರಜ್ಞ

ಪ್ರತ್ಯೇಕ ಕೃಷಿ ಬಜೆಟ್

ರೈತಾಪಿಯ ಬಡಬಡಿಕೆ, ಯಡ್ಡಿಯ ಬುಡಬುಡಿಕೆ!

ಯಡ್ಡಿಯ ಕೊನೆಗಾಲ ಹತ್ತಿರವಾಗುತ್ತಿದ್ದಂತೆ ದಿನಕ್ಕೊಂದು ಗಿಮಿಕ್ಕು ಮಾಡುತ್ತಾ ಗಳಿಗೆಗೊಬ್ಬರಿಗೆ ಟೋಪಿ ಹಾಕಲು ಹೊರಟಿರುವುದು ಸ್ಪಷ್ಟವಾಗುತ್ತಿದೆ. ಈ ನಿಟ್ಟಿನಲ್ಲಿ ಬಜೆಟ್ ಅಧಿವೇಶನ ಹತ್ತಿರ ಬರುತ್ತಿದ್ದಂತೆ 'ಪ್ರತ್ಯೇಕ ಕೃಷಿ ಬಜೆಟ್' ಎಂಬ ಹೊಸ ನಾಟಕ ಪ್ರಾರಂಭವಾಗಿದೆ. ಈ ನಾಟಕದ ವಿಶೇಷ ಮತ್ತು ವಿಷಾದ ಏನೆಂದರೆ ಈ ನಾಟಕ ವನ್ನಾಡಲು ಯಡಿಯೂರಪ್ಪನವರು, ರೈತಸಂಘದವರು ಈ ನಾಡು ಕಂಡ ಅಪರೂಪದ ರೈತ ಚಿಂತಕ-ನಾಯಕ ಪ್ರೊ. ನಂಜುಂಡಸ್ವಾಮಿಯವರ 75ನೇ ಜನ್ಮ ದಿನೋತ್ಸವದ ಸಂದರ್ಭದಲ್ಲಿ ಆಚರಿಸುತ್ತಿದ್ದ 'ರೈತೋತ್ಸವ'ದ ವೇದಿಕೆಯನ್ನೇ ಬಳಸಿಕೊಂಡಿದ್ದು.

ಅಸಲು ಈ ಕೃಷಿ ಬಜೆಟ್ ಎಂದರೇನು?

ಯಡಿಯೂರಪ್ಪನವರ ಪ್ರಕಾರ ತಾವು ಮಂಡಿಸಲಿರುವ ಈ ಕೃಷಿ ಬಜೆಟ್ಟು ಇತರ ರಾಜ್ಯಗಳಿಗೂ ಮತ್ತು ಕೇಂದ್ರ ಸರ್ಕಾರಕ್ಕೂ ಮಾದರಿಯಾಗಲಿದೆಯಂತೆ! ಈ ಕಾರಣಕ್ಕಾಗಿಯೇ ಅವರು ಕರ್ನಾಟಕದ ಇತಿಹಾಸದಲ್ಲೇ ಮೊದಲ ಬಾರಿಗೆ ಕೇಂದ್ರ ಸರ್ಕಾರಕ್ಕಿಂತ ನಾಲ್ಕು ದಿನ ಮುಂಚಿತವಾಗಿ ಫೆಬ್ರವರಿ 24ರಂದೇ ರಾಜ್ಯ ಬಜೆಟ್ ಮಂಡಿಸುತ್ತಿದ್ದಾರಂತೆ!!

ಅವರ ಪ್ರಕಾರ ಕೃಷಿ ಬಜೆಟ್ಟೆಂದರೆ ಕೃಷಿಯ ಬಗ್ಗೆಯೇ ವಿಶೇಷ ಕಾಳಜಿಯುಳ್ಳ ಪ್ರತ್ಯೇಕ ಬಜೆಟ್.


ಹಿಂದಿನಿಂದಲೂ ಬಜೆಟ್ಟಿನಲ್ಲಿ ನಿರ್ಲಕ್ಷ್ಯಕ್ಕೊಳಗಾದ ಪ್ರದೇಶ ಅಥವಾ ವರ್ಗಗಳನ್ನು ವಿಶೇಷವಾಗಿ ಗುರುತಿಸಬೇಕೆಂದು ಜನತೆ ಆಗ್ರಹ ಪಡಿಸುತ್ತಲೇ ಬಂದಿದ್ದಾರೆ. ಉದಾಹರಣೆಗೆ ಹಿಂದುಳಿದ ಪ್ರದೇಶವಾದ ಹೈದರಾಬಾದ್ ಕರ್ನಾಟಕ ಅಭಿವೃದ್ಧಿಯಾಗಬೇಕೆಂದರೆ ಅದರ ಸಮಸ್ಯೆಗಳನ್ನು ಬೇರೆಯಾಗಿಯೇ ಅರ್ಥಮಾಡಿಕೊಂಡು ಬಜೆಟ್ಟನ್ನು ಮತ್ತು ಪರಿಹಾರವನ್ನು ಒದಗಿಸಬೇಕೆಂಬ ಆಗ್ರಹವಿತ್ತು. ಅದರ ಭಾಗವಾಗಿಯೇ ನಂಜುಂಡಪ್ಪ ಆಯೋಗ, ಹೈ-ಕ ಅಭಿವೃದ್ಧಿ ಮಂಡಳಿಗಳು ಸೃಷ್ಟಿಯಾದವು. ಹಾಗೆಯೇ ಲಿಂಗ ಅಸಮಾನತೆಯನ್ನು ಹೊಡೆದೋಡಿಸಬೇಕಿದ್ದರೆ ಸರ್ಕಾರ ಬಜೆಟ್ ಮಂಡಿಸುವಾಗ 'ಜೆಂಡರ್ ಬಜೆಟ್' ಅಂದರೆ ಪ್ರತ್ಯೇಕವಾಗಿ ಸ್ತ್ರೀಯರ ಅಭಿವೃದ್ಧಿ-ತಾರತಮ್ಯ ನಿವಾರಣೆಯನ್ನೇ ಗಮನದಲ್ಲಿಟ್ಟುಕೊಂಡಿರುವ ಯೋಜನೆಗಳು ಮತ್ತು ಅದರ ಅನುಷ್ಠಾನವನ್ನು ಉದ್ದೇಶಿಸಿರುವ ಬಜೆಟ್ಟು... ಕೇಂದ್ರ ಹಾಗೂ ಕೆಲವು ರಾಜ್ಯಗಳು ಜೆಂಡರ್ ಬಜೆಟ್ ಮಂಡಿಸುವ ಪ್ರಯತ್ನಗಳನ್ನು ನಡೆಸಿವೆ.

ಇವೆಲ್ಲಾ ಪ್ರಾರಂಭವಾಗಿ ಒಂದೆರಡು ದಶಕಗಳೇ ಕಳೆದಿದ್ದರೂ ಪ್ರಾದೇಶಿಕ ಮಂಡಳಿಗಳಿಂದ ಪ್ರಾದೇಶಿಕ ತಾರತಮ್ಯವಾಗಲೀ, ಜೆಂಡರ್ ಬಜೆಟ್‌ಗಳಿಂದ ಲಿಂಗ ತಾರತಮ್ಯವಾಗಲೀ ಪರಿಹಾರವಾಗಲಿಲ್ಲವೆಂಬುದನ್ನು ಅನುಭವದಿಂದಲೇ ಕಂಡುಕೊಂಡಿದ್ದೇವೆ.

ಈಗ ಈ ಕೃಷಿ ಬಜೆಟ್ಟು!

ಕೃಷಿ ಬಜೆಟ್ಟಾಗಲೀ, ಜೆಂಡರ್ ಬಜೆಟ್ಟಾಗಲೀ ವಾಸ್ತವವಾಗಿ ಆಯಾ ವರ್ಗಗಳಿಗೆ ಹೆಚ್ಚಿನ ಸಂಪನ್ಮೂಲವನ್ನೇನೂ ಕಡ್ಡಾಯವಾಗಿ ಒದಗಿಸಿಕೊಡುವುದಿಲ್ಲ. ಅವುಗಳು ಬಹು ಮುಖ್ಯವಾಗಿ ಆಯಾ ವರ್ಗಗಳ ಸಮಸ್ಯೆಗಳನ್ನು ಮತ್ತು ಪರಿಹಾರಗಳನ್ನು ಗ್ರಹಿಸುವುದರಲ್ಲಿ, ಅದನ್ನು ನಿವಾರಿಸಲು ಬೇಕಾದ ಯೋಜನೆಯನ್ನು ರೂಪಿಸುವಲ್ಲಿ, ಅದನ್ನು ಮಂಜೂರು ಮಾಡಿ ಅನುಷ್ಠಾನಗೊಳಿಸುವಲ್ಲಿ, ಅದರ ಉಸ್ತುವಾರಿಯನ್ನು ನೋಡಿಕೊಳ್ಳುವಲ್ಲಿ ಮತ್ತು ನಂತರದಲ್ಲಿ ಫಲಿತಾಂಶಗಳನ್ನು ವಿಶ್ಲೇಷಿಸಿ ಮರುರೂಪಿಸುವಂಥ ಯೋಜನಾತ್ಮಕ ಮತ್ತು ಪರಿಹಾರ ನೀತಿಗಳ ಮೂಲಕ ಆ ವರ್ಗಗಳಿಗೆ ವಿಶೇಷ ಒತ್ತನ್ನು ತಂದುಕೊಡುತ್ತವೆ. ಹೀಗಾಗಿ ಆ ಸಮಸ್ಯೆ ಮತ್ತು ಅದಕ್ಕೆ ಪರಿಹಾರವನ್ನು ಒಂದು ಸರ್ಕಾರ ಹೇಗೆ ಭಾವಿಸಿಕೊಂಡಿರುತ್ತದೆ ಎಂಬುದು ಅದರಲ್ಲಿ ಅತ್ಯಂತ ಕೀಲಕವಾದ ಅಂಶ.

ಶಿವಸುಂದರ್



ಚಾರ್ವಾಕ

ಮೇಲಿನ ಈ ಐದೂ ವಿಷಯಗಳಲ್ಲಿ ಯಡ್ಡಿಯವರ ಸರ್ಕಾರದ ನಿಲುವೇನಿದೆ ಎಂಬುದರ ಹಿನ್ನೆಲೆಯಲ್ಲಿ ಮಾತ್ರ ಈ ಕೃಷಿ ಬಜೆಟ್ಟು ರೈತರ ಬದುಕಿನ ಮೇಲೆ ಆಡುತ್ತಿರುವ ಎಂಥಾ ಕ್ರೂರ ಪ್ರಹಸನವೆಂದು ತಿಳಿಯುತ್ತದೆ.

ಅದರ ವಿಶ್ಲೇಷಣೆಗೆ ಹೋಗುವ ಮೊದಲು ಯಡಿಯೂರಪ್ಪನವರು ಕೃಷಿ ಬಜೆಟ್ಟಿನ ಮೂಲಕ ಕೃಷಿ ಕ್ಷೇತ್ರಕ್ಕೆ ಒಟ್ಟಾರೆಯಾಗಿ ಹೆಚ್ಚು ಹಣವನ್ನು ಒದಗಿಸುವುದಾಗಿಯೂ, ಒಟ್ಟಾರೆ ಬಜೆಟ್ಟನ್ನೇ ಒಂದು ಲಕ್ಷ ಕೋಟಿಯಷ್ಟು ಬೃಹತ್ ಗಾತ್ರಕ್ಕೆ ಏರಿಸಲಾಗುವುದೆಂದೂ ನೀಡುತ್ತಿರುವ ಹೇಳಿಕೆ ಎಷ್ಟು ಅರ್ಥ ಸತ್ಯದಿಂದ, ಅಗ್ಗದ ಗಿಮಿಕ್ಕಿನಿಂದ ಕೂಡಿದೆ ಎಂಬುದನ್ನು ನೋಡೋಣ!

ಕಳೆದ ವರ್ಷ 2010-11ನೇ ಸಾಲಿನ ಬಜೆಟ್ಟಿನ ಗಾತ್ರ 70,063 ಕೋಟಿ ರೂಪಾಯಿಯಷ್ಟು ದೊಡ್ಡದಾಗಿತ್ತು, ಅದರಲ್ಲಿ ರಾಜ್ಯದ ತೆರಿಗೆ, ಕೇಂದ್ರದ ತೆರಿಗೆಯ ಪಾಲು, ಇನ್ನಿತ್ಯಾದಿ ರೆವೆನ್ಯೂ ಮೂಲಗಳಿಂದ 53,639 ಕೋಟಿ



ರೂಪಾಯಿಗಳು ಸಂದಾಯವಾದರೆ, 14,925 ಕೋಟಿ ರೂಪಾಯಿಗಳನ್ನು ಲಾಭ, ಬಡ್ಡಿ ಇನ್ನಿತರ ಬಂಡವಾಳ ಖಾತೆಯಿಂದ ಗಳಿಸಲಾಗಿತ್ತು, ಆದರೂ ಸುಮಾರು ಹತ್ತು ಸಾವಿರ ಕೋಟಿ ರೂಪಾಯಿ ಖೋತಾ ಬಿದ್ದಿತ್ತು, ರಾಜ್ಯದ ರಾಜಸ್ವ ಆದಾಯದ ಪ್ರಧಾನ ಮೂಲ ವಾಣಿಜ್ಯ ತೆರಿಗೆ, ಎಕ್ಸೈಸ್ ತೆರಿಗೆ, ಮೋಟಾರು ವಾಹನಗಳ ತೆರಿಗೆ, ಸ್ಟಾಂಪ್ ಡ್ಯೂಟಿ ಮತ್ತು ಅದಿರು ಇನ್ನಿತರ ರಾಜ್ಯದ ಸಂಪನ್ಮೂಲಗಳ ಬಳಕೆಗೆ ವಿಧಿಸುವ ರಾಜಧನ. ಕಳೆದ ವರ್ಷ ರಾಜ್ಯದ ಈ ಸ್ವಂತ ಮೂಲಗಳಿಂದ ಅಂದಾಜು 39,000 ಕೋಟಿ ಆದಾಯ ಬಂದಿರಬಹುದೆಂದು ನಿರೀಕ್ಷಿಸಲಾಗಿದೆ. ಇದಲ್ಲದೆ ಕೇಂದ್ರದಿಂದ 15,000 ಕೋಟಿ ಅನುದಾನ ಮತ್ತು ಪಾಲು ಹಾಗೂ ಅಂದಾಜು 3,000 ಕೋಟಿ ತೆರಿಗೇತರ ಆದಾಯದಿಂದ ಬಂದಿರಬಹುದೆಂದು ನಿರೀಕ್ಷಿಸಲಾಗಿದೆ.

ಈಗ 72,000 ಕೋಟಿ ರೂಪಾಯಿಗಳಿರುವ ನಮ್ಮ ಬಜೆಟ್ಟಿನ ಗಾತ್ರ ಇನ್ನೂ 30,000 ಕೋಟಿಗಳಷ್ಟು ಹೆಚ್ಚಿಸಿ ಒಂದು ಲಕ್ಷ ಕೋಟಿ ರೂ.ಗಳಾಗಬೇಕೆಂದರೆ ಪ್ರಧಾನವಾಗಿ ಇರುವುದು ಮೂರು ಮಾರ್ಗ:

1. ನಮ್ಮ ರಾಜಸ್ವ ಆದಾಯಗಳಾದ ವಾಣಿಜ್ಯ ತೆರಿಗೆ, ಎಕ್ಸೈಸ್ ತೆರಿಗೆ, ಮೋಟಾರು ವಾಹನಗಳ ತೆರಿಗೆ, ಸ್ಟಾಂಪ್ ಡ್ಯೂಟಿ, ಅದಿರು ಇನ್ನಿತರ ರಾಜ್ಯದ ಸಂಪನ್ಮೂಲಗಳ ಬಳಕೆಗೆ ವಿಧಿಸುವ ರಾಜಧನ ಇನ್ನಿತ್ಯಾದಿಗಳನ್ನು ಮೊದಲಿಗಿಂತ ಶೇ.30ರಷ್ಟು ಹೆಚ್ಚಿಸುವುದು. ಅರ್ಥಾತ್ ಒಟ್ಟಾರೆ ತೆರಿಗೆಯನ್ನು ಶೇ.30ರಷ್ಟು ಹೆಚ್ಚಿಸುವುದು.

\- ಆದರೆ ಇವೆಲ್ಲವೂ ಪರೋಕ್ಷ ತೆರಿಗೆಗಳೇ ಆಗಿರುವುದರಿಂದ ತೆರಿಗೆ ಹೆಚ್ಚಳದ ಅಂತಿಮ ಹೊರೆ ಸಾಮಾನ್ಯ ಜನರ ಮೇಲೇ ಅಂದರೆ ರೈತರ ಮೇಲೆಯೇ ಬೀಳುತ್ತದೆ. ಜೊತೆಗೆ ತೆರಿಗೆ ಹೆಚ್ಚಳದಿಂದ ಹಣದುಬ್ಬರವೂ ಹೆಚ್ಚಾಗಿ ರೈತಾಪಿಯ ಕೊಳ್ಳುವ ಶಕ್ತಿ ಕಡಿಮೆಯಾಗುತ್ತದೆ. ಇದರಿಂದ ಕೃಷಿ ಬಜೆಟ್ಟಿನ ಗಾತ್ರ ಹೆಚ್ಚಾದರೂ ರೈತ ಫಲಾನುಭವಿಯಾಗುವ ಬದಲು ಬಲಿಪಶುವಾಗುತ್ತಾನೆ.

2. ಎರಡನೆ ಮಾರ್ಗ. ತೆರಿಗೇತರ ಆದಾಯ ಮೂಲಗಳನ್ನು ಹೆಚ್ಚಿಸಿಕೊಳ್ಳುವುದು. ಅಂದರೆ ರಾಜ್ಯದ ಸಂಪನ್ಮೂಲಗಳಾದ ಅದಿರು, ಕಾಡು ಇತ್ಯಾದಿ ಬಳಕೆಗೆ ರಾಜಧನ ವಿಧಿಸುವುದು. ಸರ್ಕಾರಿ ಕಾರ್ಖಾನೆ ಅಥವಾ ಸೇವಾ ಸಂಸ್ಥೆಗಳು ಕೊಡುತ್ತಿರುವ ಸೇವೆಗೆ ಹೆಚ್ಚು ಶುಲ್ಕ ವಿಧಿಸುವುದು.

\- ಇದರಲ್ಲಿ ರಾಜ್ಯದ ಅದಿರು ಸಾಗಾಣಿಕೆಯ ಮೇಲೆ ರಸ್ತೆ ಶುಲ್ಕ ವಿಧಿಸಲು ಮಾಡಿದ ಪ್ರಯತ್ನ ಹೇಗೆ ಸರ್ಕಾರವನ್ನೇ ಅಸ್ಥಿರಗೊಳಿಸಿತು ಎಂಬುದನ್ನು ನೋಡಿದ್ದೇವೆ. ಇನ್ನು ಸರ್ಕಾರ ಈವರೆಗೆ ಸಾಮಾನ್ಯ ಜನರಿಗೆ ಉಚಿತವಾಗಿ ಕೊಡುತ್ತಿದ್ದ ಕುಡಿಯುವ ನೀರು, ನೀರಾವರಿ ನೀರು, ವಿದ್ಯುತ್, ಸಾರಿಗೆ ಸೇವೆ, ಶಿಕ್ಷಣ ಮತ್ತು ವೈದ್ಯಕೀಯ ಸೇವೆಗಳ ಮೇಲೆ ಶುಲ್ಕ ವಿಧಿಸಲು ಪ್ರಾರಂಭಿಸಿದೆ. ಅದನ್ನು ಇನ್ನೂ ಶೇ.30ರಷ್ಟು ಹೆಚ್ಚಳ ಮಾಡಿದರೆ ಸಾಮಾನ್ಯರ ಗತಿ? ಅದು ಕೃಷಿ ಬಜೆಟ್ಟಲ್ಲ-ರೈತರ ತಿಥಿ ಬಜೆಟ್ಟಾಗುವುದಷ್ಟೆ!

3. ಮೂರನೆಯ ದಾರಿ ಸಾಲ ಮಾಡಿ ಬಜೆಟ್ಟಿನ ಗಾತ್ರವನ್ನು ಹೆಚ್ಚಿಸುವುದು. ಮೊದಲನೆಯದಾಗಿ ಈ ಪ್ರಮಾಣದಲ್ಲಿ ಸಾಲ ಕೊಡುವುದು ವಿಶ್ವಬ್ಯಾಂಕು. ಅದು ಸಾಲ ಕೊಡುತ್ತದೆ. ಆದರೆ ಅದು ಹಾಕುವ ಶರತ್ತುಗಳನ್ನು ಪಾಲಿಸುತ್ತಾ ಬಂದಿರುವುದರಿಂದಲೇ ಇಂದು ರಾಜ್ಯದ-ದೇಶದ ಕೃಷಿ ಮತ್ತು ರೈತಾಪಿಯ ಪರಿಸ್ಥಿತಿ ಆತ್ಮಹತ್ಯೆ ಮಾಡಿಕೊಳ್ಳುವಂತಾಗಿದೆ. ಅದನ್ನು ನಂತರದಲ್ಲಿ ಚರ್ಚಿಸೋಣ.

ಇದೆಲ್ಲದರ ಹೊರತಾಗಿ ನಾಲ್ಕನೆ ಮಾರ್ಗವೂ ಇದೆ. ಅದು ಒಂದು ಲಕ್ಷ ಕೋಟಿಯಷ್ಟು ಬಜೆಟ್ ಮಂಡಿಸುವುದು. ಅದಕ್ಕೆ ಪೂರಕವಾದ ಮಾರ್ಗೋಪಾಯಗಳಿಲ್ಲದೆ ಅಂತಿಮವಾಗಿ ಖೋತಾ ಬಜೆಟ್ ಎದುರಿಸುವುದು. ಅಂದರೆ ಬಜೆಟ್ಟಿನಲ್ಲಿ ಹಣಕಾಸಿನ ಬೆಂಬಲವಿಲ್ಲದೆ ಸುಖಾಸುಮ್ಮನೆ ಯೋಜನೆಗಳ ಮಹಾಪೂರವನ್ನೇ ಹರಿಸುವುದು. ಕಳೆದ ಎರಡು ವರ್ಷಗಳಿಂದ ಯಡಿಯೂರಪ್ಪನವರು ಅನುಸರಿಸುತ್ತಿರುವ ಮಾರ್ಗವೂ ಇದೇ!

ಹೀಗೆ ಬಜೆಟ್ಟಿನ ಗಾತ್ರ ಹೆಚ್ಚಾಗುವುದು ಹೇಗೆ ಎಂಬ ಪ್ರಶ್ನೆ ಕೇಳಿಕೊಳ್ಳದೆ, ಕೃಷಿಗೆ ಹೆಚ್ಚು ಹಣ ಕೊಟ್ಟಲ್ಲಿ ಅದೇ ಕೃಷಿ ಬಜೆಟ್, ರೈತಪರ ಬಜೆಟ್ಟೆಂದು ಭಾವಿಸುವುದು ರಾಜಕೀಯ ಮುಠ್ಠಾಳತನ. ಆದರೂ ಅದನ್ನೇ ಯಡಿಯೂರಪ್ಪ ರೈತ ನಾಯಕ ಪ್ರೊ.ನಂಜುಂಡಸ್ವಾಮಿಯವರ ಹೆಸರಲ್ಲಿ ಮಾಡಲು ಹೊರಟಿದ್ದಾರೆ.

ಇನ್ನು ಯಡ್ಡಿ ಹೇಳುತ್ತಿರುವ ಕೃಷಿ ಬಜೆಟ್ಟಿನ ಸಾರಾಂಶವೇನು?

ಅದರಲ್ಲಿ ಕೃಷಿಯ ಸಮಸ್ಯೆಗಳನ್ನು ಮತ್ತು ಅದರ ಪರಿಹಾರವನ್ನು ಅವರು ಪರಿಭಾವಿಸಿಕೊಂಡಿರುವ ಬಗೆಯೇನು? ಅದಕ್ಕೆ ಅವರು ರೂಪಿಸುತ್ತಿರುವ ಯೋಜನೆಗಳೇನು? ಅದರ ಉಸ್ತುವಾರಿ ಮತ್ತು ಪುನರ್‌ವಿಮರ್ಶೆಗೆ ಅವರು ರೂಪಿಸಿರುವ ಸಾಂಸ್ಥಿಕ ರಚನೆಗಳೇನು?

▶▶ 15

...ಭೀಮಾಯಣದಲ್ಲಿನ ಸತ್ಯಗಳು



• ಗೌರಿ ಲಂಕೇಶ್

editorlankesh@gmail.com

...ಈ ಲೇಖನವನ್ನು ಬರೆಯುವ ಮುನ್ನ ನನಗೆ ಗೊತ್ತಿರುವ ... ವರ್ಗಗಳ ಮತ್ತು ಕ್ಷೇತ್ರಗಳ ಹಲವು ...-ಯುವತಿಯರಿಗೆ ಫೋನ್ ಮಾಡಿ ಅವರಿಗೆ ... ಪ್ರಶ್ನೆಗಳನ್ನು ಕೇಳಿದೆ. ಆ ಪ್ರಶ್ನೆಗಳು ಹೀಗಿದ್ದವು:

...ಮ್ಮ ದೇಶದಲ್ಲಿ ಮಹಾತ್ಮಾ ಗಾಂಧಿ ಪ್ರತಿಮೆಗಳಿ...ತಲೂ ಯಾರ ಪ್ರತಿಮೆಗಳು ಹೆಚ್ಚಿನ ಸಂಖ್ಯೆಯಲ್ಲಿವೆ?

...ಗೆ ಹೆಚ್ಚು ಪ್ರತಿಮೆಗಳಲ್ಲಿರುವ ಅಂಬೇಡ್ಕರ್ ಈ ...ಶಕ್ಕಾಗಿ ನೀಡಿದ ಕೊಡುಗೆ ಏನು?

...ಂಬೇಡ್ಕರ್ ಯಾವ ಜಾತಿಯಲ್ಲಿ ಜನಿಸಿದ್ದರು ಮತ್ತು ...ಾವ ರಾಜ್ಯದಲ್ಲಿ?

...ಂಡಿನ ಸತ್ಯಾಗ್ರಹದ ಬಗ್ಗೆ ಕೇಳಿದ್ದೀರಿ. ಆದರೆ ಮಹಡ್ ...ತ್ಯಾಗ್ರಹದ ಬಗ್ಗೆ ನಿಮಗೆಷ್ಟು ಗೊತ್ತು?

...ತಂತ್ರ್ಯ ಸಂಗ್ರಾಮದಲ್ಲಿ ಗಾಂಧೀಜಿ ಅವರು ವಿದೇಶಿ ...ರ್ಮಿತ ಬಟ್ಟೆಗಳನ್ನು ಸುಟ್ಟು ಹಾಕಲು ಹೇಳಿದರು. ...ದರೆ ಅಂಬೇಡ್ಕರ್ ಘೋರ ವಸ್ತುವೊಂದನ್ನು ಸುಟ್ಟು ...ಕಿದರು. ಅವರು ಸುಟ್ಟಿದ್ದು ಏನನ್ನು?

...ನಾ ಒಪ್ಪಂದದ ಬಗ್ಗೆ ನಿಮಗೆಷ್ಟು ಗೊತ್ತು?

...ನ್ನೆ ಲಂಕೇಶ್ ಪ್ರಕಾಶನದ ಸಹಯೋಗ ...ಗೆ ನವಯಾನ ಪ್ರಕಾಶನದವರು ಬಿಡುಗಡೆ ...ದ 'ಭೀಮಾಯಣ' ಪುಸ್ತಕವನ್ನು ಓದಿದಾಗ ... ಯುವಕರಿಗೆ ಈ ಪ್ರಶ್ನೆಗಳನ್ನು ಕೇಳಿ ...ಬೇಕೆನಿಸಿತು. ಯಾಕೆಂದರೆ 'ಭೀಮಾಯಣ' ...ರ ಪ್ರಕಾರ ನಮ್ಮ ಈಗಿನ ಯುವಜನತೆಗೆ ...ಡ್ಕರ್ ಬಗ್ಗೆ ಏನೇನೂ ಗೊತ್ತಿಲ್ಲ. ಹೆಚ್ಚೆಂದರೆ ...ಡ್ಕರ್ ಅಂದರೆ ಎಲ್ಲೆಲ್ಲೂ ತನ್ನ ತೂರುಬೆರಳನ್ನು ...ಕ್ಕೆತ್ತಿ ನಿಂತಿರುವ ಪ್ರತಿಮೆಯಲ್ಲಿರುವವರು ..., ಅವರು ನಮ್ಮ ಸಂವಿಧಾನದ ಶಿಲ್ಪಿ ...ರಿಂದ ಅವರ ಪ್ರತಿಮೆಗಳನ್ನು ಎಲ್ಲೆಡೆ ...ಸಿದ್ದಾರೆಂದಷ್ಟೇ ನಮ್ಮ ಹೆಚ್ಚಿನ ಯುವ ...ಗೆ ಗೊತ್ತು.


...ದು ನಿಜವೇ?

...ನು ಕೇಳಿದ ಪ್ರಶ್ನೆಗಳಲ್ಲಿ ಒಂದೆರಡಕ್ಕೆ ...ಋ ಸರಿಯಾದ ಉತ್ತರ ಕೊಟ್ಟರೇ ಹೊರತು ...ಗೂ ಎಲ್ಲ ಪ್ರಶ್ನೆಗಳಿಗೆ ಉತ್ತರಗಳು ...ಲಿಲ್ಲ. ಅಂದರೆ 'ಭೀಮಾಯಣ'ದಲ್ಲಿ ನಾನು ...ದ್ದು ನಿಜವಾಗಿತ್ತು. ಇದಕ್ಕೆ ಕಾರಣ ಹಲವು. ...ಲನೆಯದಾಗಿ ನಮ್ಮ ಶಾಲೆ ಮತ್ತು ...ಜುಗಳ ಪಠ್ಯಪುಸ್ತಕಗಳಲ್ಲಿ ಭೀಮರಾವ್ ರಾಮ್‌ಜಿ ...ಡ್ಕರ್ ಅವರ ಜೀವನಗಾಥೆಯಾಗಲಿ, ಅವರು ದಲಿತರ ...ಗಿ ಹೋರಾಡಿದ್ದರ ಬಗ್ಗೆಯಾಗಲಿ ಸಾಕಷ್ಟು ...ತಿಗಳೇ ಇರುವುದಿಲ್ಲ. ಇದರ ಜೊತೆಗೆ ಜಾತಿ ವ್ಯವಸ್ಥೆ ...ೂ ನಮ್ಮ ಸಮಾಜದಲ್ಲಿ ತಾಂಡವವಾಡುತ್ತಿರುವು...ರ ಇಂದಿಗೂ ನಮ್ಮ ದೇಶದ 170 ಮಿಲಿಯನ್ ...ರ ಬದುಕು ಎಷ್ಟು ನರಕಸದೃಶವಾಗಿದೆ ಎಂಬ ...ಯೂ ಬಹಳಷ್ಟು ಜನಕ್ಕೆ ಗೊತ್ತಿಲ್ಲ ಅಥವಾ ಅದರ ...ತಿಳಿದುಕೊಳ್ಳುವ ಅಗತ್ಯವೂ ಅವರಿಗಿಲ್ಲ.

...ಈ ಹಿನ್ನೆಲೆಯಲ್ಲಿ 'ಭೀಮಾಯಣ' ಪುಸ್ತಕ ನಿಜವಾಗಲೂ ... ದೊಡ್ಡ ಕೊರತೆಯನ್ನು ನೀಗಿಸುತ್ತದೆ ಎನ್ನಬಹುದು. ...ಯನ್ನು ಕುರಿತು ಅಂಬೇಡ್ಕರ್ ಅವರ ಅನುಭವಗಳನ್ನು ...ಲಿಸುವ, ಅದರ ಜೊತೆಗೆ ಇವತ್ತಿಗೂ ನಮ್ಮ ದೇಶದ ...ರು ಕಡೆ ಪ್ರತಿನಿತ್ಯ ನಡೆಯುವ ದಲಿತರ ದಮನಗಳನ್ನು ...ಸುವ, ಆ ಮೂಲಕ ದಲಿತರ ಶೋಷಣೆ ಬಗ್ಗೆ ...ನ್ನು ಮೂಡಿಸುವ 'ಭೀಮಾಯಣ' ಒಂದು ಮುಖ್ಯ ... ಅಷ್ಟೇ ಮುಖ್ಯವಾದದ್ದು ಈ ಪುಸ್ತಕದಲ್ಲಿರುವ ...ಮುಟ್ಟುವ, ಮನ ಕದಡುವ, ಸಂದರ್ಭಕ್ಕೆ ಚೆನ್ನಾಗಿ ...ದುಕೊಳ್ಳುವ ಕಲಾಚಿತ್ರಗಳು.

...ದುರ್ಗಾಬಾಯಿ ವ್ಯಾಮ್ ಮತ್ತು ಸುಭಾಶ್ ವ್ಯಾಮ್ ಎಂಬ ಪ್ರಧಾನಗೊಂಡ ಆದಿವಾಸಿ ದಂಪತಿಗಳು 'ಭೀಮಾಯಣ' ಪುಸ್ತಕಕ್ಕೆ ಚಿತ್ರಗಳನ್ನು ಬಿಡಿಸಿದ್ದಾರೆ. ಆದರೆ ಇದು ಸಾಮಾನ್ಯವಾಗಿ ಕಂಡುಬರುವ ಕಾಮಿಕ್‌ಬುಕ್‌ಗಳಲ್ಲಿ ರೆಕ್ಟಾಂಗಲ್‌ಗಳಲ್ಲಿ ಮೂಡಿಬರುವ ಚಿತ್ರಗಳಲ್ಲ, ಬದಲಾಗಿ ಪುಟದ ಎಲ್ಲೆಡೆ ಚಲಿಸುತ್ತಿರುವಂತೆ ಕಾಣುವ ಕಲಾ ದೃಶ್ಯಗಳು. ಅಷ್ಟೇ ಅಲ್ಲ, ಅನಕ್ಷರಸ್ಥರಾದ ವ್ಯಾಮ್ ದಂಪತಿಗಳು ಅಂಬೇಡ್ಕರ್ ಅವರ ಬದುಕಿನೊಂದಿಗೆ ತಮ್ಮ ಜೀವನದಲ್ಲಿ ಅನುಭವಿಸಿರುವ ತಾರತಮ್ಯಗಳನ್ನೇ ಬೆಸೆದು ಚಿತ್ರಗಳನ್ನು ರಚಿಸಿರುವುದರಿಂದ ಅಂಬೇಡ್ಕರ್ ಅವರ ಜೀವನಗಾಥೆಗೆ ಹೊಸ ವ್ಯಾಖ್ಯೆಯನ್ನೇ ನೀಡಿದ್ದಾರೆ.

ಉದಾಹರಣೆಗೆ ಬಾಲಕ ಭೀಮ್ ಶಾಲೆಯಲ್ಲಿ ಕುಡಿಯುವ ನೀರಿಗಾಗಿ ಬೇಡುವಾಗ ಆತನೊಳಗೆ ಮೀನೊಂದನ್ನು ಚಿತ್ರಿಸಿದ್ದಾರೆ. ಆ ಮೂಲಕ ನೀರಿನ ಹೊರಗೆ ಬದುಕಲಾಗದ ಮೀನು ಮತ್ತು ನೀರಿಲ್ಲದೆ ಬದುಕಲಾಗದ ಮನುಷ್ಯನನ್ನು ಸಮ್ಮಿಳನಗೊಳಿಸುತ್ತಾರೆ. ವ್ಯಾಮ್‌ಗಳು ಆದಿವಾಸಿಗಳಾಗಿರುವುದರಿಂದಲೋ ಏನೋ ಅವರ ಚಿತ್ರಗಳಲ್ಲಿ ನಗರದ ರಸ್ತೆ ಹಾವಿನ ರೂಪ ಪಡೆಯುತ್ತದೆ, ರೈಲು ಬಸವನ ಹುಳುವಿನಂತೆ ಕಾಣಿಸುತ್ತದೆ, ನೀರಿನ ಪಂಪ್ ಆನೆಯ ಸೊಂಡಿಲಾಗುತ್ತದೆ, ಮೇಲುಜಾತಿಯ ಮನುಷ್ಯ ಮೃಗದಂತೆ ಕಾಣಿಸುತ್ತಾನೆ, ಮಹಾರಾಷ್ಟ್ರದ ಮಹಡ್ ಎಂಬ ಊರಲ್ಲಿನ ಕೆರೆಯ ನೀರು ದಲಿತರಿಗೂ ಸಿಗಬೇಕೆಂದು ಅಂಬೇಡ್ಕರ್ ನಡೆಸಿದ ಮಹಡ್ ಸತ್ಯಾಗ್ರಹದ ದೃಶ್ಯಗಳಲ್ಲಿ ದಲಿತರನ್ನು ಗೋವುಗಳಂತೆ ಚಿತ್ರಿಸಿದ್ದರೆ, ಬ್ರಾಹ್ಮಣರನ್ನು ಸಿಂಹಗಳಂತೆ ತೋರಿಸಲಾಗಿದೆ. ಅಷ್ಟೇ ಅಲ್ಲ, ಪ್ರತಿಭಟನಾನಿರತ ದಲಿತರ ಮೇಲೆ ಬ್ರಾಹ್ಮಣರು ಉಪಯೋಗಿಸುವ ಕೋಲುಗಳು ಸರ್ಪಗಳಾಗಿ ಮಾರ್ಪಾಟಾಗುತ್ತವೆ.



ಅಂಬೇಡ್ಕರ್ ಅವರು ವಿದೇಶದಲ್ಲಿ ಉನ್ನತ ವಿದ್ಯಾಭ್ಯಾಸ ಪಡೆದು ಭಾರತಕ್ಕೆ ವಾಪಸ್ಸು ಬಂದಾಗ ಅವರು ಸೂಟು-ಬೂಟು ಧರಿಸಿದ್ದರೂ ಅವರನ್ನು ನಮ್ಮ ಸಮಾಜ ಅಸ್ಪೃಶ್ಯರಂತೆಯೇ ಕಾಣುತ್ತಿದ್ದರಿಂದ ಅವರ ಸೂಟಿನ ಮೇಲೆ ಮುಳ್ಳುಗಳನ್ನು ಚಿತ್ರಿಸಲಾಗಿದೆ. ಕೊನೆಗೆ, ಅಂಬೇಡ್ಕರ್ ಅವರನ್ನು ಒಂದು ಚಿತ್ರದಲ್ಲಿ ಸಾಕ್ಷಾತ್ ಬುದ್ಧನಂತೆಯೇ ಬಿಂಬಿಸಲಾಗಿದೆ. ಆದರೆ ಈ ಅಂಬೇಡ್ಕರ್ ದಲಿತರ ಬುದ್ಧನಾಗಿ ಕಾಣಿಸಿಕೊಳ್ಳುತ್ತಾರೆ.

ಅಂಬೇಡ್ಕರ್ ಅವರ ತೋರುಬೆರಳು ಪುಸ್ತಕದುದ್ದಕ್ಕೂ ಕಾಣಿಸಿಕೊಳ್ಳುತ್ತದೆ. ಹಲವೆಡೆ ಅದು ಮುಂದಿನ ಚಿತ್ರಕ್ಕೆ ಮಾರ್ಗಸೂಚಿಯಾಗಿದ್ದರೆ, ಇನ್ನು ಕೆಲವೆಡೆ ದಲಿತರ ಪರಿಸ್ಥಿತಿಗೆ ಪ್ರತ್ಯಕ್ಷ ಸಾಕ್ಷಿಯಾದ ಕಣ್ಣುಗಳಾಗಿ ಕಾಣಿಸಿಕೊಳ್ಳುತ್ತದೆ.

ವ್ಯಾಮ್ ದಂಪತಿಗಳ ಕ್ರಿಯಾಶೀಲತೆ ಎಂತಹದ್ದೆಂದರೆ, ದಲಿತರ ಮತ್ತು ದಲಿತರ ಪರವಾದ ಜನರು ಆಡುವ ಮಾತುಗಳನ್ನು ಒಂದು ಹಕ್ಕಿಯ ಆಕಾರದ ಗುಳ್ಳೆಯಲ್ಲಿ ತೋರಿಸಿದ್ದರೆ, ಅವರ ವಿರುದ್ಧ ಇರುವ ಜನರ ಮಾತುಗಳನ್ನು ವಿಷವನ್ನು ಹೊಂದಿರುವ ಕುಟುಕದಲ್ಲಿ ತೋರಿಸಲಾಗಿದೆ.

ಮೊದಲೇ ಹೇಳಿದಂತೆ ಅಂಬೇಡ್ಕರ್ ಅವರು 1927ರಲ್ಲಿ ಮಹಡ್ ಎಂಬಲ್ಲಿ ದಲಿತರ ಪರವಾಗಿ ಕುಡಿಯುವ ನೀರಿಗಾಗಿ ದೊಡ್ಡ ಆಂದೋಲನವನ್ನೇ ನಡೆಸಿದ್ದರು. ಆದರೆ ಅದರಿಂದ ನಮ್ಮ ಸಮಾಜದಲ್ಲಿ ಏನಾದರೂ ಬದಲಾವಣೆಗಳಾಗಿವೆಯೇ? ಇಲ್ಲ ಎಂಬುದನ್ನು ಮಹಡ್ ಸತ್ಯಾಗ್ರಹ ನಡೆದು 80 ವರ್ಷಗಳ ನಂತರ ರಾಜಸ್ಥಾನದ ರಾಜಧಾನಿ ಜೈಪುರದ ಹತ್ತಿರದ ಚಕ್‌ವಾರ ಎಂಬ ಹಳ್ಳಿಯಲ್ಲಿ ನಡೆದ ಪ್ರಸಂಗವೊಂದನ್ನು 'ಭೀಮಾಯಣ' ದಾಖಲಿಸುತ್ತದೆ.


2008ರಲ್ಲಿ 'ತೆಹೆಲ್ಕಾ' ಪತ್ರಿಕೆಯು ವರದಿ ಮಾಡಿದಂತೆ, ಚಕ್‌ವಾರದಲ್ಲಿರುವ ಕೆರೆಯಿಂದ ದನಗಳು, ಹಂದಿಗಳು ನೀರು ಕುಡಿಯಬಹುದಿತ್ತು, ಆದರೆ ದಲಿತರು ಮಾತ್ರ ಆ ಕೆರೆಯ ನೀರನ್ನು ಮುಟ್ಟುವಂತಿರಲಿಲ್ಲ. ಇದರಿಂದ ರೋಸತ್ತು ಹೋದ ಬಾಬುಲಾಲ್ ಮತ್ತು ರಾಧೆಶ್ಯಾಮ್ ಎಂಬ ಇಬ್ಬರು ದಲಿತರು ಪ್ರತಿಭಟಿಸಲು ನಿರ್ಧರಿಸಿದರು. ಅದರಂತೆ ಅವರಿಬ್ಬರು ಒಂದು ದಿನ ಆ ಕೆರೆಯಲ್ಲಿ ಸ್ನಾನ ಮಾಡಿದರು. ಇದರಿಂದ ಕೋಪಗೊಂಡ ಹಳ್ಳಿಯ ಮೇಲುಜಾತಿಯವರು ಅವರಿಬ್ಬರಿಗೆ ಧಮಕಿ ಹಾಕಿದರು. ಪಂಚಾಯತಿಯನ್ನು ಕರೆದು ಹಳ್ಳಿಯ ಸಂಪ್ರದಾಯವನ್ನು ಮುರಿದಿದ್ದಕ್ಕೆ ಹಳ್ಳಿಯ ಬಡ ದಲಿತ ಸಮುದಾಯದ ಮೇಲೆ 50,000 ರೂಪಾಯಿಗಳ ದಂಡ ವಿಧಿಸಿದರು. ಅದೂ ಸಾಲದೆಂಬಂತೆ ದಲಿತರ ವಿರುದ್ಧ ಸಾಮಾಜಿಕ ಬಹಿಷ್ಕಾರ ಘೋಷಿಸಿದರು.

ಇದೆಲ್ಲದರಿಂದ ರೋಸಿಹೋದ ಬಾಬುಲಾಲ್ ಹಳ್ಳಿಯ ಮೇಲುಜಾತಿಯವರ ವಿರುದ್ಧ ಪೊಲೀಸ್ ಠಾಣೆಯಲ್ಲಿ ಒಂದು ದೂರು ದಾಖಲಿಸಿದ. ಆದರೆ ಪೊಲೀಸರೋ "ನಿನ್ಯಾಕೆ ಇದೆಲ್ಲ ರಗಳೆ? ಕೆರೆ ನೀರಿನ ಉಸಾಬರಿಗೆ ಹೋಗಬೇಡ" ಎಂದು ಬಾಬುಲಾಲನಿಗೇ ಉಪದೇಶ ನೀಡಿದರು. ಆದರೆ ಬಾಬುಲಾಲ್ ಮತ್ತು ಇತರೆ ದಲಿತರು ತಮ್ಮ ಪಟ್ಟು ಬಿಡಲಿಲ್ಲ. ಬದಲಾಗಿ ಕೆರೆಯ ನೀರನ್ನು ಬಳಸುವುದನ್ನು ಮುಂದುವರೆಸಿದರು. ಆಗ, ಮೇಲುಜಾತಿಯವರೇ "ಕೆರೆ ನೀರು ಕಲುಷಿತವಾಗಿದೆ" ಎಂದು ಹೇಳಿ ಅವರೆಲ್ಲ ಆ ನೀರನ್ನು ಮುಟ್ಟುವುದನ್ನೇ ಬಿಟ್ಟರು. ಅಷ್ಟು ಸಾಲದೆಂಬಂತೆ, ಪ್ರತಿನಿತ್ಯ ಕೆರೆಯ ಬದಿಯಲ್ಲೇ ಮಲಮೂತ್ರ ವಿಸರ್ಜನೆ ಮಾಡಲಾರಂಭಿಸಿದರು. ಕೊನೆಕೊನೆಗೆ, ಹಳ್ಳಿಯ ಚರಂಡಿ ನೀರೆಲ್ಲ ಈ ಕೆರೆಗೆ ಹರಿಯುವಂತೆ ಮಾಡಿ ಇಡೀ ಕೆರೆಯನ್ನು ಯಾರೂ ಉಪಯೋಗಿಸದಂತೆ ಪರಿವರ್ತಿಸಿದರು. ಆ ಮೂಲಕ ತಮ್ಮ ಹಕ್ಕಿಗಾಗಿ ಹೋರಾಡಿದ್ದ ದಲಿತರ ವಿರುದ್ಧ ಮೇಲುಜಾತಿಯವರು ಸೇಡು ತೀರಿಸಿಕೊಳ್ಳುವಲ್ಲಿ ಯಶಸ್ವಿಯಾದರು.

ಇದು ಭಾರತದ ದಲಿತರು ಇವತ್ತಿಗೂ ಎದುರಿಸುತ್ತಿರುವ ಶೋಷಣೆ... ಭಾರತಕ್ಕೆ ಸ್ವಾತಂತ್ರ ಬಂದು 60ಕ್ಕೂ ಹೆಚ್ಚು ವರ್ಷಗಳಾಗಿವೆ. ಆದರೆ ನಮ್ಮ ದೇಶದ ಜಾತಿ ವ್ಯವಸ್ಥೆಯಿಂದ ಅಂಬೇಡ್ಕರ್ ಅವರು ಆಶಿಸಿದ್ದ ಸ್ವಾತಂತ್ರ ಸಿಗುವುದೆಂದು? •

ಹಾವೇರಿ: 'ಮಹಾರಾಜ್ ಪೇಟ್'ಗೆ ಗೌರವದ ವಿದಾಯ

ಕರ್ನಾಟಕದ ಎಲ್ಲಾ ಪತ್ರಿಕಾ ಸಂಸ್ಥೆಗಳ ಪಾಲಿಗೂ ಹಿತೈಷಿಯಂತಿದ್ದ ಹಾವೇರಿಯ ಪತ್ರಿಕಾ ಏಜೆಂಟ್ ಟಿ.ಜಿ. ಮಹಾರಾಜ್ ಪೇಟ್ ತೀರಿಕೊಂಡಿದ್ದಾರೆ. ಹಾವೇರಿ ಜಿಲ್ಲೆಯ ಉದ್ದಗಲಕ್ಕೂ ಪತ್ರಿಕಾ ವಿತರಣೆಯ ನೆಟ್‌ವರ್ಕ್ ಹೊಂದಿರುವ ಮಹಾರಾಜ್ ಪೇಟ್‌ರ ಕುಟುಂಬ ದಕ್ಷತೆ ಹಣಕಾಸಿನ ಶಿಸ್ತು ಹಾಗೂ ಪ್ರಾಮಾಣಿಕತೆಗೆ ಹೆಸರಾಗಿದೆ. ಸುಮ್ಮನೆ 'ಮಹಾರಾಜ್ ಪೇಟ್, ಹಾವೇರಿ' ಎಂದು ಬರೆದು ಯಾರೋ ಪತ್ರಿಕೆಯವರು ಒಂದು ಬಂಡಲ್ ಅನ್ನು ಬಸ್ಸಿಗೆ ಹಾಕಿಬಿಟ್ಟರೆ ಅದು ನೇರ ಅವರ ಕೈಗೇ ತಲುಪುತ್ತಿತ್ತು. ನಂತರ ಪತ್ರಿಕಾ ಮಾಲೀಕರು ಕೇಳಲಿ, ಕೇಳದಿರಲಿ ಮಾರಾಟದ ಹಣ ನಿಯತ್ತಾಗಿ ಹೋಗಿ ತಲುಪುವಂತೆ ಮಹಾರಾಜ್ ಪೇಟ್ ನೋಡಿಕೊಳ್ಳುತ್ತಿದ್ದರು.



ಪತ್ರಿಕಾ ರಂಗದಲ್ಲಿ, ಪತ್ರಕರ್ತರು, ಬರಹಗಾರರು ಹೆಸರು ಮಾಡುವುದು ಸಹಜ. ಆ ಗದ್ದಲದಲ್ಲಿ ಏಜೆಂಟರುಗಳ ಪಾತ್ರ ಯಾರ ನಜರಿಗೂ ಬೀಳುವುದಿಲ್ಲ. ಆದರೆ ಪ್ರತಿ ಪತ್ರಿಕಾ ಸಂಸ್ಥೆಗೂ ರಕ್ತನಾಳಗಳಂತಿರುವ ಏಜೆಂಟರು ನಿಜಕ್ಕೂ ಶ್ರಮಜೀವಿಗಳು. ಹಾಗೆ ಶ್ರಮ ಪಡುತ್ತಲೇ 30 ವರ್ಷ ಕೆಲಸ ಮಾಡಿ ನಿರ್ಗಮಿಸಿರುವ ಮಹಾರಾಜ್ ಪೇಟ್‌ರಿಗೆ ಗೌರವದ ವಿದಾಯ. •


...ಲಂಕೇಶರ 76 ನೇ ...ಹುಟ್ಟುಹಬ್ಬ ಕಾರ್ಯಕ್ರಮ

...ಲಂಕೇಶ್ 76

...ಲಂಕೇಶ್ ವಾರಪತ್ರಿಕೆ ಮತ್ತು ಗೈಡ್ ...ಮಾಸಿಕದ ವಾರ್ಷಿಕೋತ್ಸವ

...ಮಾರ್ಚ್ 6, 2011 ರ ಸಂಜೆ ಸಂಸ ಬಯಲು ...ರಂಗಮಂದಿರ, ಬೆಂಗಳೂರು

...ಸ್ತಕ ಬಿಡುಗಡೆ-ಸಾಂಸ್ಕೃತಿಕ ಕಾರ್ಯಕ್ರಮ- ...ಚಾರಗೋಷ್ಠಿ ಮತ್ತು ಲಂಕೇಶ್ ಪ್ರಶಸ್ತಿ



ವಿಶೇಷಾಂಕಕ್ಕೆ ನೀವೂ ಬರೆಯಿರಿ ನನಗೇಕೆ ಅವರು ಮೆಚ್ಚುಗೆಯೆಂದರೆ....

ಕೆಲವರಿರುತ್ತಾರೆ ಒಂದೆಡೆ ಕಾಣಿಸಿಕೊಂಡರೆ ಅಥವಾ ಅವರಿದ್ದ ಕಡೆ ಇಡೀ ವಾತಾವರಣ ಜೀವಂತಗೊಂಡಂತಿರುತ್ತದೆ. ಇನ್ನೂ ಕೆಲವರು ನಿರುಮ್ಮಳವಾಗಿ ತಮ್ಮ ಪಾಡಿಗೆ ತಾವಿರುತ್ತಾರೆ. ಆದರೂ ಅವರ ವ್ಯಕ್ತಿತ್ವದ ಚೆಲುವು ಸುತ್ತ ಆವರಿಸಿಕೊಳ್ಳುತ್ತಿರುತ್ತದೆ.

ನೀವೂ ಗಮನಿಸಿರುವ ಅಂಥವರ ಬಗ್ಗೆ ದಯವಿಟ್ಟು ಬರೆಯಿರಿ. ಅವರು ರೈತ, ಗೃಹಿಣಿ, ನೌಕರ, ರಾಜಕಾರಣಿ, ಆಟೋಡ್ರೈವರ್, ಹಮಾಲಿ ಯಾರೂ ಆಗಿರಬಹುದು.

ಪದ ಮಿತಿ 150 ರಿಂದ 200. ಜೊತೆಗೆ ನಿಮ್ಮ ಹಾಗೂ ಮೆಚ್ಚಿನ ವ್ಯಕ್ತಿಯ ಫೋಟೋಗಳಿರಲಿ... ನಿಮ್ಮ ವಿಳಾಸದೊಂದಿಗೆ.

ನಿಮ್ಮ ಬರಹ ಫೆಬ್ರವರಿ 26 ರೊಳಗೆ ನಮಗೆ ತಲುಪಲಿ.

ನುಡಿ, ಬರಹದಲ್ಲಿ ಇ-ಮೇಲ್ ಕಳುಹಿಸಿದರೂ ಆದೀತು.


ಸಂಪಾದಕರು
ಲಂಕೇಶ್ ವಿಶೇಷಾಂಕ
ನಂ. 9, ಇ.ಎ.ಟಿ. ರಸ್ತೆ
ಬಸವನಗುಡಿ, ಬೆಂಗಳೂರು-4
email:glankesh@gmail.com

ಲೆಹರ್ ಸಿಂಗ್ ಮಗನೂ, 'ರಂಗೋಲಿ ಸವಿತಾ' ಎಂಬ ನಟಿಯೂ!


ಸವಿತಾ


ಲೆಹರ್ ಸಿಂಗ್ ಸಿರೋಯಾ ಎಂಬ ಮಾರ್ವಾಡಿ ಸದ್ಯ ರಾಜ್ಯ ಬಿಜೆಪಿಯ ಖಜಾಂಚಿಯೂ ಹೌದು ಮುಖ್ಯಮಂತ್ರಿ ಯಡ್ಡಿಯ ಪಾಲಿಗೆ ರೈಟ್‌ಹ್ಯಾಂಡ್, ಭಟ್ಟಂಗಿ, ಬೇನಾಮಿ, ಕಲೆಕ್ಷನ್ ಗಿರಾಕಿ ಎಲ್ಲವೂ ಹೌದಲ್ಲವೆ? ಈತನ ಮಗ ದೀಪಕ್‌ನ ಪತ್ನಿ ನಿಗೂಢವಾಗಿ ಸತ್ತಿದ್ದು ಕೊಲೆಯಾ, ವರದಕ್ಷಿಣೆ ಕಿರುಕುಳವಾ? ಎಂಬುದು ಕೂಡ ಪ್ರಶ್ನೆಯಾಗೇ ಉಳಿದಿದೆ. ಸೊಸೆ ಕೊಂದ ಆರೋಪಿ ಲೆಹರ್ ಸಿಂಗ್ ಮತ್ತಾತನ ಕೇಡಿ ಪುತ್ರ ದೀಪಕ್‌ನ ಕುಖ್ಯಾತಿ, ಪ್ರತಿಷ್ಠೆ, ಪ್ರಭಾವ ಮತ್ತು ಅಧಿಕಾರಮದ ಹೇಗೆ ಅನೇಕ ಸಂಸಾರಗಳ ಪಾಲಿಗೆ ಮುಳುವಾಗುತ್ತದೆ ಎಂಬುದಕ್ಕೆ ಈಕೆ ಸಣ್ಣ ಸ್ಯಾಂಪಲ್ಲಿನಂತಿದ್ದಾಳೆ!

ಥಟ್ಟನೆ; ಯಾವುದೋ ಮೃಗಾಲಯದಿಂದ ತಪ್ಪಿಸಿಕೊಂಡು ಬಂದ ಅಪರೂಪದ ಪ್ರಾಣಿಯಂತೆ ಕಾಣುವ ಈಕೆಯ ಹೆಸರು ಶಿಲ್ಪಾ. ಸವಿತಾ ಎಂಬ ಇನ್ನೊಂದು ಹೆಸರೂ ಇದೆ. ಒಂದಲ್ಲ ಮೂರು ಬಾರಿ ಮೈಕಾಯಕದ ಕೇಸು ಹೊತ್ತು ಜೈಲಿಗೆ ಹೋಗಿಬಂದಿದ್ದಾಳೆ. ಬೆಂಗಳೂರಿನ ಐದಾರು ಪೊಲೀಸ್ ಠಾಣೆಗಳಲ್ಲಿ ಈಕೆಯ ವಿರುದ್ಧ ಬ್ಲ್ಯಾಕ್‌ಮೇಲ್, ವಂಚನೆ, ಕೊಲೆ ಬೆದರಿಕೆ, ಹಲ್ಲೆ ನಡೆಸಿದ್ದು; ಇತ್ಯಾದಿ ಕ್ರಿಮಿನಲ್ ಕೇಸುಗಳಿವೆ. ಬೆಂಗಳೂರಿನ ಕುಖ್ಯಾತ ಸಂಜೆ ಅಡ್ಡೆಗಳಾದ ಡೆಸ್ಮಂಡ್ಸ್, ಇನ್‌ಸೋಮ್ನಿಯಾ, ಎಫ್ ಬಾರ್ ಇತ್ಯಾದಿ ಡಿಸ್ಕೋ ಜಾಯಿಂಟುಗಳಲ್ಲಿ ಇಟ್ಯಾಡುತ್ತಾಳೆ. ಯಾರೇ ವಿವಾಹಿತ ಜೋಡಿ ಕಣ್ಣಿಗೆ ಬಿತ್ತೆಂದರೆ ತಕ್ಷಣವೇ ಪರಿಚಯಿಸಿಕೊಂಡು ಪಾರ್ಟಿ ಕೊಟ್ಟು ಗಂಡಹೆಂಡಿರ ಮಧ್ಯೆ ಫಿಟ್ಟಿಂಗ್ ಇಟ್ಟು ಕ್ರಮೇಣ ಹೆಂಡತಿಯನ್ನು ಬದಿಗೊತ್ತಿ ತಾನು ಆ ಜಾಗಕ್ಕೆ ಲಗ್ಗೆಯಿಡುವುದು ಈಕೆಯ ಹೀನಾಚಾಳಿ. ಈ ರೀತಿ ತನ್ನ ಗೆಳತಿಯರ ಗಂಡಂದಿರನ್ನೇ ಪಟಾಯಿಸಿ ವಂಚಿಸುವ ಶಿಲ್ಪಾ ಉರ್ಫ್ ಸವಿತಾ ಸದ್ಯ ಲೆಹರ್ ಸಿಂಗ್‌ನ ಪುತ್ರ ದೀಪಕ್‌ನ ಪ್ರೇಯಸಿಯೆಂದೇ ಪೊಲೀಸ್ ವಲಯದಲ್ಲಿ ಚಾಲ್ತಿಯಲ್ಲಿದ್ದಾಳೆ. ಪಾಪ, ಪೊಲೀಸರು ತಾನೇ ಹೇಗೆ ನೊಂದ ಹೆಣ್ಣುಮಕ್ಕಳ ಪರವಹಿಸಿ ಈಕೆಯಿಂದ ಅವರ ಗಂಡಂದಿರನ್ನು ಬಚಾವು ಮಾಡಲು ಸಾಧ್ಯ?


ಲೆಹರ್

ಸದ್ಯ ಉದಯಾ ಟೀವಿಯಲ್ಲಿ ಪ್ರಸಾರವಾಗುವ 'ರಂಗೋಲಿ' ಎಂಬ ಧಾರಾವಾಹಿಯಲ್ಲಿ ಈಕೆ ಹಿಂದೊಮ್ಮೆ ವ್ಯಾಂಪ್ ಪಾತ್ರ ಮಾಡಿದ್ದಳು. ಇತ್ತೀಚೆಗಷ್ಟೇ ತೆರೆಕಂಡ ಕುಮಾರ್ ಗೋವಿಂದ್‌ನ 'ಸತ್ಯ' ಎಂಬ ಸಿನಿಮಾದಲ್ಲಿ ಸೆಕೆಂಡ್ ಹೀರೋಯಿನ್ ಪಾತ್ರವನ್ನೂ ಮಾಡಿದ್ದಾಳಂತೆ. ತಾನೊಬ್ಬ ಮಾಡೆಲ್ ಎಂದು ಪೋಜು ಕೊಟ್ಟುಕೊಂಡೇ ತನ್ನ ಚಿತ್ರವಿಚಿತ್ರ ಭಂಗಿಯ ಫೋಟೋಗಳನ್ನೂ ಮೊಬೈಲ್ ನಂಬರುಗಳ ಸಮೇತ ಹಂಚುತ್ತಾ ಹಾವಳಿಯಿಡುತ್ತಿರುವ 'ರಂಗೋಲಿ ಸವಿತಾ'ಳ ಲೇಟೆಸ್ಟ್ ಸಾಹಸಗಳು ಮತ್ತು ಹಿನ್ನೆಲೆ ನಿಜಕ್ಕೂ ಅನಾಹುತಕಾರಿ.

ಮೂಲತಃ ಮಡಿವಾಳ ಪೊಲೀಸ್ ಠಾಣೆಯ ಹೊಸಪಾಳ್ಯದ ಈಕೆ ಶುರುವಿನಲ್ಲಿ ಕಾಂಗ್ರೆಸ್ ಎಮ್ಮೆಲ್ಸಿ ದಯಾನಂದ ರೆಡ್ಡಿಯ ರಿಯಲ್ ಎಸ್ಟೇಟ್ ಅಡ್ಡೆಯಲ್ಲಿ ರಿಸೆಪ್ಷನಿಸ್ಟ್ ಆಗಿದ್ದಳು. ಈಕೆಯ ಚಂಗಲು ಬುದ್ಧಿ ಮತ್ತು ಪಡ್ಡೆ ಹುಡುಗರ ಖಯಾಲಿ ನೋಡಿದ ದಯಾನಂದ ರೆಡ್ಡಿ 'ಅಮ್ಮಾ ತಾಯಿ' ಎಂದು ಕೈಮುಗಿದು ಗೇಟ್ ಪಾಸ್ ಕೊಟ್ಟಿದ್ದಕ್ಕೆ ಕಾರಣನಾದವನು ನಿಖಿಲ್ ಎಂಬ ಗುಜರಾತಿ ಹುಡುಗ. ತಾನೊಬ್ಬ ಸಲಿಂಗ ಕಾಮಿ ಎಂದು ರಾಜಾರೋಷವಾಗೇ ಹೇಳಿಕೊಳ್ಳುತ್ತಿದ್ದ ಆ ಗುಜರಾತಿ ಹುಡುಗನಿಗೆ ಶಿಲ್ಪಾ ಮೂವತ್ತು ಸಾವಿರ ಮುಂಡಾಯಿಸಿದ್ದಳು.


ವೇಶ್ಯಾವಾಟಿಕೆ: ಇಬ್ಬರು ಯುವತಿಯರ ಸೆರೆ

ಬೆಂಗಳೂರು, ಸ. ೧- ವೇಶ್ಯಾವಾಟಿಕೆ ನಡೆಸುತ್ತಿದ್ದ ಮನೆಯ ಮೇಲೆ ದಾಳಿ ನಡೆಸಿರುವ ಸಿಸಿಬಿ ಪೊಲೀಸರು ಇಬ್ಬರು ಯುವತಿಯರನ್ನು ಬಂಧಿಸಿ ಎರಡು [illegible] ಸಾವಿರ ನಗದು ವಶಪಡಿಸಿಕೊಂಡಿರುವ ಘಟನೆ ಜೀವ[illegible] ಬೀಮಾನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಏರ್‌ಪೋರ್ಟ್ ರಸ್ತೆಯ ಮುರುಗೇಶ್‌ಪಾಳ್ಯದ ಎನ್.ಆರ್. ಕಾಲೋನಿಯ ನಿವಾಸಿಗಳಾದ ಮೀನಾಕ್ಷಿ ಅಲಿಯಾಸ್ ಮೀನಾ (33) ಹಾಗೂ ಶಿಲ್ಪ ಅಲಿಯಾಸ್ ಸವಿತಾ ಎಂಬುವರನ್ನು ಬಂಧಿಸಲಾಗಿದೆ.

ಖಚಿತ ವರ್ತಮಾನದ ಮೇಲೆ ಸಿಸಿಬಿಯ ಮಹಿಳೆ ಮತ್ತು ಮಾದಕ ದ್ರವ್ಯದ ಅಧಿಕಾರಿಗಳು ಮತ್ತು ಸಿಬ್ಬಂದಿ ವೇಶ್ಯಾವಾಟಿಕೆ ನಡೆಸುತ್ತಿದ್ದ ಮೀನಾ ಅವರ ಮೇಲೆ ದಾಳಿ ನಡೆಸಿದ್ದರು.

ಡಿಸಿಪಿ ಬಿ.ಆರ್. ರವಿಕಾಂತೇಗೌಡ ಅವರ ಮಾರ್ಗದರ್ಶನದಲ್ಲಿ ಎಸಿಪಿ ಕೆ.ಎನ್. ಜಿತೇಂದ್ರ ನಾಥ ಅವರ ನೇತೃತ್ವದಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್‌ಗಳಾದ ಜನಾರ್ದನ್, ಪಿ.ಎಸ್. ಗಚ್ಚಿನಕಟ್ಟೆ, ಬಿ.ಜೆ. ಭಂಡಾರಿ, ಶೋಭಾ ಎಸ್. ಕಟ್ಟಾವರ್, [illegible] ಸಿಬ್ಬಂದಿ ದಾಳಿ ನಡೆಸಿತು.


ಸವಿತಾ ಬಗ್ಗೆ ಪತ್ರಿಕೆಯಲ್ಲಿ ಪ್ರಕಟವಾದ ಸುದ್ದಿ...

ಅದೇನು ಯಡವಟ್ಟಾಯಿತೋ; ಸಲಿಂಗ ಗುಜರಾತಿ ಎಮ್ಮೆಲ್ಸಿ ದಯಾನಂದ ರೆಡ್ಡಿಯ ಕಚೇರಿಗೇ ನುಗ್ಗಿ ಶಿಲ್ಪಾಳನ್ನು ಎಳೆದಾಡಿದ್ದ. ಈತನ ವಿರುದ್ಧ ದೂರು ಕೊಡಲೆಂದು ಪೊಲೀಸ್ ಇನ್ಸ್‌ಪೆಕ್ಟರ್ ಒಬ್ಬರ ಮೊರೆ ಹೊಕ್ಕ ಶಿಲ್ಪಾ ಅಲಿಯಾಸ್ ಸವಿತಾ ಅದೇನು ಮೋಡಿ ಮಾಡಿದಳೋ ಆ ಪೊಲೀಸ್ ಇನ್ಸ್‌ಪೆಕ್ಟರ್ ಸಂಸಾರಕ್ಕೇ ಬೆಂಕಿಬಿದ್ದಿತ್ತು. ಇದ್ದ ಹೆಂಡತಿಯ ವಿರುದ್ಧವೇ ಚಾಡಿ ಚುಚ್ಚಿ 'ಆಕೆಯಿಂದ ನಿನಗೆ ಗಂಡು ಮಗು ದಕ್ಕೋಲ್ಲ, ಅದಕ್ಕೇ ನಾನು ಇದ್ದೀನಲ್ಲ?' ಎಂದು ಬತ್ತಿ ಇಟ್ಟಳು. ನಂಬಿದ ಇನ್ಸ್‌ಪೆಕ್ಟರ್ ಹೊಸಪಾಳ್ಯದಲ್ಲಿ ಈಕೆಗೆಂದೇ ಮೂರಂತಸ್ತಿನ ಬಿಲ್ಡಿಂಗ್ ಕಟ್ಟಿಸಿಕೊಟ್ಟ. ಹೊಚ್ಚ ಹೊಸ ವ್ಯಾಗನ್‌ಆರ್ ಗಾಡಿಯನ್ನೂ ಕೊಡಿಸಿದ್ದ. ನಾಲ್ಕು ಗೋಡೆಯ ಮಧ್ಯೆ ತಾಳಿಯನ್ನೂ ಕಟ್ಟಿ ಇದ್ದ ಹೆಂಡ್ತಿಗೆ ಸೋಡ ಚೀಟಿಗೂ ಏರ್ಪಾಡು ಮಾಡಿಕೊಂಡ.

ಇನ್ನೇನು ಗಂಡು ಮಗು ಕೊಡ್ತಾಳೆ ಎಂದು ಭಜನೆ ಮಾಡಿಕೊಂಡಿದ್ದ ಆ ಇನ್ಸ್‌ಪೆಕ್ಟರ್‌ಗೆ ಎಂಥಾ ಶಾಕ್ ಕಾದಿತ್ತೆಂದರೆ; ಇನ್ಸ್‌ಪೆಕ್ಟರ್ ಖಾಕಿ ಡ್ರೆಸ್ಸಿನಲ್ಲಿ ಡ್ಯೂಟಿಗೆ ಹೋಗುತ್ತಿದ್ದಂತೆಯೇ ಆತನೇ ಕಟ್ಟಿಸಿಕೊಂಡಿದ್ದ ಮನೆಯಲ್ಲಿ ದೀಪಕ್ ಸಿಂಗ್ ಪ್ರತ್ಯಕ್ಷನಾಗುತ್ತಿದ್ದ. ತೀರ ತಲೆ ಕೆಡಿಸಿಕೊಂಡು ಆಕೆಯ ಜಾತಕ ಕೆದಕಿದ ಇನ್ಸ್‌ಪೆಕ್ಟರ್‌ಗೆ ಇಂಟರ್‌ನೆಟ್ಟಿನಲ್ಲಿ ತಾನೊಬ್ಬ ಮಾಡೆಲ್ ಎಂದೂ ತಾನು ಇಂಥಿಂಥಾ ಮೊಬೈಲ್ ನಂಬರುಗಳಲ್ಲಿ ಲಭ್ಯ ಎಂದೂ ಶಿಲ್ಪಾ ಪ್ರಕಟಿಸಿಕೊಂಡಿದ್ದ ಚಿತ್ರವಿಚಿತ್ರ ಫೋಟೋಗಳು ಸಿಕ್ಕವು. ಅದೇ ಹೊತ್ತಿಗೆ ಅಂದರೆ 2006 ರ ಅಕ್ಟೋಬರ್ 31 ರಂದು ಹೊಸಪಾಳ್ಯದ ಆಕೆಯ ಮನೆ ಮೇಲೇ ಸಿಸಿಬಿ ಪೊಲೀಸರು ರೇಡು ಬಿದ್ದರು.

ಸಿಸಿಬಿಯ ಮಹಿಳೆ ಮತ್ತು ಮಾದಕ ದ್ರವ್ಯ ಘಟಕದ ಎಸಿಪಿ ಕೆ.ಎನ್. ಜಿತೇಂದ್ರನಾಥ್, ಇನ್ಸ್‌ಪೆಕ್ಟರ್‌ಗಳಾದ ಜನಾರ್ದನ್ ಗಚ್ಚಿನಕಟ್ಟಿ ಮತ್ತು ಶೋಭಾ ಕಟಾವಕರ್ ತಂಡ ರೇಡು ಮಾಡಿ ಶಿಲ್ಪಾ ಉರ್ಫ್ ಸವಿತಾಳ ಜೊತೆ ಮೀನಾ ಎಂಬ ಮತ್ತೊಬ್ಬ ಯುವತಿಯನ್ನೂ ಬಂಧಿಸಿದ್ದರು. ಹೀಗೇ ವೇಶ್ಯಾವಾಟಿಕೆಯ ಆರೋಪ ಹೊತ್ತು ಜೈಲು ಪಾಲಾದ ಮಾಡೆಲ್ ಸವಿತಾಳನ್ನು ನಂಬಿ ಬಿಲ್ಡಿಂಗ್ ಕಟ್ಟಿಸಿಕೊಟ್ಟ ಆ ಪೊಲೀಸ್ ಇನ್ಸ್‌ಪೆಕ್ಟರ್ ತಲೆ ತಲೆ ಚಚ್ಚಿಕೊಂಡ.

ಹೆಚ್ಚೂಕಮ್ಮಿ ಒಂದು ವಾರ ಜೈಲಲ್ಲಿದ್ದ ಸವಿತಾ ಹೊರಬರುವ ಹೊತ್ತಿಗಾಗಲೇ ಒಂದು ಡಜನ್ ಪೊಲೀಸ್ ಅಧಿಕಾರಿಗಳ ಪರಿಚಯ ಗಿಟ್ಟಿಸಿ ಬಿಟ್ಟಿದ್ದಳು. ಆಕೆಯ ಮೊಬೈಲ್ ಫೋನಿನ ಕಾಲ್ ಡೀಟೆಲ್ಸ್ ತೆಗೆಸಿ ನೋಡಿದ ಪೊಲೀಸರಿಗೆ ಗೊತ್ತಾದ ಮತ್ತೊಂದು ಸಂಗತಿಯೆಂದರೆ; ತೀರ ಇತ್ತೀಚೆಗೆ ಮತ್ತೊಬ್ಬ ನಟಿ ಯಮುನಾಳನ್ನು ಶ್ರೀಮಂತ ಗಿರಾಕಿ ಗಳಿಗೆ ಒದಗಿಸಿಕೊಟ್ಟಿದ್ದ ಸುರಕ್ಷಿತ್ ಎಂಬ ಹೈಟೆಕ್ ಸರಬರಾಜುದಾರನೇ ಸವಿತಾಗೂ ಬ್ರೋಕರಿಕೆ ಮಾಡುತ್ತಿದ್ದ!



ಸತೀಶ್‌ರೆಡ್ಡಿ

ಆ ಹೊತ್ತಿಗಾಗಲೇ ಸವಿತಾ 'ರಂಗೋಲಿ' ಧಾರಾವಾಹಿಯಲ್ಲಿ ನಟಿಸಲಾರಂಭಿಸಿದ್ದಳು. ಬೆನ್ನಲ್ಲೇ ಕುಮಾರ್ ಗೋವಿಂದನ 'ಸತ್ಯ' ಎಂಬ ಚಿತ್ರದಲ್ಲಿ ಬಂಡಾಯ ಸಾಹಿತಿ ಕಮ್ ಬರಗೂರು ಶಿಷ್ಯ ಬೆಟಗೇರಿಯ ಜೊತೆ ಡ್ಯುಯೆಟ್ ಕುಣಿಯುವ ಪಾತ್ರವೂ ಸಿಕ್ಕಿತ್ತು. ತಾನೊಬ್ಬ ಸಿನಿಮಾ ನಟಿ ಮತ್ತು ಮಾಡೆಲ್ ಎಂದುಕೊಂಡೇ ಮಾರತಹಳ್ಳಿಯ ಕ್ಲಬ್ ಒಂದರ ಮಾಲೀಕ ಅರವಿಂದ ಎಂಬಾತನ ಜೊತೆ ಬಿದ್ದಳು. ನಿನ್ನನ್ನೇ ಮದುವೆ ಆಗ್ತೀನಿ ಎಂದು ಹತ್ತು ಲಕ್ಷ ಕಿತ್ತಳು. ಅರವಿಂದ್‌ಗೆ ಬುದ್ಧಿ ಬರುವ ಹೊತ್ತಿಗೆ ದುಡ್ಡೂ ಕೈಬಿಟ್ಟಿತ್ತು ಮಾನ ಮೂರಾಬಟ್ಟೆಯಾಗಿತ್ತು. ಇನ್ನೇನು ಅರವಿಂದ್ ಏರ್‌ಪೋರ್ಟ್ ಪೊಲೀಸ್ ಠಾಣೆಗೆ ಹೋಗಿ ಸವಿತಾ ವಿರುದ್ಧ ಚೀಟಿಂಗ್ ಕಂಪ್ಲೇಂಟ್ ಕೊಡಬೇಕೆನ್ನುವಷ್ಟರಲ್ಲಿ ಸವಿತಾ ಕೆ.ಆರ್. ಪುರಂನ ಬಿಜೆಪಿ ಶಾಸಕ ನಂದೀಶ್‌ರೆಡ್ಡಿಯ ಶಿಷ್ಯರನ್ನು ಜೊತೆ ಹಾಕಿಕೊಂಡು ಪೊಲೀಸ್ ಠಾಣೆಗೇ ನುಗ್ಗಿ ರಂಪ ಮಾಡಿಬಿಟ್ಟಳು.

ಶಾಸಕ ನಂದೀಶ್ ರೆಡ್ಡಿಯ ಶಿಷ್ಯರಷ್ಟೇ ಅಲ್ಲ, ಬೊಮ್ಮನಹಳ್ಳಿಯ ಮತ್ತೊಬ್ಬ ಬಿಜೆಪಿ ಶಾಸಕ ಸತೀಶ್ ರೆಡ್ಡಿಯ ಛೇಲಾ ಓರ್ವ ಕೂಡ ಸವಿತಾಳ ಜೊತೆ ಡ್ಯುಯೆಟ್ ಶುರುಹಚ್ಚಿಕೊಂಡಿದ್ದ. ಅದೇ ಹೊತ್ತಿಗೆ ಈಕೆಯ ಬುಟ್ಟಿಗೆ ಬಿದ್ದ ಮತ್ತೊಂದು ಮಿಕವೇ ಲಂಡನ್ ಮೂಲದ ಸಪ್ನಾ ಎಂಬಾಕೆಯ ಗಂಡ ನಿತಿನ್. ಪಾರ್ಟಿಯೊಂದರಲ್ಲಿ ಪತ್ನಿಯ ಜೊತೆಗಿದ್ದ ನಿತಿನ್‌ನ[...] ಮೇಲೆಬಿದ್ದು ಪರಿಚಯಿಸಿಕೊಂಡ ಸವಿತಾ ಎಂಥ[...] ಹುಳಿಹಿಂಡಿದಳೆಂದರೆ; ನಿನ್ನ ಹೆಂಡತಿಗೊಬ್ಬ[...] ಬಾಯ್‌ಫ್ರೆಂಡ್ ಇದ್ದಾನೆ, ಇಬ್ಬರೂ ಒಟ್ಟಿಗೆ[...] ಇರೋದನ್ನ ನಾನೇ ಕಣ್ಣಾರೆ ನೋಡ್ದೆ ಎಂದು ಬ[...] ಇಟ್ಟಳು. ಸವಿತಾಳ ಜಾತಕ ಗೊತ್ತಿಲ್ಲದ ನಿತಿನ[...] ಆಕೆ ಹೇಳಿದ್ದನ್ನೇ ಸತ್ಯ ಎಂದು ಭ್ರಮಿಸಿದ್ದೇ ಸಪ್ನಾ[...] ಪಾಸ್‌ಪೋರ್ಟ್ ಸಮೇತ ಪರಾರಿಯಾದ. ವಾಪ[...] ಲಂಡನ್ನಿಗೆ ಹೋಗಲಾಗದೆ ಬೆಂಗಳೂರಿನಲ್ಲೂ[...] ಇರಲಾಗದೆ, ಅಂತರಪಿಶಾಚಿಯಂತಾದ ಸಪ[...] ಕಮೀಷನರ್ ಬಿದರಿ, ಜಂಟಿ ಪೊಲೀಸ್ ಕಮೀ[...] ನರ್ ಆಲೋಕ್‌ಕುಮಾರ್‌ರನ್ನು ಕಂಡು ಕಣ್ಣೀ[...] ಟ್ಟಳು.

ತನ್ನ ಸಂಸಾರವನ್ನೇ ಹಾಳು ಮಾಡಿದ ಸವಿತಾ[...] ವಿರುದ್ಧ ಎಲ್ಲೆಂದರಲ್ಲಿ ದೂರು ಕೊಡಲಾರಂಭಿಸಿದ್ದಾ[...] ಸಪ್ನಾ, ಆಕೆಯ ಮನೆಗೇ ನುಗ್ಗಿದ ಸವಿತಾ ಇಲ್ಲಿ[...] 15 ದಿನಗಳ ಹಿಂದೆ ತನ್ನ ರೌಡಿ ಗ್ಯಾಂಗ್ ಛೂಬಿಟ್ಟು[...] ಆಕೆಯ ಮೇಲೆ ಹಲ್ಲೆ ನಡೆಸಿದ್ದಾಳೆ. ಹರಿ[...] ಬಟ್ಟೆಯಲ್ಲೇ ಮಹದೇವಪುರ ಪೊಲೀಸ್ ಠಾಣೆ[...] ಬಂದು ಸಪ್ನಾ ದೂರು ಕೊಟ್ಟರೆ ಸವಿತಾಳ ಬೆಂಬಲಕ್ಕೆ ನಿಂತವನು ಲೆಹರ್ ಸಿಂಗ್ ಪುತ್ರ ದೀಪಕ್!

ಇದೇ ಸಪ್ನಾಳ ಗೆಳತಿ ಉಷಾ (ಹೆಸರು ಬದಲಿಸಿದೆ) ಎಂಬಾಕೆಯ[...] ಗಂಡನನ್ನೂ ಸವಿತಾ ಸುಮ್ಮನೇ ಬಿಡಲಿಲ್ಲ. ಸಪ್ನಾಳ ಮೂಲಕವೇ ಸವಿತಾ[...] ಉಷಾ ಪರಿಚಯವಾಗಿತ್ತು. ಉಷಾಳ ಗಂಡ ರಾಜೇಶ್ (ಹೆಸರು ಬದಲಿಸಿದೆ[...] ಸಾಫ್ಟ್‌ವೇರ್ ಇಂಜಿನಿಯರ್. ಅದೇನು ಮಂಕುಬೂದಿ ಎರಚಿದಳೋ[...] ಪರಿಚಯವಾದ ಎರಡೇ ತಿಂಗಳಿಗೆ ಕೈಹಿಡಿದಾಕೆಗೆ ಕೈಕೊಟ್ಟ ರಾಜೇಶ್ ತ[...] ಪತ್ನಿಯ ಗೆಳತಿ ಸವಿತಾಳೊಡನೆ 'ಲಿವಿಂಗ್ ಟುಗೆದರ್' ಶುರು ಹಚ್ಚಿಕೊಂಡಿದ್ದ[...] ಸಪ್ನಾ ಮೂಲಕ ಹೇಗೋ ಸವಿತಾಳ ಮನೆ ಪತ್ತೆಹಚ್ಚಿದ ಉಷಾ ನೇ[...] ಮನೆಬಾಗಿಲಿಗೇ ಬಂದು ಅರೆನಗ್ನನಾಗಿದ್ದ ತನ್ನ ಗಂಡನ ಜುಟ್ಟಿಗೆ ಕೈಹಾಕಿದರ[...] ಆಕೆಯ ಗಂಡನೇ ಸವಿತಾಳ ಜೊತೆ ಸೇರಿಕೊಂಡು ಉಷಾಳನ್ನು ಅಟ್ಟಾಡಿಸಿ[...] ಹೊಡೆದುಬಿಟ್ಟ. ಪಾಪ, ಕಣ್ಣೀರಿಡುತ್ತ[...] ಮಡಿವಾಳ ಪೊಲೀಸ್ ಠಾಣೆಗೆ ಬಂದ[...] ಉಷಾ ಇನ್ಸ್‌ಪೆಕ್ಟರ್ ಪುರುಷೋತ್ತಮ್[...] ಕಾಲಿಗೆ ಬಿದ್ದು ತನ್ನ ಗಂಡನನ್ನು ಬಿಡಿ[...] ಕೊಡುವಂತೆ ಗೋಳಾಡಿದ್ದಾಳೆ. ಇನ್ಸ್‌ಪೆಕ್ಟರ್[...] ಪುರುಷೋತ್ತಮ್ ತಾನೇ ಏನು ಮಾಡಲು[...] ಸಾಧ್ಯ? ಸವಿತಾಳ ಪರವಹಿಸಿ ಅತ್ತಲಿಂದ[...] ಲೆಹರ್ ಸಿಂಗ್ ಪುತ್ರನ ಫೋನಾ ದ[...] ಇತ್ತಲಿಂದ ಶಾಸಕ ಸತೀಶ್ ರೆಡ್ಡಿಯ ಬಂಟ[...] ಧಮಕಿ!


ನಂದೀಶ್ ರೆಡ್ಡಿ

ಕೊನೆಗೆ ಹಿರಿಯ ಪೊಲೀಸ್ ಅಧಿಕಾರಿ[...] ಆಲೋಕ್‌ಕುಮಾರ್ ಮುಂದೆ ನಿಂತು ಉಷಾ ಗೋಳಾಡಿದ್ದಾಳೆ. ತನ್ನ ಗಂಡನನ್ನು[...] ಬಿಡಿಸಿಕೊಡಿ ಎಂದು ಕಮೀಷನರ್ ಬಿದರಿಗೂ ದೂರಿತ್ತಿದ್ದಾಳೆ. ಮರುದಿ[...] ಆಲೋಕ್‌ಕುಮಾರ್ 'ಕೇಸ್ ಹಾಕ್ರೀ...' ಎಂದು ಮಡಿವಾಳ ಪೊಲೀಸರನ್ನು[...] ದಬಾಯಿಸಿದ್ದಾರಂತೆ. ಪಾಪ ಪೊಲೀಸರದ್ದು ಅಸಹಾಯಕತೆಯೋ, ಅನಿವಾರ್ಯ[...] ಕರ್ಮವೋ ಯಾರಿಗೆ ಗೊತ್ತು? ಈ ರೀತಿ ಅದೆಷ್ಟು ಸಂಸಾರಗಳಿ[...] ಸವಿತಾ ಬೆಂಕಿ ಹಚ್ಚಿರಬಹುದು?

ಒಂದಲ್ಲ ಮೂರು ಬಾರಿ ಜೈಲಿಗೆ ಹೋಗಿ ಬಂದ ನಂತರವೂ ತಾನೊ[...] ನಟಿಯೆಂದು, ಮಾಡೆಲ್ ಸುಂದರಿಯೆಂದು ಕಂಡಕಂಡ ಮನೆ ಮುರಿಯುತ್ತಿರು[...] ಸವಿತಾಳ ಹಾವಳಿಗೆ ಪೊಲೀಸರು ಕೂಡ ಮೂಕಪ್ರೇಕ್ಷಕರಾದರೆ ಏನರ್ಥ?

• ರಾ.ಸೋ[...]

ನಟಿ ಯಮುನಾಳನ್ನು ಪೊಲೀಸರಿಗೆ ಹಿಡಕೊಟ್ಟಿದ್ದು ಯಾರು?

ಇತ್ತೀಚೆಗೆ ನಟಿ ಯಮುನಾಳನ್ನು ಸಾಫ್ಟ್‌ವೇರ್ ಕುಬೇರನೊಬ್ಬನ ಜೊತೆ ಬೆಂಗಳೂರಿನ ಐಷಾರಾಮಿ ಹೋಟೆಲೊಂದರಲ್ಲಿ ಸಿಸಿಬಿ ಪೊಲೀಸರು ಹಿಡಿದು ಹಾಕಿದ್ದು ಸಣ್ಣ ಸುದ್ದಿಯೇನಲ್ಲ. ಯಮುನಾಳಂಥ ಸೋಕಾಲ್ಡ್ ಹೀರೋಯಿನ್ನನ್ನೇ ಸಿಸಿಬಿ ಪೊಲೀಸರು ಬಲೆಗೆ ಬೀಳುವಂತೆ ಮಾಡಿದ್ದು ಇದೇ 'ರಂಗೋಲಿ ಸವಿತಾ' ಅರ್ಥಾತ್ ಶಿಲ್ಪಾ!



ಅದು ವೃತ್ತಿ ವೈಷಮ್ಯವೂ ಹೌದು ಬಿಜಿನೆಸ್ ಪೈಪೋಟಿಯೂ ಹೌದು. ನಿನ್ನೆ ಮೊನ್ನೆಯ ತನಕ ಸವಿತಾಳನ್ನು ಮುಂದಿಟ್ಟುಕೊಂಡೇ ಹೈಟೆಕ್ ಬ್ರೋಕರ್ ಸುರಕ್ಷಿತ್ ವ್ಯವಹಾರ ನಡೆಸುತ್ತಿದ್ದ. ಐಟಿ-ಬಿಟಿ ವಲಯದ ರೊಕ್ಕಸ್ಥ ರಸಿಕರ ಸಾಕಷ್ಟು ಸಂಪರ್ಕವಿದ್ದ ಸುರಕ್ಷಿತ್ ಇತ್ತೀಚೆಗೆ ಸವಿತಾಳನ್ನು ಕೈಬಿಟ್ಟು ಹೊಸ ಹೀರೋಯಿನ್ ಯಮುನಾಗೆ ಗಿರಾಕಿಗಳನ್ನೊದಗಿಸಲಾರಂಭಿಸಿದ್ದ. ಬರುತ್ತಿದ್ದ ಸೈಡ್ ಇನ್‌ಕಮ್ ತಪ್ಪಿದ್ದರಿಂದಾಗಿ ಸಹಜವಾಗೇ ಸವಿತಾಗೆ ಸುರಕ್ಷಿತ್ ಮೇಲೆ ಮತ್ಸರ ಹೆಡೆಯೆತ್ತಿತ್ತು. ಮೊದಲೇ ಇದ್ದ ಪೊಲೀಸ್ ಲಿಂಕ್ ಬಳಸಿಕೊಂಡು ಹೈಟೆಕ್ ಬ್ರೋಕರ್ ಸುರಕ್ಷಿತ್ ಬಗ್ಗೆ ಮಾಹಿತಿ ಕೊಟ್ಟಿದ್ದಾಳೆ. ಆತನ ಮೊಬೈಲ್ ನಂಬರ್, ಇ-ಮೇಲ್ ವೈಬ್‌ಸೈಟಿನ ವಿವರಗಳನ್ನೂ ಒದಗಿಸಿದ್ದಾಳೆ. ಹೊಂಚು ಹಾಕಿದ ಪೊಲೀಸರ ಬಲೆಗೆ ಸಾಫ್ಟ್‌ವೇರ್ ಕಂಪೆನಿಯೊಂದರ ಮಾಲೀಕನೇ ಸಿಕ್ಕಿಬಿದ್ದಿದ್ದ. ಜೊತೆಗೆ ಉದಯೋನ್ಮುಖ ನಟಿ ಯಮುನಾಳ ಬದುಕೇ ಮೂರಾಬಟ್ಟೆಯಾಗಿತ್ತು. ಸವಿತಾಳಂಥ ದುಷ್ಟ ಹೆಂಗಸು ತಾನು ಕೆಟ್ಟಿದ್ದಷ್ಟೇ ಅಲ್ಲ, ಪೊಲೀಸರಿಗೂ ಮಾಹಿತಿ ಕೊಡುತ್ತಾಳೆ. ಅದೇ ಪೊಲೀಸರನ್ನು ಬಳಸಿ ತನ್ನ ಸ್ವಾರ್ಥವನ್ನೂ ಸಾಧಿಸುತ್ತಾಳೆ.

Statement about ownership and other particulars of '**Ranjane Bodhane Prachodane Lankesh**' Weekly, Bangalore as required under Rule 8 of the Registration of Newspapers (Central) Rule, 1956.

FROM - IV

(See Rule 8)

1. Place of Publication : Bangalore
2. Periodicity of Publication : Weekly
3. Printer's Name : Gauri Lankesh
   Whether Citizen of India : Yes
   Address : No. 9, E.A.T. Street, Basavanagudi, Bangalore-560 004.
4. Publisher's Name : Gauri Lankesh
   Whether Citizen of India : Yes
   Address : No. 9, E.A.T. Street, Basavanagudi, Bangalore-560 004.
5. Editor's Name : Gauri Lankesh
   Whether Citizen of India : Yes
   Address : No. 9, E.A.T. Street, Basavanagudi, Bangalore-560 004.

I, Gauri Lankesh, hereby declare that the particulars given above are true to the best of my knowledge and belief.


Date : 8.3.2011

Sd/-
GAURI LANKESH

ಟಿವಿ ನಟಿಯರಿಗೆ ಪಿಂಪ್‌ಗಳ ಕಾಟ!

ಮುಶಃ ಕಿರುತೆರೆ ಪ್ರೇಕ್ಷಕರಿಗಿದು ಅರಗಿಸಿಕೊಳ್ಳಲು ಕಷ್ಟವಾಗುವಂಥ ಸತ್ಯ. ಈ ದಂಧೆಯ ಜಾಡು ಹಿಡಿದು ಹೊರಟ ಮುಗೆದುರಾದ ದಂಡಿ ದಂಡಿ ಮಾಹಿತಿಯನ್ನು ಕಂಡು ನಮ್ಮದೂ ಅದೇ ಸ್ಥಿತಿಯಾಗಿತ್ತು. ಆದರೆ ಒಂದಂತೂ ಸತ್ಯ. ವೇಶ್ಯಾವಾಟಿಕೆಯೆಂಬುದು ಕಿರುತೆರೆಯನ್ನೇ ನಂಬಿ ಉದ್ಯಮವಾಗಿ ಬೆಳೆದುಬಿಟ್ಟಿದೆ. ಇದನ್ನೇ ಬಂಡವಾಳವಾಗಿಸಿಕೊಂಡು ಹಲವಾರು ಪಿಂಪ್‌ಗಳು ಹುಟ್ಟಿಕೊಂಡಿದ್ದಾರೆ. ದಿಢೀರ್ ದುಡ್ಡಿನ ಆಸೆಗೆ ಬಿದ್ದ ನಟಿಯರು ಗಣಿ ಮಾಫಿಯಾಗಳಂಥ ವಲಿಗೂ ಆಹಾರವಾಗುತ್ತಿದ್ದಾರೆ. ನಟನೆಯನ್ನೇ ದೇವರೆಂದುಕೊಂಡ ನಟಿಯರು ಈಗಲೂ ಇರುವುದು ಸತ್ಯ. ಆದರೆ ದಂಧೆಕೋರ ನಟಿಯರ ಆರ್ಭಟ ಅದೆಲ್ಲವನ್ನೂ ಮೀರಿಸಿದೆ....

ಕನ್ನಡ ಕಿರುತೆರೆಯು ಹಲವು ಚುಲ್ಬುಲ್ ನಟಿಯರ ...ಲೋದ್ಯಮಕ್ಕೆ ಹೆದ್ದಾರಿಯನ್ನು ನಿರ್ಮಿಸಿದೆಯೇ? ಈ ...ಯಾಕೆಂದರೆ ಯಾವುದೋ ಕಿತ್ತು ಹೋದ ಸೀರಿಯಲ್ಲು ...ಪೆದ್ದ ಟಿವಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಹಲವು ...ರು ಇವತ್ತು ದೊಡ್ಡ ವೇಶ್ಯಾ ಜಾಲದ ಭಾಗವಾಗಿದ್ದಾರೆ. ...ಜಾಲದಲ್ಲಿ ಹೆಣ್ಣುಮಕ್ಕಳನ್ನು ವ್ಯಾಪಾರಕ್ಕಿಟ್ಟಿರುವ ...ಡುಕರು, ಹುಡುಗಿಯರನ್ನು ಹಿಡಿಹಿಡಿಯಾಗಿ ಮುಕ್ಕುವ ...ವಂತ ಉದ್ಯಮಿಗಳು, ರಾಜಕಾರಣಿಗಳು, ಚಪರಾಸಿಗಳು, ...ಮೇಲರ್‌ಗಳು... ಎಲ್ಲರೂ ಇದ್ದಾರೆ. ಹೇಸಿಗೆ ಹುಟ್ಟಿ ...ಷ್ಟರ ಮಟ್ಟಿಗೆ ಬೆಳೆದುನಿಂತಿರುವ ಈ ವಹಿಂವಾಟನಲ್ಲಿರುವ ...ಳೆಯರು ಕಿರುತೆರೆಯಲ್ಲಿ ಗಳಿಸುವುದಕ್ಕಿಂತ ದುಪ್ಪಟ್ಟು ...ವನ್ನು ಗಳಿಸುತ್ತಿದ್ದಾರೆ ಎಂದರೆ ...ರ್ಯವಾದರೂ ನಂಬಲೇಬೇಕು.



...'ನಟಿಯಾಗಲೇಬೇಕು' ಎಂಬು ...ಂದೇ ಉದ್ದೇಶದಿಂದ ಬಂದ ...ಹುಡುಗಿಯರನ್ನು ಮೊಟ್ಟಮೊದಲು ... ತಪ್ಪಿಸುವುದು 'ಆರ್ಟಿಸ್ಟ್ ಕೋ ...ನೇಟರ್'ಗಳೆಂಬ ತಲೆಹಿಡುಕರು. ...ಕು ಆರ್ಟಿಸ್ಟ್ ಕೋ ಆರ್ಡಿ...ರ್ ಎಂದು ಬೋರ್ಡು ಹಾಕಿ...ಡಿರುವ ಸಿನಿಮಾ ಮತ್ತು ...ತೆರೆಯೊಂದಿಗೆ ಸಂಪರ್ಕ ಹೊಂದಿ..., ಆಗಾಗ ಕಿರುತೆರೆ ಮತ್ತು ...ತೆರೆಗೆ ನಟನಟಿಯರನ್ನು ಸರಬ...ಜು ಮಾಡುವ ಪ್ರತಾಪ್, ...ೇಂದ್ರ, ಸತೀಶ್ ಮುಂತಾದವರು ... ಆರ್ಡಿನೇಟರ್ ಕೆಲಸಕ್ಕಿಂತ ...ಗಿ ತಮ್ಮನ್ನು ತೊಡಗಿಸಿಕೊಂಡಿರುವುದು ಈ 'ಮಾಮಾ' ...ದಲ್ಲೇ. ಇಂತಹ ಮಾಮಾಗಳನ್ನು ನಂಬಿದ ...ಹುಡುಗಿಯರು ಒಮ್ಮೆ ಹಾದಿ ತಪ್ಪಿದರೆಂದರೆ ಅವರ ಕತೆ ...ಗಿದಂತೆಯೇ. ಅನಂತರ ಅವರೆಂದೂ ಆ ...ವರ್ತುಲದಿಂದ ಬಿಡಿಸಿಕೊಳ್ಳುವುದು ಅಸಾಧ್ಯವಾಗುತ್ತದೆ.

ಈ ಮಾಮಾಗಳು ಅವಕಾಶ ಅರಸಿ ತಮ್ಮಲ್ಲಿಗೆ ಬಂದ ...ವರವಾದ ಹೆಣ್ಣುಮಕ್ಕಳನ್ನು ದಾರಿ ತಪ್ಪಿಸಿ ಅವರ ...ಟೋಗಳನ್ನು ತಮ್ಮ ಲ್ಯಾಪ್ ಟ್ಯಾಪುಗಳಲ್ಲಿ ಲೋಡ್ ...ಿಕೊಂಡು ಇಂಟರ್‌ನೆಟ್ಟು, ಈಮೇಲುಗಳ ಮೂಲಕ ...ಕೇಷನ್ ಕೊಟ್ಟು ವ್ಯಾಪಾರ ಕುದುರಿಸುವುದನ್ನೇ ...ವಾಗಿಸಿಕೊಂಡಿದ್ದಾರೆ. ಮನೋಜ್ ಮತ್ತು ಯತೀಶ್ ... ಬ್ರೋಕರ್‌ಗಳಂತೂ ಹುಡುಗಿಯರ ಫೋಟೋ, ...ರ ಉದ್ದ, ಅಳತೆ ಪ್ರತಿಯೊಂದರ ವಿವರವನ್ನೂ ...ಮೇಲ್‌ನಲ್ಲೇ ನೀಡಿ ಗಿರಾಕಿಗಳನ್ನು ಹೊಂದಿಸುತ್ತಾರೆ. ... ಕಾನಿಷ್ಕಾದ ನೆಲ ಮಹಡಿಯಲ್ಲೇ ಕುಳಿತು ದಶಕಗಳಿಂದ ...ನೆಸ್ಸು ಕುದುರಿಸುತ್ತಿರುವವನು ಬಾಬು ಎಂಬಾತ. ತಾನು ...ಕೆಲಿಂಗ್ ಏಜೆನ್ಸಿಯೊಂದನ್ನು ನಡೆಸುತ್ತೇನೆ, ರ್‍ಯಾಂಪ್ ... ನಡೆಸುತ್ತೇನೆ, ಸಿನಿಮಾ ಸೀರಿಯಲ್ಲುಗಳಲ್ಲಿ ಛಾನ್ಸು ...ಸುತ್ತೇನೆ ಎಂದು ಅಮಾಯಕ ಹೆಣ್ಣು ಮಕ್ಕಳಲ್ಲಿ ಆಸೆ ...ಟ್ಟಿಸಿ ಅವರನ್ನು ಸೀದಾ ತನ್ನ ಮಂಚಕ್ಕೇರಿಸಿಕೊಳ್ಳುತ್ತಾನೆ. ...ೇಂದ್ರ ಎಂಬ ಮತ್ತೊಂದು 'ಪ್ರತಿಭೆ' ಧಾರಾವಾಹಿ ...ಯರಿಗೆ ಸಿನಿಮಾದಲ್ಲಿ ಚಾನ್ಸು ಕೊಡಿಸುತ್ತೇನೆಂದು ಹೇಳಿ ...ನನ್ನು ಮಾಗಡಿ ರಸ್ತೆಯ 'ಸೃಷ್ಟಿ' ಲಾಡ್ಜಿಗೆ ಕರೆದೊಯ್ದು ... ಹಿಪ್ಪೆ ಮಾಡಿ ಕಳುಹಿಸುತ್ತಾನೆ. ಹಾಗೆಯೇ ಚಂದ್ರು ...ದ ಬಹಳಷ್ಟು ಫೋರ್‌ಟ್ವೆಂಟಿಗಳು ನಟಿಯರನ್ನು ..., ಮಾಡುವುದನ್ನೇ ಫುಲ್‌ಟೈಂ ಬಿಜಿನೆಸ್ ...ಡಿಕೊಂಡಿದ್ದಾರೆ. ಜೊತೆಗೆ ಟಿವಿ ನಟಿಯರನ್ನು ...ದವರಿಗೆ ಸಪ್ಲೈ ಮಾಡುವ ಆಂಟಿಯರ ದೊಡ್ಡ ...ವರ್ಕ್ ಬೆಂಗಳೂರಿನಲ್ಲಿ ಬೇರೂರಿದೆ. ಪ್ರೀತಿ, ...ಕಾರಣಿಯೊಬ್ಬನ 'ಚಿನ್ನವೀಡು' ಚಂದ್ರಮತಿ, ...ಂತ್ರಿನಗರದ ಶಶಿಕಲಾ, ಜಯನಗರದ ಸಂಧ್ಯಾ ಸೇರಿದಂತೆ ..., ಅನೇಕ ಆಂಟಿಯರು ಇವತ್ತು ಅಂಗಡಿ ತೆರೆದು ...ರ ನಡೆಸುತ್ತಿದ್ದಾರೆ.

...ತಾನು ಭೂಗತ ಡಾನ್ ಒಬ್ಬನ ಸಹೋದರ ಎಂದು ...ಕೊಳ್ಳುವ ಚಂದ್ರಶೇಖರ್ ಎಂಬ ಕೋತಿವಾಲಸದ್ದೇ ...ಂದು ಕತೆ. ಟಿವಿ ನಟಿಯರಿಗೆಂದೇ ಈತ ಸದಾಶಿವ ...ದಲ್ಲಿನ ಅಪಾರ್ಟ್‌ಮೆಂಟ್ ಕಾಂಪ್ಲೆಕ್ಸ್‌ನಲ್ಲಿ ಒಂದು ...ನ್ನು ಇಟ್ಟುಕೊಂಡಿದ್ದಾನೆ. ಈ ಫ್ಲ್ಯಾಟಿಗೆ ದಿನಕ್ಕೆ ಕನಿಷ್ಠ ಇಬ್ಬರು ನಟಿಯರು ಎಡತಾಕಿ ಬರುತ್ತಿರುತ್ತಾರೆ. ಸದರಿ ಚಂದ್ರಶೇಖರ ಒಂದು ವಿಸಿಟ್‌ಗೆ ಓರ್ವ ಹುಡುಗಿಗೆ ಮೂವತ್ತರಿಂದ ನಲವತ್ತು ಸಾವಿರ ರೂಪಾಯಿ ದೇಣಿಗೆ ನೀಡುತ್ತಾನಂತೆ. ಈತನಿಗೆ ಇಷ್ಟೊಂದು ದುಡ್ಡು ಅದೆಲ್ಲಿಂದ ಬರುತ್ತೋ ಆ ಉಡುಪಿ ಕೃಷ್ಣಪರಮಾತ್ಮನಿಗೇ ಗೊತ್ತು.

ಗಣಿ ಒಳಗೆ ರಿಂಗರಿಂಗಾ!

ಬಳ್ಳಾರಿಯ ಧಣಿಗಳಂತೂ ಅಲ್ಲಿನ ಮಣ್ಣು ಕೆರೆದು ಲಾರಿಗೆ ತುಂಬಿಕೊಂಡಷ್ಟೇ ಸುಲಭವಾಗಿ ಬೆಂಗಳೂರಿನಿಂದ ಲಾಟು ಲಾಟು ಕಿರುತೆರೆ ನಟಿಯರನ್ನು ಬಳ್ಳಾರಿಗೆ ಕೊಂಡೊಯ್ದು ಅವರನ್ನು ಮನಸೋ ಇಚ್ಛೆ ಮುಕ್ಕುತ್ತಾರೆ. ರಾಜು ಎಂಬ ಬಸವೇಶ್ವರ ನಗರದ ಖದೀಮನೇ ಬಳ್ಳಾರಿಯಲ್ಲಿ ನಂಗಾನಾಚ್ ಕಾರ್ಯಕ್ರಮಗಳನ್ನು ಏರ್ಪಾಡು ಮಾಡುವವನು.

ಬಳ್ಳಾರಿಗೆ ಸಿನಿಮಾ ಕಲಾ ನಿರ್ದೇಶಕರನ್ನೇ ಕರೆದೊಯ್ಯುವ ರಾಜು ಅಲ್ಲಿನ ಧಣಿಗಳಿಗೆಂದೇ ತರಹೇವಾರಿ ಆಡಂಬರದ ಸೆಟ್‌ಗಳನ್ನು ಸೃಷ್ಟಿಸುತ್ತಾನೆ. ಥೇಟು ಸಿನಿಮೀಯ ಶೈಲಿಯಲ್ಲಿ ನಡೆಯುವ ಆ ಸಮಾರಂಭಕ್ಕೆ ರಾಜಕಾರಣಿಗಳು, ರೌಡಿಗಳು, ಸರ್ಕಾರಿ ಅಧಿಕಾರಿಗಳನ್ನು ಹೊರತುಪಡಿಸಿ ಸೊಳ್ಳೆ ನೊಣಗಳಿಗೂ ಪ್ರವೇಶವಿರುವುದಿಲ್ಲ, ಅಂಥಾ ಬಿಗಿ ಬಂದೋಬಸ್ತು ಇರುತ್ತದೆ. ಸುಮಾರು ತಿಂಗಳಿಗೊಮ್ಮೆ ನಡೆಯುವ ಇಂಥ ಸಮಾರಂಭದಲ್ಲಿ ಬೆಂಗಳೂರಿನಿಂದ ಗುಪ್ತವಾಗಿ ಕರೆದೊಯ್ದ ರಾಶಿ ರಾಶಿ ಟಿವಿ ನಟಿಯರು, ಸಿನಿಮಾಗಳಲ್ಲಿನ ಸೆಕೆಂಡ್ ಲೆವೆಲ್ ಹೀರೋಯಿನ್‌ಗಳಾದವರು ಅರೆಬರೆ ಬಟ್ಟೆ ತೊಟ್ಟು ತೆಲುಗು ಹಾಡುಗಳಿಗೆ ಐಟಂ ಸಾಂಗು ಮಾಡಬೇಕಂತೆ. ಅಲ್ಲಿಗೆ ಬಳ್ಳಾರಿಯ ಒಬ್ಬೊಬ್ಬ ಧಣಿಯೂ ಕೃಷ್ಣ ದೇವರಾಯನ ಪೋಷಾಕಿನಲ್ಲೋ, ತೆಲುಗು ಹೀರೋಗಳ ಲುಕ್ಕಿನಲ್ಲೋ, ಮತ್ತಿನ್ಯಾವುದೊ ಗೆಟಪ್ಪಿನಲ್ಲೋ ಹಾಜರಾಗುತ್ತಾರಂತೆ. ಪೀಪಾಯಿಗಟ್ಟಲೆ ಕುಡಿದು ಚಿತ್ತಾಗುವ ಧಣಿಗಳು ರಾತ್ರಿಯಿಡೀ ರಿಂಗಾರಿಂಗಾರಿಂಗಾ ಸ್ಟೆಪ್ಪು ಹಾಕಿ ಮಜಾ ಮಾಡುತ್ತಾರಂತೆ. ಬಳ್ಳಾರಿ ಧಣಿಗಳ ಇಂತಹ ತೆವಲಿಗೆ ಬಲಿಯಾದ ಬೆಂಗಳೂರಿನ ಹಲವು ಕಿರುತೆರೆ ನಟಿಯರು ಇಂದು ಧೂಳೆದ್ದು ಕೂತಿದ್ದಾರೆ ಎಂದರೆ ತಪ್ಪಾಗಲಾರದು. ಇಂಥ ಒಂದು ದಿನದ ಸಮಾರಂಭಕ್ಕೆ ಹೋಗಿ ಧಣಿಗಳನ್ನು ತೃಪ್ತಗೊಳಿಸಿ ಬಂದ ನಟಿಗೆ ಲಕ್ಷಗಟ್ಟಲೆ ಹಣ ಸಂದಾಯವಾಗುತ್ತದಂತೆ.

ಬ್ಯಾಂಕಾಕ್ ಬುಕಿಂಗ್

ಹಲವು ಟಿವಿ ನಟಿಯರು ಇಂದು ಯಾಪಾಟಿ ಬ್ಯುಸಿ ಆಗಿದ್ದಾರೆಂದರೆ ವೀಕೆಂಡ್‌ಗಳಲ್ಲಿ ಶೂಟಿಂಗ್ ಇಲ್ಲದಿದ್ದರೂ ಅವರ ಕಾಲ್ ಶೀಟ್ ಬುಕ್ ಆಗಿರುತ್ತದೆ. ಅವರೆಲ್ಲ ದುಬಾರಿ ಗೆಸ್ಟ್‌ಹೌಸ್‌ನಿಂದ ಹಿಡಿದು, ಬ್ಯಾಂಕಾಕ್, ಮಲೇಷಿಯಾಗಳಿಗೆ ಪ್ಯಾಕೇಜ್ ಟ್ರಿಪ್ಪು ಹೊರಟು ಬಿಡುತ್ತಾರೆ. ಊಟಿ, ಕೊಡೈಕೆನಾಲ್‌ಗಳಲ್ಲೂ ವಾರಾಂತ್ಯಗಳಲ್ಲಿ ಕನ್ನಡದ ಕಿರುತೆರೆಯ ಕೆಲ ನಟಿಯರು ದಂಡಿಯಾಗಿ ಕಾಣಸಿಗುತ್ತಾರೆ.


ಬೆಂಗಳೂರು ಟು ಬಳ್ಳಾರಿ!

ಉತ್ತರ ಕರ್ನಾಟಕದ ಕೆಲ ರಾಜಕಾರಣಿಗಳು ಮತ್ತು ಅವರ ಬಂಟರಿಗೆ ಇಂತಹ 'ನಟ'ಯರೊಂದಿಗೆ ತಮ್ಮ ದೇಹ ತಂಪು ಮಾಡಿಕೊಳ್ಳುವುದೇ ಮೋಜಿನ ಕಾಯಕವಾಗಿದೆ. ಅಲ್ಲಿನ ಜನರಿಗೂ ಕಿರುತೆರೆ ನಟಿಯರ ಬಗ್ಗೆ ಸಿಕ್ಕಾಪಟ್ಟೆ ಕ್ರೇಜು. ಹೀಗಾಗಿ ಇತ್ತೀಚೆಗೆ ನಡೆದ ಗ್ರಾಮಪಂಚಾಯತಿ ಎಲೆಕ್ಷನ್‌ನಲ್ಲಿ ಪ್ರಚಾರ ಮಾಡಲು ಉತ್ತರ ಕರ್ನಾಟಕಕ್ಕೆ ಲೋಡುಗಟ್ಟಲೆ ಕಿರುತೆರೆ ನಟಿಯರು ಸರಬರಾಜಾಗಿದ್ದರು. ಅವರಲ್ಲಿ ಹಲವು ನಟಿಯರು 'ಡೇ ಅಂಡ್ ನೈಟ್' ಪ್ಯಾಕೇಜ್ ಮೇಲೆ ಹೋಗಿ ಕೈತುಂಬ ಹಣ ಪಡೆದು ಬಂದಿದ್ದರು.

ಖಾಕಿಗಳ ಸೀರೆ ಶೋಕಿ!

ಟಿವಿ ನಟಿಯರಿಗೂ ಬೆಂಗಳೂರಿನ ಒಂದಿಷ್ಟು ಪೊಲೀಸ್ ಆಫೀಸರ್‌ಗಳಿಗೂ ಸಿಕ್ಕಾಪಟ್ಟೆ ನಂಟು. ಇದನ್ನ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಈ ಖಾಕಿಗಳೇ ಇಂಥ ನಟಿಯರ ಗಿರಾಕಿಗಳು. ಬೆಂಗಳೂರಿನಲ್ಲಿ ರಾಜೇಂದ್ರ ಎಂಬ ಪೊಲೀಸ್ ಇದ್ದಾನೆ. ಟಿವಿ ನಟಿಯರಿಗೂ ಈತನಿಗೂ ಅವಿನಾಭಾವಸಂಬಂಧ. ಅಸಲಿಗೆ ಈತ ಪೊಲೀಸ್ ಅಧಿಕಾರಿಯಾದರೂ ಸ್ವಂತದ್ದೊಂದು ಬಂಗಲೆ ಇಟ್ಟುಕೊಂಡು ಆ ಬಂಗಲೆಯನ್ನು ಧಾರಾವಾಹಿಗಳ ಚಿತ್ರೀಕರಣಕ್ಕೆ ಬಾಡಿಗೆ ಮೇಲೆ ಬಿಡುತ್ತಾನೆ. ಹೀಗೆ ತನ್ನ ಮನೆಗೆ ಶೂಟಿಂಗ್‌ಗೆಂದು ಬರುವ ನಟಿಯರನ್ನು ರಾಜೇಂದ್ರ ಪಟಾಯಿಸಿಬಿಡುತ್ತಾನೆ. ತನ್ನ ಬುಟ್ಟಿಗೆ ಬಿದ್ದ ನಟಿಯರನ್ನು ಆತ ಪರ್ಮನೆಂಟ್ ಅಡ್ಡೆಯಾಗಿರುವ ಕ್ಲಬ್ ಒಂದಕ್ಕೆ ಕರೆದೊಯ್ದು ಮಲ್ಲಕಂಬದ ಆಟ ಶುರುಹಚ್ಚಿಬಿಡುತ್ತಾನೆ.

ಬೆಂಗಳೂರಿನಲ್ಲಿ ರಾಜೇಂದ್ರನಂಥ ಅದೆಷ್ಟೋ ಪೊಲೀಸಪ್ಪಗಳಿದ್ದಾರೆ.



ಕ್ಲಬ್ಬು, ಪಬ್ಬುಗಳೇ ಅಡ್ಡೆಗಳು

ಹಗಲೆಲ್ಲಾ ಸೀರಿಯಲ್ಲು, ಶೂಟಿಂಗು ಎಂದು ಸಮಯ ಕಳೆಯುವ ಟಿವಿ ನಟಿಯರು ರಾತ್ರಿಯಾಗುತ್ತಿದ್ದಂತೆಯೇ ಮದ್ದೂರಿಗೆ ಹೋಗುವ ದಾರಿಯಲ್ಲಿರುವ ಐಷಾರಾಮಿ ಕ್ಲಬ್‌ಗಳಿಗೆ ಅಥವಾ ತುಮಕೂರು ರಸ್ತೆಯಲ್ಲಿರುವ ಅನೈತಿಕ ಅಡ್ಡೆಗಳಿಗೆ ಧಾವಿಸುತ್ತಾರೆ. ಲಾಂಗ್ ಡ್ರೈವ್ ನೆಪದಲ್ಲಿ ಬೆಂಗಳೂರಿನಿಂದ ತುಮಕೂರು ಅಥವಾ ಮದ್ದೂರಿನತನಕ ಹೋಗುವ ಈ ಪತಂಗಗಳು ಅಲ್ಲಿ ನಡೆಸುವುದು ಮಾತ್ರ ಸ್ವಚ್ಛಂದ ಸ್ವೇಚ್ಛೆ ಕಾಮ.

ಇವತ್ತು ಹೆಸರಿಗೆ ಕಿರುತೆರೆ ನಟಿಯರೆನಿಸಿಕೊಂಡು ಶುದ್ಧಾನುಶುದ್ಧ ಮೈಕಸುಬಿಗೆ ಇಳಿದಿರುವ ವಿಜಯನಗರದ ಸೌಮ್ಯಲತಾ, ಪಂಚಮಿ, ವಾಣಿಶ್ರೀ, ಸಂಧ್ಯಾಶ್ರೀ, ಪ್ರೀತಿ, ನಿಶಿತಾ, ವೀಣಾ, ಶೈಲಾ, ಶೋಭ, ಗುಲಾಬಿ, ಭವ್ಯಾ ಸುಗುಣ, ತೇಜಸ್ವಿನಿ, ಸಂಜನಾ, ರಾಧಿಕಾ, ಸ್ಫೂರ್ತಿ, ಭವ್ಯಾ, ಸ್ವಾತಿ, ಸಂಗೀತಾ. ಪದ್ಮ, ಶ್ವೇತಾ ಎಂಬ ನಟನಾಮಣಿಯರ ಮೊಬೈಲ್ ಕಾಲ್ ಲಿಸ್ಟು ತೆಗೆದರೆ ಕರ್ನಾಟಕದ ಗಣ್ಯಾತಿಗಣ್ಯ ರಾಜಕಾರಣಿಗಳ, ಖ್ಯಾತ ಉದ್ಯಮಿಗಳ, ಕುಖ್ಯಾತ ಲ್ಯಾಂಡ್ ಡೀಲರ್‌ಗಳ, ರೌಡಿಗಳ ಅಸಲಿ ಮುಖ ಪರಿಚಯವಾಗುತ್ತದೆ.

ನಿಜಕ್ಕೂ ಬದುಕಿನ ಕಠೋರತೆಗೆ ಸಿಲುಕಿ, ಹೊಟ್ಟೆಪಾಡಿಗಾಗಿ ಈ ಕಸುಬಿನಲ್ಲಿ ಭಾಗಿಯಾಗಿದ್ದರೆ ಅದು ಬೇರೆ ಮಾತು. ಆದರೆ ಇಂತಹ ಟಿವಿ ನಟಿಯರು ಕೇವಲ ವಿಲಾಸಿಜೀವನಕ್ಕಾಗಿ, ದಿಢೀರ್ ಶ್ರೀಮಂತಿಕೆಗಾಗಿ ಇಂಥ ಹೊಲಸು ಕೆಲಸಕ್ಕಿಳಿದಿದ್ದಾರೆ. ಪ್ರತಿಭೆ, ಸೌಂದರ್ಯವಿರುವ ನಟಿಯರಿಗೆ ಇಂಥವೆಲ್ಲಾ ಲಾಯಕ್ಕಾ?

ಬೆಂಗಳೂರಿನ ಪೊಲೀಸರಿಗೆ ನಿಜಕ್ಕೂ ಈ ದಂಧೆಯ ಬೆನ್ನುಮೂಳೆ ಮುರಿಯುವ ಮನಸ್ಸಿದ್ದರೆ ಬ್ರೋಕರ್‌ಗಳಾದ ಪ್ರತಾಪ್, ನಾಗೇಂದ್ರ, ಸತೀಶ, ಮನೋಜ, ಯತೀಶ ಬಾಬು ಲಯೇಂದ್ರ ಎಂಬ ಲಫಂಗರನ್ನು ಬೆಂಗಳೂರು ಬಿಟ್ಟು ಓಡಿಸಬೇಕಿದೆ. ಹಾಗೆಯೇ ಕೆಟ್ಟ ಹೆಂಗಸರಾದ ಚಂದ್ರಮತಿ, ಶಶಿಕಲಾ, ಸಂಧ್ಯಾರಿಗೆ ಕಾನೂನಿನ ಬಿಸಿ ಮುಟ್ಟಿಸಬೇಕಿದೆ.

• ಅರುಣೋದಯ

ಹಾಸಿಗೆ ಮೀರಿದ ಕಾಲು!



ಹಲವು ಮಾಜಿ ಮತ್ತು ಹಾಲಿ ಮಹಿಳಾ ಟಿವಿ ಆರ್ಟಿಸ್ಟ್‌ಗಳು ಇಂದು ಪ್ರತ್ಯಕ್ಷವಾಗೇ ಚರ್ಮೋದ್ಯಮದ ಏಜೆಂಟರುಗಳೂ, ಸದಸ್ಯರೂ ಆಗಿಹೋಗಿದ್ದಾರೆ. ಸದ್ಯ ಕಿರುತೆರೆಯಲ್ಲಿ ನಟಿಸುವ ಸಣ್ಣಪುಟ್ಟ ನಟಿಯರೂ ದಿನಕ್ಕೆ ಐನೂರರಿಂದ ಸಾವಿರದೈನೂರು ರೂಪಾಯಿಗಳ ತನಕ ಸಂಭಾವನೆ ಪಡೆಯುತ್ತಿದ್ದಾರೆ. ಆದರೂ ಅವರಲ್ಲಿ ಹಲವರು ತಮ್ಮ ದೇಹವನ್ನೇ ಮಾರಿಕೊಂಡು, ದೇಹ ದಣಿಸಿಕೊಳ್ಳುವ ಅಗತ್ಯವಾದರೂ ಏನು ಎಂದೆನಿಸುವುದು ಸಹಜ. ಆದರೆ ಒಂದು ಬಾರಿ ಮುಖಕ್ಕೆ ಬಣ್ಣ ಹಚ್ಚಿದ ಮೇಲೆ ಹಲವು ಹುಡುಗಿಯರು ವಿಪರೀತ ಶೋಕಿಗೆ ಬೀಳುತ್ತಾರೆ. ಆರಂಭದಲ್ಲಿ ಬಸ್ಸು, ಆಟೋಗಳಲ್ಲಿ ಓಡಾಡುತ್ತಿದ್ದವರು ಬಹುಬೇಗ ವಿಲಾಸಿ ಕಾರುಗಳ ಮೊರೆ ಹೋಗುತ್ತಾರೆ. ಸಣ್ಣ ಪುಟ್ಟ ಮನೆಯಲ್ಲಿ ವಾಸಿಸುತ್ತಿದ್ದವರನ್ನು ಫ್ಲಾಟು, ಪೆಂಟ್‌ಹೌಸ್‌ಗಳು ಬಗಿದು ಹಿಡಿದಿರುತ್ತವೆ. ದೇಹ ಬ್ರಾಂಡೆಂಡ್ ಬಟ್ಟೆಯನ್ನೇ ಬೇಡುತ್ತದೆ. ಇದೆಲ್ಲದರ ಜೊತೆಗೆ ರಾತ್ರಿಯಾದರೆ ಪಬ್ಬು, ಕ್ಲಬ್ಬುಗಳ ಖಯಾಲಿ ಹಚ್ಚಿಕೊಂಡಿರುತ್ತಾರೆ. ಹೀಗೆ ಹಾಸಿಗೆ ಮೀರಿ ಕಾಲುಚಾಚಿರುವ ನಟಿಯರಿಗೆ ಕಿರುತೆರೆಯಲ್ಲಿ ಅವಕಾಶಗಳು ಕಡಿಮೆಯಾದರೆ ತಮ್ಮ ಐಶಾರಾಮಿ ಜೀವನಕ್ಕೆ ಹೊಂದಿಕೊಂಡು ಬಾಳ್ವೆ ನಡೆಸುವುದು ಅಸಾಧ್ಯವಾಗುತ್ತದೆ. ಆಗ ಅವರು ತಮ್ಮನ್ನೇ ತಮ್ಮ ಹಾಸಿಗೆಯಲ್ಲಿ ಕೆಡವಿಕೊಳ್ಳಬೇಕಾದ ಅನಿವಾರ್ಯ ಪರಿಸ್ಥಿತಿ ಸೃಷ್ಟಿಸಿಕೊಂಡುಬಿಟ್ಟಿರುತ್ತಾರೆ.

ಇವತ್ತು ಕಿರುತೆರೆಯಲ್ಲಿ ಕಾಣಿಸಿಕೊಳ್ಳುವ ಹುಳ್ಳಿಗೆ ಬಿದ್ದು ತಮ್ಮ ಬದುಕು ಹಾಳು ಮಾಡಿಕೊಂಡಿರುವ ಹುಡುಗಿಯರಿಗೆ ಲೆಕ್ಕವಿಲ್ಲ. ಇವರಲ್ಲಿ ತೀರಾ ಸುಸಂಸ್ಕೃತ ಮನೆತನದಿಂದ ಬಂದವರೂ ಇದ್ದಾರೆ. ಕಾಲೇಜು ದಿನಗಳಲ್ಲೇ ಕೆಲವು ಹುಡುಗಿಯರಿಗೆ ಟಿವಿಯಲ್ಲಿ ನಟಿಸುವ ಬಯಕೆ ಉದ್ಭವಿಸಿರುತ್ತದೆ. ಅವರು ಊರು-ಮನೆ ತೊರೆದು ಬೆಂಗಳೂರಿಗೆ ಬಂದು ಕಿರುತೆರೆಯಲ್ಲಿ ಅವಕಾಶಗಳನ್ನು ಅರಸುತ್ತಾರೆ. ಆದರೆ ಚಿತ್ರರಂಗದಲ್ಲಿ ಕಡೇಪಕ್ಷ ಜೂನಿಯರ್ ಆರ್ಟಿಸ್ಟಾದರೂ ಆಗಬಹುದು; ಕಿರುತೆರೆಯ... ಅವಕಾಶ ಗಿಟ್ಟಿಸುವುದು ಅಷ್ಟು ಸುಲಭದ ಮಾತಲ್ಲ.

ಕಂತ್ರಿ ಕಾಗೇರಿ ಕರಾಮತ್ತು ನಿಜ ನಾಯಕತ್ವದ ಕನವರಿಕೆಯಲ್ಲಿ ಉತ್ತರ ಕನ್ನಡ!!



ದಿನಕರ ದೇಸಾಯಿ

ಪಕ್ಷ-ಪಂಗಡದ ಪಕ್ಷಪಾತಿಯಾಗಿ ಯೋಚಿಸದ, ಧರ್ಮಕಾರಣ ಕಂಡಲ್ಲಿ ಕಿವಿ ಹಿಂಡುವ, ಜಾತಿ-ಗುಂಪು ರಾಜಕೀಯ ಮೀರಿ ನಿಲ್ಲುವ, ಸಮಗ್ರ ಜಿಲ್ಲೆಯ ಭೌಗೋಳಿಕ -ಸಾಮಾಜಿಕ-ಆರ್ಥಿಕ ಪರಿಕಲ್ಪನೆಯುಳ್ಳ, ರಾಜಕೀಯವಾಗಿಯೂ ಎಲ್ಲವನ್ನೂ ನಿಭಾಯಿಸಿಕೊಂಡು ಹೋಗಬಲ್ಲ, ದೂರದೃಷ್ಟಿ, ದ್ವೇಷಾಸೂಯೆಗಳಿಲ್ಲದ, ಸಮಚಿತ್ತದ, ನಿಸ್ವಾರ್ಥ ವ್ಯಕ್ತಿತ್ವ ಇದ್ದಂಥ ಒಬ್ಬ ನಾಯಕನಿಗಾಗಿ ಉತ್ತರ ಕನ್ನಡ ಈಗ ಹಸಿದು ಹಂಬಲಿಸುತ್ತಿದೆ. ಪ್ರಾಂಜಲ ಮನಸ್ಸಿನಿಂದ ಇಡೀ ಜಿಲ್ಲೆಗೆ ದಿಕ್ಕು ದೆಸೆ ತೋರಿಸುವ ಧೀಮಂತನೊಬ್ಬನಿಗಾಗಿ ಹಗಲಿರುಳೂ ಉತ್ತರ ಕನ್ನಡಿಗರು ಕನವರಿಸುತ್ತಿದ್ದಾರೆ!..


ಉತ್ತರ ಕನ್ನಡ ಲಾಗಾಯ್ತಿನಿಂದಲೂ ದುರಂತ-ದುರದೃಷ್ಟದ ಬೀಡು; ಅಷ್ಟೈಶ್ವರ್ಯಗಳಿದ್ದರೂ ಮನೆಮುರುಕ ಮುಖಂಡರಿಂದ ಬಂಜರಾಗಿರುವ ಭೂಮಿ! ಅನಾಯಕತ್ವ-ಅರಾಜಕತೆಗಳ ಉತ್ತರ ಕನ್ನಡ ಹುಟ್ಟಿದಾರಭ್ಯ ತತ್ತರಿಸುತ್ತಲೇ ಇದೆ!! ಈಗಂತೂ ಬಿಜೆಪಿ ಬಕಾಸುರರ ಪರ್ವದಲ್ಲಿ ಜಿಲ್ಲೆ ಸಂಪೂರ್ಣ ಹೈರಾಣಾಗಿ ಹೋಗಿದೆ. ಸಂಕ್ರಮಣ ಕಾಲಘಟ್ಟದಲ್ಲಿರುವ ಉತ್ತರ ಕನ್ನಡಕ್ಕೆ ಜನರ ನಾಡಿ ಬಡಿತಕ್ಕೆ ಮಿಡಿವ ನಿಜ ನಾಯಕನೊಬ್ಬ ಬೇಕಾಗಿದ್ದಾನೆ. ಪ್ರಾಂಜಲ ಮನಸ್ಸಿನಿಂದ ಇಡೀ ಜಿಲ್ಲೆಗೆ ದಿಕ್ಕು ದೆಸೆ ತೋರಿಸುವ ಧೀಮಂತನೊಬ್ಬನಿಗಾಗಿ ಹಗಲಿರುಳೂ ಉತ್ತರ ಕನ್ನಡಿಗರು ಕನವರಿಸುತ್ತಿದ್ದಾರೆ!

ಉತ್ತರ ಕನ್ನಡ ಭೌಗೋಳಿಕವಾಗಿ ನಾಲ್ಕು ಗೋವಾ ರಾಜ್ಯದಷ್ಟು ದೊಡ್ಡದು; ಜನಸಂಖ್ಯೆ ಸುಮಾರು ಹದಿಮೂರು ಲಕ್ಷ. ಒಂದು ಕಾಲದಲ್ಲಿ ಇಂದಿನ ಉತ್ತರ ಕನ್ನಡ-ದಕ್ಷಿಣ ಕನ್ನಡ-ಉಡುಪಿಗಳೆಲ್ಲೆಲ್ಲ ಸೇರಿಕೊಂಡು ಒಂದೇ ಕರಾವಳಿ ಪ್ರಾಂತ್ಯವಾಗಿತ್ತು, ಹೊನ್ನಾವರ ಕೇಂದ್ರವಾಗಿತ್ತು. ಒಡೆದಾಳುವ ಕುತಂತ್ರದಲ್ಲಿ ನಿಪುಣರಾದ ಬಿಳಿಯರ ಆಡಳಿತದಡಿ ಅಂದು ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡವೆಂದು ಇಬ್ಭಾಗವಾಗಿತ್ತು. ಈಗ ಉತ್ತರ ಕನ್ನಡವನ್ನು ತುಂಡರಿಸಿ ಬ್ರಾಹ್ಮಣ ಸಾಮ್ರಾಜ್ಯವೊಂದನ್ನು ಸ್ಥಾಪಿಸಲು ಶುದ್ಧ ವೈದಿಕವಾದಿ ಮಂತ್ರಿ ವಿಶ್ವೇಶ್ವರ ಹೆಗಡೆ ಕಾಗೇರಿ ಕರಾಮತ್ತು ನಡೆಸುತ್ತಿದ್ದಾರೆ.

ಸ್ವಾತಂತ್ರ್ಯೋತ್ತರ ದಿನಗಳಲ್ಲಿ ದಕ್ಷಿಣ ಕನ್ನಡಕ್ಕೆ ದಿವಂಗತ ಶ್ರೀನಿವಾಸ್‌ಮಲ್ಯ, ರಂಗನಾಥ ಶೆಣೈ, ಟಿ.ಎಂ.ಎ. ಪೈರಂಥ ದೂರದೃಷ್ಟಿಯ ಮತ್ತು ಜನಾದರಣೀಯ ವ್ಯಕ್ತಿಗಳ ನಾಯಕತ್ವ ಸಿಕ್ಕಿತ್ತು. ಆದರೆ ಆ ಭಾಗ್ಯ ಉತ್ತರ ಕನ್ನಡಕ್ಕೆ ಬರಲೇ ಇಲ್ಲ, ರಾಮಕೃಷ್ಣ ಹೆಗಡೆ, ಜೋಕಿಂ ಆಳ್ವ, ದೇವರಾಯ ನಾಯ್ಕ, ದೇಶಪಾಂಡೆ, ಕಾಗೇರಿ ಮಾಣಿಗಳಂಥ ಅಪ್ಪಟ ಸಮಯ ಸಾಧಕ ಜನದ್ರೋಹಿಗಳೇ ಮೆರೆದು-ಮೇಯ್ದು ಜಿಲ್ಲೆ ಬರಡಾಗಿಸಿಬಿಟ್ಟರು. ದಕ್ಷಿಣ ಕನ್ನಡಕ್ಕೆ ಕೆಲಸಕ್ಕೆ ಬಾರದ ಜೋಕಿಂ ಆಳ್ವ ಈ ಕೆನರಾ ಕ್ಷೇತ್ರದಿಂದ ಸತತ ಮೂರು ಬಾರಿ ಗೆದ್ದು ಪಾರ್ಲಿಮೆಂಟಲ್ಲಿ ಪ್ರತಿನಿಧಿಸಿದ್ದರು. ಆ ವಲಸಿಗನನ್ನು ಮೂರು ಬಾರಿ ಗೆದ್ದು ಪಾರ್ಲಿಮೆಂಟಲ್ಲಿ ಪ್ರತಿನಿಧಿಸಿದ್ದರು. ಆ ವಲಸಿಗನನ್ನು ಜಿಲ್ಲೆಯ ಜನ ಅನಿವಾರ್ಯವಾಗಿ ಸಹಿಸಿಕೊಂಡಿದ್ದರೇ ಹೊರತು ಒಬ್ಬ ನಾಯಕನಾಗಿ ಒಪ್ಪಿಕೊಳ್ಳಲೇ ಇಲ್ಲ....


ಜೋಕಿಂ ಆಳ್ವ

ಇದಕ್ಕೊಂದು ಕಾರಣವೂ ಇತ್ತು. ಇಡೀ ಕರ್ನಾಟಕದಲ್ಲಿ 'ಗಾಂಧಿ ಜಿಲ್ಲೆ' ಎಂಬ ಪ್ರತೀತಿ ಇದ್ದದ್ದು ಉತ್ತರ ಕನ್ನಡಕ್ಕೆ ಮಾತ್ರವಾಗಿತ್ತು. 'ಕರ್ನಾಟಕದ ಗಾಂಧಿ' ಎಂಬ ಪ್ರಸಿದ್ಧಿಯ ಟಿ.ಎಸ್.ನಾಯಕ್ ಇದೇ ಜಿಲ್ಲೆಯವರು. ಕರ ನಿರಾಕರಣೆ ಹೋರಾಟ, ಉಪ್ಪಿನ ಸತ್ಯಾಗ್ರಹ, ಅಸಹಕಾರ ಆಂದೋಲನ, ಚಲೇಜಾವ್ ಚಳವಳಿ ಮುಂತಾದ ಮಹತ್ವದ ರಾಷ್ಟ್ರೀಯ ಆಂದೋಲನಗಳಲ್ಲಿ ದೇಶಕ್ಕೆ ಮಾದರಿಯೆಂಬಂತೆ ಹೋರಾಡಿದ ಜಿಲ್ಲೆ ಈ ಉತ್ತರ ಕನ್ನಡ. ಹೀಗಾಗಿ ಮಹಾತ್ಮ ಗಾಂಧಿಯೆಂದರೆ ಕಾಂಗ್ರೆಸ್-ಕಾಂಗ್ರೆಸ್ ಎಂದರೆ ಮಹಾತ್ಮ ಗಾಂಧಿ ಎಂಬಂಥ ಅವಿನಾಭಾವಸಂಬಂಧ ಹೊಂದಿದ್ದ ಇಲ್ಲಿಯ ಜನರ ಪರಮೋಚ್ಛ ಮತ್ತು ಪ್ರಾಥಮಿಕ ನಿಷ್ಠೆ-ಆದ್ಯತೆ ಕಾಂಗ್ರೆಸ್ ಕಡೆಗಿತ್ತು.


ರಾಮಕೃಷ್ಣ ಹೆಗಡೆ


ಈ ಸೆಂಟಿಮೆಂಟನ್ನು ಕಾಂಗ್ರೆಸಿನ ಅಧಿಪತಿಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಂಡರು. ದಕ್ಷಿಣ ಕನ್ನಡದಲ್ಲಿ ಮಲ್ಯರಿಗೆ ಎಂಪಿಗಿರಿ ಟಿಕೆಟ್ ಕೊಟ್ಟಿದ್ದ ಕಾಂಗ್ರೆಸ್ ಕಿಂಗ್‌ಗಳಿಗೆ ಈ ಭಾಗದಲ್ಲಿ ಗಣನೀಯವಾಗಿದ್ದ ಕ್ರಿಶ್ಚಿಯನ್ ಒಬ್ಬರಿಗೆ ಅವಕಾಶ ಕೊಡುವ ಒತ್ತಡವೂ ಇತ್ತು, ಕಾಂಗ್ರೆಸ್ ಮಹಾಮಹಿಮರ ಒಡನಾಡಿಯಾಗಿದ್ದ ಜೋಕಿಂ ಆಳ್ವರಿಗೆ ಉತ್ತರ ಕನ್ನಡದ ದಾರಿ ತೋರಿಸಲಾಯ್ತು, ಇಷ್ಟು ಸುರಕ್ಷಿತ ಕ್ಷೇತ್ರ ಇನ್ನೊಂದಿಲ್ಲವೆಂದು ಉತ್ತರ ಕನ್ನಡದ ಮೇಲೆ ಜೋಕಿಂ ಆಳ್ವರನ್ನು ಏಕಪಕ್ಷೀಯವಾಗಿ ಹೇರಲಾಗಿತ್ತು, ಈ ಆಳ್ವ ಈಗಿನವರಂತೆ ಭ್ರಷ್ಟ ರಾಜಕಾರಣಿ ಆಗಿರಲಿಲ್ಲ ಎಂಬುದೇನೋ ನಿಜ, ಆದರೆ ಉತ್ತರ ಕನ್ನಡದ ಭೌಗೋಳಿಕ ಪರಿಜ್ಞಾನವೂ ಆತನಲ್ಲಿರಲಿಲ್ಲ! ಅಂತೂ ಆಳ್ವ ಬರೋಬ್ಬರಿ 15 ವರ್ಷ ಒಬ್ಬ ನಿರುಪದ್ರವಿ-ನಿಷ್ಪ್ರಯೋಜಕ ಪುಢಾರಿಯಾಗಿ ಎಂಪಿಗಿರಿಯ ಸುಖ-ಸೌಲಭ್ಯ ಸವಿದು ಹೋದರಷ್ಟೇ! ಇಲ್ಲಿಯ ನೆಲ-ಜಲ-ಜನರೊಂದಿಗೆ ಆತ ಭಾವನಾತ್ಮಕವಾಗಿ ಬೆರೆಯಲೇ ಇಲ್ಲ, ಹೀಗಾಗಿ ಸ್ವಾತಂತ್ರ್ಯೋತ್ತರದ ಆರಂಭದ 15 ವರ್ಷ ಉತ್ತರ ಕನ್ನಡ 'ಅನಾಯಕತ್ವ'ದಲ್ಲಿ ಸಾಗಿಬಂತು!!

ಈ ಅವಧಿಯಲ್ಲಿ ರೈತ-ಕೂಲಿಕಾರ ಹೋರಾಟಗಾರ, ಕವಿ, ದಾರ್ಶನಿಕ ದಿನಕರ ದೇಸಾಯಿ ಜಿಲ್ಲೆಗೆ ಸಮರ್ಥ ನಾಯಕತ್ವ ಕೊಡುವ ಅಷ್ಟೂ ಗುಣಲಕ್ಷಣವಿರುವ ನೇತಾರನಂತೆ ಜನಮನದಲ್ಲಿ ಬಿಂಬಿತವಾಗಿದ್ದರು. ಏಕೆಂದರೆ, ಸ್ವಾತಂತ್ರ್ಯಪೂರ್ವದಿಂದಲೂ ಮೊದಲಿನಿಂದ ಈ ಜಿಲ್ಲೆಯ ಜನರನ್ನು, ಅದರಲ್ಲೂ ವಿಶೇಷವಾಗಿ ರೈತ-ಕೂಲಿಕಾರ ಶ್ರಮಜೀವಿಗಳನ್ನು ತನ್ನೆದೆಗೆ ಹಚ್ಚಿಕೊಂಡು ಆ ಬೆವರಿನ ವರ್ಗದಲ್ಲಿ ಸಂಘಟನೆಯ ಛಲ-ಬಲ ಹುಟ್ಟುವಂತೆ ಮಾಡಿದ್ದೇ ದಿನಕರ ದೇಸಾಯಿ ಮತ್ತವರ ಸಂಗಾತಿಗಳಾಗಿದ್ದ ಎಸ್.ವಿ.(ಗಿರಿ) ಪಿಕಳೆ ಮತ್ತು ದಯಾನಂದ ನಾಡಕರ್ಣಿ. ಈ ತ್ರಿಮೂರ್ತಿಗಳಲ್ಲಿ ದಿನಕರ ದೇಸಾಯಿಯವರೇ ಹಲವು ಕಾರಣಗಳಿಗಾಗಿ ಜಿಲ್ಲೆಯ ಮನಸೂರೆಗೊಂಡಿದ್ದರು. ಒಬ್ಬ ಜನಸೇವಕ ಕವಿಯೂ ಆಗಿದ್ದು ಆತನಿಗೆ ಅಂಥ ಆಕರ್ಷಕ ವ್ಯಕ್ತಿತ್ವ ರೂಢಿಸಿಕೊಳ್ಳಲು ನೆರವಾಗಿರಬಹುದು.

ಮಹಾತ್ಮಾ ಗಾಂಧಿಯವರ ರಾಜಕೀಯ ಗುರು ಎಂಬ ಖ್ಯಾತಿಯ ಗೋಪಾಲಕೃಷ್ಣ ಗೋಖಲೆ ಸ್ಥಾಪಿಸಿದ್ದ 'ಭಾರತ ಸೇವಕ ಸಮಾಜ' (ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ)ದಲ್ಲಿ ಆ ಜೀವ ಕಾರ್ಯಕರ್ತನಾಗಿ ಸಮರ್ಪಿಸಿಕೊಂಡಿದ್ದ ದಿನಕರ ದೇಸಾಯಿ ಆ ಸಂಸ್ಥೆಯ ಮುಂಬೈ ಪ್ರದೇಶದ ಅಧ್ಯಕ್ಷರೂ ಆಗಿದ್ದರು. ಆ ಕರ್ತವ್ಯದ ಜತೆಜತೆಗೆ ಅಂದಿನ ಮುಂಬೈ ಕಾರ್ಪೋರೇಷನ್ ಪ್ರಮುಖ ವಿರೋಧಿ ಸದಸ್ಯರಾಗಿದ್ದರು. ಮುಂಬೈನಲ್ಲಿ ಕಡಲ ಕಾರ್ಮಿಕ ಸಂಘ ಕಟ್ಟಿ ಹೋರಾಡಿದ್ದ ದೇಸಾಯಿ ಅಂತಾರಾಷ್ಟ್ರೀಯ ಕಾರ್ಮಿಕ ಸಮ್ಮೇಳನದಲ್ಲಿ ಭಾರತೀಯ ಪ್ರತಿನಿಧಿಯಾಗಿ ಭಾಗವಹಿಸಿ ವಿಶ್ವದ ಗಮನ ಸೆಳೆದಿದ್ದರು. ಅದೇ ಹೊತ್ತಿಗೆ ಇತ್ತ ತನಗೆ ಜನ್ಮ ಕೊಟ್ಟ ಉತ್ತರ ಕನ್ನಡದ ನೆಲದಲ್ಲಿ ರೈತ-ಕೂಲಿಕಾರ ಶ್ರಮಜೀವಿಗಳನ್ನು ಕೆಂಬಾವುಟದಡಿ ತಂದು ಜನಸಾಮಾನ್ಯರ ಬಾಯಲ್ಲಿ "ದೀನಬಂಧು' ಅನ್ನಿಸಿ ಕೊಂಡಿದ್ದರು.

ಇದೆಲ್ಲ ಸಹಜವಾಗೇ ದೇಸಾಯಿಯವರಿಗೆ ಜಿಲ್ಲೆಯ ನಾಯಕತ್ವ ವಹಿಸಿಕೊಳ್ಳುವುದಕ್ಕೆ ನಾಲ್ಕೂ ದಿಕ್ಕಿನಿಂದ ಅನುಕೂಲ ಕಲ್ಪಿಸಿತ್ತು, ಆದರೆ ಮೊದಲೆರಡು ಲೋಕಸಭಾ ಎಲೆಕ್ಷನ್‌ನಲ್ಲಿ ಸ್ಪರ್ಧಿಸಿದ್ದ ದೇಸಾಯಿಯವರನ್ನು ಜನರ್‍ಯಾಕೋ ಗೆಲ್ಲಿಸಲೇ ಇಲ್ಲ, ಆಗಾತ ಬೆವರಿನ ವರ್ಗದ ಸಂಘಟನೆಗಷ್ಟೇ ತಮ್ಮ ಗಮನ ಕೇಂದ್ರೀಕರಿಸಿಕೊಂಡು ಶಿಕ್ಷಣ-ಸಾಮಾಜಿಕ ರಂಗಗಳಿಗೆ ನಿಸ್ವಾರ್ಥವಾಗಿ ಒಡ್ಡಿಕೊಂಡರು. 1967ರಲ್ಲಿ ಉತ್ತರ ಕನ್ನಡಿಗರು ಅದುವರೆಗೂ ರೈತ ಸಭೆಗಷ್ಟೇ ಹೋಗುತ್ತಿದ್ದ ದೇಸಾಯಿಯವರನ್ನು ಲೋಕಸಭೆಗೆ ಕಳಿಸಿಕೊಟ್ಟರೇನೋ ನಿಜ. ಆದರೆ ಮುಂದಿನ ಚುನಾವಣೆಯಲ್ಲಿ ಇಂದಿರಾ ಗಾಂಧಿಯ 'ಗರೀಬಿ ಹಟಾವೋ' ಗಿಮಿಕ್‌ನಲ್ಲಿ ದೇಸಾಯಿ ಕೊಚ್ಚಿಹೋದರು. ಹೀಗಾಗಿ ಈ ಕೇವಲ ನಾಲ್ಕೇನಾಲ್ಕು ವರ್ಷಗಳ ಹೊರತಾಗಿ ಮತ್ತೆಂದೂ ದಿನಕರ ದೇಸಾಯರು ಪೂರ್ಣಾವಧಿ ಪ್ರತಿನಿಧಿಯಾಗಿ ಈ ಜಿಲ್ಲೆಯನ್ನು ರಾಜ್ಯ ಇಲ್ಲವೇ ಕೇಂದ್ರ ಸರ್ಕಾರದ ಎದುರು ಪ್ರತಿನಿಧಿಸಲೇ ಇಲ್ಲ.


ಒಂದು ಹಂತದವರೆಗೆ ಮಾತ್ರ ನಾಯಕತ್ವ ನೀಡುವ ಅವಕಾಶ ದೇಸಾಯಿಯವರಿಗಿತ್ತು, ಎಲ್ಲ ದಿನಗಳಲ್ಲೂ ಎಲ್ಲ ಹಂತದಲ್ಲೂ 'ರಾಜಕಾರಣ' ಮಾಡಿಕೊಂಡಿರಲು ಸಾಧ್ಯವಿರದಂಥ ಒಂದಿಷ್ಟು ಸೈದ್ಧಾಂತಿಕ ತಾಪತ್ರಯಗಳೂ ಅವರಿಗಿತ್ತು, ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಆಜೀವ ಕಾರ್ಯಕರ್ತರು ಯಾವುದೇ ರಾಜಕೀಯ ಪಕ್ಷದ ಸಕ್ರಿಯ ಸದಸ್ಯನಾಗಿರುವಂತಿರಲಿಲ್ಲ, ಹೀಗಾಗಿ ದೇಸಾಯಿ ಚುನಾವಣೆ ಹೊತ್ತಲ್ಲೂ ಸ್ವತಂತ್ರ ಅಭ್ಯರ್ಥಿಯೆಂದು ಗುರುತಿಸಿಕೊಂಡು ಸಮಾಜವಾದಿ ಪಕ್ಷದ ಬೆಂಬಲ ಪಡೆದರೆ ಹೊರತು ಒಂದು ರಾಜಕೀಯ ಪಕ್ಷದ ನಾಯಕರಾಗಿ ಬೆಳೆಯಲಿಲ್ಲ, ಜಿಲ್ಲೆಗೆ ಇರಲಿ, ನಾಡಿಗೇ ಇರಲಿ ನಾಯಕತ್ವ ಕೊಡಬೇಕಾದಂಥ ಸಂದರ್ಭದಲ್ಲಿ ವ್ಯಕ್ತಿಯೊಬ್ಬನಿಗೆ ಸಕಲ ಅರ್ಹತೆಗಳಿದ್ದರೂ ರಾಜಕೀಯ ಚಾರಿಷ್ಮಾ ಎಂಬುದು ಬೇಕೇಬೇಕಾಗುತ್ತದೆ. ಈ ರಾಜಕೀಯ ಪ್ರಭಾವಳಿಯಿಲ್ಲದ ದೇಸಾಯಿ ಎಲ್ಲ ಕಾಲ-ಎಲ್ಲ ವರ್ಗಕ್ಕೆ ನಾಯಕರಾಗಿ ಒಡಮೂಡಲು ಸಾಧ್ಯವಾಗಲಿಲ್ಲ.


ಕಾಗೇರಿ

ಇದೆಲ್ಲಕ್ಕಿಂತ ಹೆಚ್ಚಾಗಿ 1960ರ ವೇಳೆಗೆ 'ರೈತಕೂಟ'ದಲ್ಲಿ ಬಿರುಕು ಮೂಡಿತ್ತು, ದಿನಕರ ದೇಸಾಯಿಯರ ಬಲಗೈಯೆಂದೇ ಭಾವಿಸಲಾಗಿದ್ದ ಗಿರಿ ಪಿಕಳೆ ದುರ್ಬಲ ವರ್ಗಗಳ ಹಿತಚಿಂತನೆಯಲ್ಲಿ ದೇಸಾಯಿಯವರಿಗಿಂತ ಒಂದು ಹೆಜ್ಜೆ ಮುಂದೇ ಇದ್ದಂತವರು. ಇಂಥ ಪಿಕಳೆಯೇ ರೈತ ಹೋರಾಟದ ಒಂದು ಭಾಗವಾಗಿದ್ದ 'ಕೆನರಾ ವೆಲ್‌ಫೇರ್ ಟ್ರಸ್ಟ್' ಎಂಬ ಸೇವಾಸಂಸ್ಥೆಯ ವಿದ್ಯಾಸಂಸ್ಥೆಗಳಿಗೆ ಬಂಡವಾಳಶಾಹಿಗಳಿಂದ ವಂತಿಗೆ ಪಡೆಯುವುದನ್ನು ಬಲವಾಗಿ ವಿರೋಧಿಸಿದರು! ಟ್ರಸ್ಟ್‌ನ ಅಧ್ಯಕ್ಷ ದೇಸಾಯಿ, ಕಾರ್ಯದರ್ಶಿ ಪಿಕಳೆಯನ್ನು ವಜಾ ಮಾಡಿದರು. ಅಲ್ಲಿಂದ ಕವಲಾಗಿ ತಂತಮ್ಮ ಸೈದ್ಧಾಂತಿಕ ನೆಲೆಯಲ್ಲಿ ಸಂಸ್ಥೆಗಳನ್ನು ಕಟ್ಟಿ ಸಮಾಜ ಸೇವೆ ಶುರುಹಚ್ಚಿಕೊಂಡ ಇವರಿಬ್ಬರೂ ಮುಂದೆಂದೂ ಒಂದೇ ವೇದಿಕೆಗೆ ಬರಲೇ ಇಲ್ಲ, ಹಾಗೊಮ್ಮೆ ದೇಸಾಯಿ-ಪಿಕಳೆ-ನಾಡಕರ್ಣಿ ಇಡೀ ಜಿಲ್ಲೆಯ ಎಲ್ಲ ವರ್ಗದ ಅವಶ್ಯಕತೆ ಗಮನದಲ್ಲಿಟ್ಟುಕೊಂಡು ಸೇವಾಕಾರ್ಯ ಮುಂದುವರೆಸಿದ್ದರೆ- ಈ ತ್ರಿಮೂರ್ತಿಗಳು ಜಿಲ್ಲೆಗೆ ಸಮರ್ಥ ನಾಯಕತ್ವ ಕೊಡಬಲ್ಲಂಥವರಾಗಿದ್ದರು.

ಇಷ್ಟಾದರೂ ಇವತ್ತಿಗೂ ಉತ್ತರ ಕನ್ನಡ ಜಿಲ್ಲೆ ಒಂದ ರೀತಿಯ ಆರಾಧನಾ ಭಾವದಿಂದ, ಕೃತಜ್ಞತಾ ಭಾವನೆಯಿಂ ಮತ್ತೆ ಮತ್ತೆ ಸ್ಮರಿಸುವುದು ಈ ದಿನಕರ ದೇಸಾಯಿ ಮತ ಗಿರಿ ಪಿಕಳೆಯವರನ್ನೇ! 50 ಮತ್ತು 60 ದಶಕದ ರೈತ-ಕೂಲಿಕಾರರೆಂಬ ಒಂದು ಶ್ರಮಜೀವಿ ವರ್ಗಕ್ಕಷ್ಟೆ ನೇತಾರ ಆಗಿದ್ದ ದೇಸಾಯಿ ತಮ್ಮ ಶೈಕ್ಷಣಿಕ-ಸಾಮಾಜಿ ಸೇವಾ ಕಾರ್ಯಗಳಿಂದ ಇಡೀ ಉತ್ತರ ಕನ್ನಡದ ಉದ್ದಗಲಕ್ಕೂ 70ರ ದಶಕದಲ್ಲಿ ಪ್ರಭಾವ ಬೆಳೆಸಿಕೊಂಡಿದ್ದರು. ಇತರ ವರ್ಗದವರೂ ಆ ಹೊತ್ತಿಗೆ ದೇಸಾಯಿಯವರನ್ನು ತಮ ನಾಯಕನೆಂದು ಒಪ್ಪಿಕೊಳ್ಳುವ ಮಾನಸಿಕ ಸ್ಥಿತಿ-ಗತಿಯಲ್ಲಿದ್ದರು ಆದರೆ 1982ರಲ್ಲಿ ದೇಸಾಯಿ ತಮ್ಮ 72ನೇ ವಯಸ್ಸಿನ ಎದ್ದುಹೋಗಿಬಿಟ್ಟರು. ಅಂದು ಜಿಲ್ಲೆಯ ನಾಯಕತ್ವ ಸಂಬಂಧಿಸಿದಂತೆ ಸೃಷ್ಟಿಯಾಗಿದ್ದ ಶೂನ್ಯ ಇವತ್ತಿಗೂ ಹಾಗೆ ಇದೆ...


ದಿನಕರ ದೇಸಾಯಿ ಬಿಟ್ಟರೆ, ಸೋಕಾಲ್ಡ್ ನಾಯಕರೆಂದು ಪೋಸು ಕೊಟ್ಟವರೆಲ್ಲರೂ ಹೇತ್ಲಾಂಡಿಗಳೇ. ಈ ಜಿಲ್ಲೆಯ ಮಣ್ಣಿನಮಗ ದಿವಂಗತ ರಾಮಕೃಷ್ಣ ಹೆಗಡೆಯನ್ನೇ ತೆಗೆದುಕೊಳ್ಳಿ. ಈತನೇನೂ ಕಡಿಮೆ 'ಬುದ್ಧಿವಂತ'ನಲ್ಲ! ರಾಜಕೀಯ-ಸಾಮಾಜಿಕ ಮತ್ತು ಸಾಂಸ್ಕೃತಿಕ ವಲಯದಲ್ಲಿ ನರಿಬುದ್ಧಿಯ ಹೆಗಡೆಜೀ ತನ್ನದೇ 'ವಿಶಿಷ್ಟ' ಛಾಪು ಒತ್ತಿದ್ದರು. ರಾಜ್ಯದ ಅರ್ಥಮಂತ್ರಿ, ರಾಜ್ಯ ಸಭಾಸದಸ್ಯ, ಯೋಜನಾ ಆಯೋಗದ ಉಪಾಧ್ಯಕ್ಷ 'ಕೇಂದ್ರ ಮಂತ್ರಿ' ಆರು ವರ್ಷಗಳಷ್ಟು ಕಾಲ ರಾಜ್ಯದ ಮುಖ್ಯ ಮಂತ್ರಿಯಂಥ ಉನ್ನತ ಸ್ಥಾನದಲ್ಲೇ ವಿಹರಿಸಿದವರು. ಮನಸ್ಸು ಮಾಡಿದ್ದರೆ ಹೆಗಡೆಜಿ ಉತ್ತರ ಕಾಣದ ಉತ್ತರ ಕನ್ನಡಕ್ಕೊಂದು ನಿರ್ವಾಜ್ಯ ನಾಯಕತ್ವ ಕೊಡಬಹುದಿತ್ತು! ಆದರೆ ರಾಷ್ಟ್ರ ನಾಯಕತ್ವದ ಹಪಾಹಪಿಗೆ ಬಿದ್ದಿದ್ದ ಹೆಗಡೆಜಿ ಜನ್ಮ ನೀಡಿದ ಜಿಲ್ಲೆಗೆ ಘೋರ ಮೋಸ-ಅನ್ಯಾಯವನ್ನೇ ಮಾಡಿಹೋದರು!!


ಅನಂತಕುಮಾರ್ ಹೆಗಡೆ

ದಿನಕರ ದೇಸಾಯಿ ತಮ್ಮ ಗುರುವೆಂದು ಬೊಂಬಡಾ ಬಜಾಯಿಸುವ ಹಿಂದುಳಿದ ವರ್ಗ (ದೀವರ)ದ ಮಾಜಿ ಸಂಸದ ಜಿ.ದೇವರಾಯ ನಾಯ್ಕರಾಗಲಿ, ಮಾಜಿ ಶಾಸಕ ಹೊನ್ನಾವರದ ಎಸ್.ವಿ.ನಾಯ್ಕರಾಗಲಿ ಜಿಲ್ಲೆಯ ಜನರ ಗೌರವಾದರ-ವಿಶ್ವಾಸಕ್ಕೆ ಅರ್ಹರಾಗಲೇ ಇಲ್ಲ, ಅನಾಯಾಸ 15 ವರ್ಷ ಎಂಪಿಗಿರಿಯಲ್ಲಿದ್ದ ದೇವರಾಯ ನಾಯ್ಕರಂತೂ ಈ ಅವಧಿಯನ್ನು ಪಾರ್ಲಿಮೆಂಟ್‌ನಲ್ಲಿ ಗೊರಕೆ ಹೊಡೆಯಲಿಕ್ಕೆ- ಗಂಟು ಕಟ್ಟಲಿಕ್ಕೆ-ಕ್ಷುಲ್ಲಕ ರಾಜಕೀಯ

ಕ್ಕೆ ಮೀಸಲಿಟ್ಟ ಹಾಸ್ಯಾಸ್ಪದರಾಗಿದ್ದರು. ಎಂ.ಎಂ. ಮ್ಮಾರೆಂಬ ಸವಾಯತ ಮುಸ್ಲಿಂ ಸುಸಂಸ್ಕೃತ ರಾಜ ಯೂ ದೀರ್ಘಕಾಲ ರಾಜ್ಯದ ಕ್ಯಾಬಿನೆಟ್ ದರ್ಜೆ ಗಿರಿಯಲ್ಲಿದ್ದರೂ 'ನಾಯಕ' ಅನ್ನಿಸಿಕೊಳ್ಳಲಾಗಲಿಲ್ಲ, ನ್ನಾರಲ್ಲ ವಿಚಿತ್ರ ಕುಬ್ಜತೆಗಳಿದ್ದವು!!

1983ರಿಂದ ಸುಮಾರು ಎರಡೂವರೆ ದಶಕಗಳ ಕಾಲ ರಲ್ಲಿ ಯಾವ ಪಕ್ಷದ ಸರ್ಕಾರವೇ ಇರಲಿ ತಾನು ಸಂಪುಟ ದರ್ಜೆಯ ಸಚಿವನಾಗಿ ದಡಪ್‌ಶಾಹಿ ರಾರಣಿ ನಡೆಸಿದ ಫ್ಯೂಡಲ್ ದೇಶಪಾಂಡೆಯಲ್ಲಂತೂ ಕತ್ವದ ಒಂದೇ ಒಂದು ಗುಣಲಕ್ಷಣವಿಲ್ಲ. ಜಿಲ್ಲೆಯ -ಬೇಡಗಳ ಅರಿವಿಲ್ಲ. ಜಿಲ್ಲೆಯಾದ್ಯಂತ ಹುಂಡ ಬಂ ಬೆಳೆಸಿಕೊಂಡ ದೇಶಪಾಂಡೆ ಪ್ರಶ್ನಾತೀತ ನಾಯಕ ಮಾತ್ರ ಹೊರಹೊಮ್ಮಲು ಸಾಧ್ಯವಾಗಲೇ ಇಲ್ಲ. ತನ ಜಾತೀಯತೆ-ಹುಮ್ಮು-ಬಿಮ್ಮು-ಭಾನ್ಗಡಿಗಳೇ . ದೇಶಪಾಂಡೆಯ ಸ್ವಪಕ್ಷದ ಶತ್ರು ಮಾಜಿ ಕೇಂದ್ರ ಣಿ-ಹಾಲಿ ಉತ್ತರಖಂಡದ ರಾಜ್ಯಪಾಲೆ ಮಾರ್ಗರೆಟ್ ಸ್ವಭಾವತಃ ಹಿಂಬಾಗಿಲ ರಾಜಕಾರಣಿ. ಜೋಕಿಂ ಈ ಸೊಸೆ ತಾನು ಉತ್ತರ ಕನ್ನಡದ ಸೊಸೆ ಳುತ್ತಾ ಜಿಲ್ಲೆಯ ನಾಯಕಿಯಾಗುವ ಹಂಬಲ ನೋ ಬಂದಿದ್ದರು. ಐದು ಬಾರಿ ಮೆಂಟಿಗೆ ಕೆನರಾದಿಂದ ಸ್ಪರ್ಧಿಸಿ ಒಂದು ಬಾರಿ ಗೆದ್ದಿದ್ದರು. ಲ್ಕು ವರ್ಷ ಮ್ಯಾಗಿ ಒಂದಿಷ್ಟು ಕೇಂದ್ರ ಸರ್ಕಾರದಿಂದ ದ್ದರೂ ಆಕೆಗೆ ಎಲ್ಲ ಜಾತಿಧರ್ಮ ನ್ನು ಸಮಾನವಾಗಿ ಕಾಣುವ ಬ್ಯತೆ ಇರಲಿಲ್ಲ. ಜಿಲ್ಲೆಯ ಭೌ ಕ ಉದ್ದಗಲ ಈಕೆಗೂ ಮಾವ ಹಿಂ ಆಳ್ವರಂತೆಯೇ ಅರ್ಥ ಇಲ್ಲ. ಒಂದಿಷ್ಟು ಬಾಡಿ ರು-ಕ್ರಿಮಿನಲ್‌ಗಳನ್ನು ಕಟ್ಟಿ ತು ಜಿಲ್ಲೆಯಲ್ಲಿ ಓಡಾಡುವ ಯನ್ನು 'ನಮ್ಮ ನಾಯಕಿ' ಎಂದು ಸ್ವೀಕರಿಸಲು ಜನರು ಸಿದ್ಧರಿಲ್ಲ. ಅಂತಾರಾಷ್ಟ್ರೀಯ ರಾಜಕಾರಣಿ ನ ಮ್ಯಾಗಿಗೂ ಜಿಲ್ಲೆಯಲ್ಲೇ ಕುಳಿತು ದಕ್ಷತೆ-ಜನಪರ ಯಿಂದ ಕೆಲಸ ಮಾಡಬೇಕೆಂಬ ಮನಸ್ಸೇ ಇಲ್ಲ. ಗಿ ಈಕೆ ಅದೆಂಥ ಕಸರತ್ತು ಮಾಡಿದರೂ 'ನಾಯಕಿ' ಲ್ಲ!


ದೇಶಪಾಂಡೆ

ಮಾವ ಜಿಲ್ಲೆ ಸ್ವಾತಂತ್ರ್ಯ ಪೂರ್ವ ಮತ್ತು ನಂತರದ ರು ಎರಡು ದಶಕಗಳವರೆಗೂ 'ಸೆಕ್ಯುಲರ್' ಕಾಂಗ್ರೆಸ್ ನಿಸಿಕೊಂಡಿತ್ತೋ, ಯಾವ ಜಿಲ್ಲೆಯಲ್ಲಿ ಸುಮಾರು ನೂವರೆ ದಶಕದಷ್ಟು ದೀರ್ಘಕಾಲ 'ಸರ್ವರಿಗೆ ಬಾಳು' ಎಂಬ ಬೇಡಿಕೆ ಮುಂದಿಟ್ಟು ಸಮಾಜವಾದಿ ಳೀಲನಗಳು ನಡೆದವೊ ಆ ವಲ್ಲೀಗ ಬಹುಸಂಖ್ಯೆಯ ತಿನಿಧಿಗಳು ಕೋಮು ಕಿತಾಪತಿ ರ್ಗಗಳ ಬಿಜೆಪಿಗೆ ಸೇರಿದವರು!! ಧರ್ಮಾಂಧ ಧ್ಯೇಯಾದರ್ಶ ಹಿಂದುತ್ವದ ನಂಬಿಕೆ-ಲಾಡಿ ಸಂಸ್ಕೃತಿಗಳೇನೇ ಇದ್ದು ಗಿ ಹೋಗಲಿ; ಈ ಬಿಜೆಪಿ ದರೂ ಒಬ್ಬ ನಿರ್ವಿವಾದದ ಕ ಎಂಬುವವನು ಈ ಉತ್ತರ ರ ಮಟ್ಟಿಗೆ ಹುಟ್ಟಿ ಬಂದಾನೇ , ಊಹುಂ, ಅಲ್ಲೂ ಕಾಣಿಸು


ಮಾರ್ಗರೆಟ್ ಆಳ್ವ

ನರಾದಿಂದ ನಾಲ್ಕು ಸಾರಿ ಲೋಕಸಭೆಗೆ ಆಯ್ಕೆಯಾಗಿ ಬಿಜೆಪಿಯ ಅನಂತ್ಮಾಣಿ ಯಾನೆ ಅನಂತಕುಮಾರ್ ನೋಡಲು ಎಷ್ಟು ಚೆಂದವೋ ಅಷ್ಟೇ ವಿಕಾರ ಹಿಂದೂತ್ವದ ಹರಾಮಿ ರಾಜಕಾರಣ. ಒಂದು ಲ್ಲಿ ಬುತ್ತಿಕಟ್ಟಿಕೊಂಡು ಹಳ್ಳಿಗಳಲ್ಲಿ ಆರೆಸ್ಸೆಸ್ ಬೈಠಕ್ ತ್ತಿದ್ದ ಈ ಮಾಣಿ ಇವತ್ತು ಸಮೃದ್ಧ-ಶ್ರೀಮಂತ ನೆ. ಪಕ್ಕಾ ದಂಧೆಕೋರ ರಾಜಕಾರಣಿಯಾಗಿದ್ದಾನೆ. ಅರಣ್ಯವನ್ನೇ ಎಕರೆಗಟ್ಟಲೆ ಅತಿಕ್ರಮಿಸಿ ಭರ್ಜರಿ -ಮನೆ ಕಟ್ಟಿಕೊಂಡಿದ್ದಾನೆ. 'ಕದಂಬ' ಎಂಬ ಎನ್‌ಜಿಓ 'ವ್ಯಾಪಾರ' ಮಾಡುತ್ತಿದ್ದಾನೆ. ಮಾತೆತ್ತಿದರೆ ಹಿಂದೂತ್ವದ ಸ ಅಸ್ತ್ರ ಝಳಪಿಸುವ ಈ ಪೆದ್ದು ಮಾಣಿ ನಾಯಕತ್ವಕ್ಕೆ ಗುವ ಪ್ರಬುದ್ಧತೆಯಾಗಲಿ, ದೂರದೃಷ್ಟಿಯಾಗಲಿ, ಸಜ್ಜನಿಕೆಯಾಗಲಿ ತನ್ನಲ್ಲಿದೆಯೆಂದು ಇದುವರೆಗಿನ -ಶೈಲಿಯಲ್ಲಿ ಸಾಬೀತುಪಡಿಸಿದ್ದಿಲ್ಲ!

ಜೆಪಿಯಲ್ಲಿರುವ ಮತ್ತೊಬ್ಬ ಸ್ವಯಂಘೋಷಿತ ಕನೆಂದರೆ ಮಂತ್ರಿ ವಿಶ್ವೇಶ್ವರ ಹೆಗಡೆ ಕಾಗೇರಿ. ಣಿ ಉಗ್ರವಾದಿಯಾದರೆ, ಈ ನಾಜೂಕಯ್ಯ ಬಾರಿ ಗೋಮುಖ ವ್ಯಾಘ್ರ! ಈ ಶುದ್ಧ ವೈದಿಕವಾದಿ ದವಾದ ಪುರುಷ್ಕಣಿಪೇ ಘಟ್ಟದ ಮೇಲಿನ-ಘಟ್ಟದ ಭಾಗವೆಂಬ ತಾರತಮ್ಯ ಬಿತ್ತಿ ಜನ್ಮ ಕೊಟ್ಟ ದ್ರೋಹ-ಮೋಸ-ವಂಚನೆ ಮಾಡುವ ಸ್ಕೀಮ್ ಹಾಕಿಕೊಂಡುಬಿಟ್ಟಿದ್ದಾನೆ. ಸ್ವ-ಕ್ಷೇತ್ರ ಶಿರಸಿ ಮತ್ತದರ ಸುತ್ತಲಿನ ಏರಿಯಾಗಳನ್ನಷ್ಟೇ ಅಭಿವೃದ್ಧಿಪಡಿಸಿ ಬ್ರಾಹ್ಮಣ ಸಾಮ್ರಾಜ್ಯ ಕಟ್ಟುವ ಮಸಲತ್ತನ್ನು ಈ ಮತಿಗೇಡಿ ಮಂತ್ರಿ ವ್ಯವಸ್ಥಿತವಾಗಿ ನಡೆಸುತ್ತಿದ್ದಾನೆ. ಇಡೀ ಜಿಲ್ಲೆಯ ಗಟ್ಟಿನಾಯಕನಾಗುವ ಅವಕಾಶಗಳಿದ್ದ ಕಾಗೇರಿ ಸಣ್ಣತನ-ಕ್ಷುಲ್ಲಕ ಕಿತಾಪತಿಗಳಿಂದ ಕುಬ್ಜನಾಗುತ್ತಿದ್ದಾನೆ. ಈತನ ಒಡೆದಾಳುವ ಧೂರ್ತತೆ ಕಂಡವರು 'ಕಾಗೇರಿ ನಾಯಕನಲ್ಲ; ನಾಲಾಯಕ್' ಎಂದುದ್ಗರಿಸುತ್ತಿದ್ದಾರೆ.

ಸಂಭಾವಿತನಂತೆ ಸೋಗು ಹಾಕುವ ಕುಕಲಿ ಕರಗತ ಮಾಡಿಕೊಂಡಿರುವ ಕಾಗೇರಿ ಖತರ್‌ನಾಕ್ ಬ್ರಾಹ್ಮಣ! ಈತ ಸಚಿವನಾದ ನಂತರ ಉತ್ತರ ಕನ್ನಡಕ್ಕೆ ಉಪಕಾರ ಮಾಡಿದ್ದಕ್ಕಿಂತ ಉಪದ್ರವ ಮಾಡಿದ್ದೇ ಹೆಚ್ಚು!! ಜಿಲ್ಲೆಯನ್ನು ಮಾನಸಿಕವಾಗಿ ಇಬ್ಭಾಗ ಮಾಡಿಕೊಂಡಿರುವ ಈ ಪಕ್ಕಾ ಚೆಡ್ಡಿ ಮೊದಲು ಮಾಡಿದ್ದು ತನ್ನ ಶಿಕ್ಷಣ ಮಂತ್ರಿಗಿರಿ ದುರುಪಯೋಗಪಡಿಸಿಕೊಂಡು ಶಿರಸಿಯನ್ನು ಇನ್ನೊಂದು ಶೈಕ್ಷಣಿಕ ಜಿಲ್ಲೆಯಾಗಿಸಿದ್ದು. ಜಿಲ್ಲೆಗೆ ಬಂದ ಅನುದಾನದಲ್ಲಿ ದೊಡ್ಡ ಪಾಲು ಮತ್ತು ವಿಶೇಷ ಯೋಜನೆಗಳನ್ನೆಲ್ಲ ತನ್ನ ಶಿರಸಿ-ಸಿದ್ಧಾಪುರಕ್ಕೆ ಕದ್ದೊಯ್ದಿದ್ದಾನೆ. ಜತೆಗೆ ಬುದ್ಧಿಪೂರ್ವಕವಾಗೇ ಕರಾವಳಿ ತಾಲ್ಲೂಕುಗಳ ಅಭಿವೃದ್ಧಿಗೆ ಕಲ್ಲುಹಾಕುತ್ತಿದ್ದಾನೆ.

ಕರಾವಳಿ ಪ್ರದೇಶದ ಹಲವು ಸಮಸ್ಯೆಗಳಲ್ಲಿ ಒಂದನ್ನೂ ಈತ ಪರಿಹರಿಸುವ ಗೋಜಿಗೆ ಹೋಗದೇ ಸ್ಯಾಡಿಸ್ಟ್‌ನಂತೆ ಇನ್ನಷ್ಟು ಸತಾಯಿಸುತ್ತಿದ್ದಾನೆ! ಕಾರವಾರಕ್ಕೆ ಮಂಜೂರಾಗಿದ್ದ ಪತ್ರಿಕಾ ಭವನವನ್ನು ಶಿರಸಿಗೆ ಹೈಜಾಕ್ ಮಾಡಿರುವ ಕಾಗೇರಿ ಕಾರವಾರದಲ್ಲಿ ನಡೆಯುತ್ತಿದ್ದ ಸಾಂಸ್ಕೃತಿಕ ಹಬ್ಬ ಕರಾವಳಿ ಉತ್ಸವ ನಡೆಯದಂತೆ ಮಾಡಿದ್ದಾನೆ. ಹಾಗಂತ ತನ್ನೂರು ಶಿರಸಿಯಲ್ಲಿ ಸೋಂದಾ ಉತ್ಸವವೇ ಮುಂತಾದ ತರಹೇವಾರಿ ಹಬ್ಬ ಸರ್ಕಾರಿ ಕಾಸಲ್ಲಿ ಆಚರಿಸಿ ಸಂಭ್ರಮಿಸುತ್ತ ಸ್ವಜಾತಿ ಹೈಗರಿಂದ 'ಶಹಬ್ಬಾಸ್ ಮಾಣಿ' ಅನ್ನಿಸಿಕೊಳ್ಳುತ್ತಾ ಕೃತಾರ್ಥನಾಗುತ್ತಿದ್ದಾನೆ. ಮೊನ್ನೆ ಕಾರವಾರದಲ್ಲಿದ್ದ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಕಚೇರಿಯನ್ನು ಎತ್ತಂಗಡಿ ಮಾಡಿಸಿ ಘಟ್ಟದ ಕೆಳಗಿನ ತಾಲ್ಲೂಕುಗಳು ಬರ್ಬಾದ್ ಆಗುವಂತೆ ಮಾಡಿದ್ದಾನೆ!

ಸೀಬರ್ಡ್ ನಿರಾಶ್ರಿತರ ಸಮಸ್ಯೆ, ಕಾರ್ಮಿಕರ ಸಮಸ್ಯೆ ಕಲ್ಲು ಕ್ವಾರಿ-ಉಸುಕು ಸಮಸ್ಯೆ ಹುಬ್ಬಳ್ಳಿ-ಅಂಕೋಲ ರೈಲು ಮಾರ್ಗ ಯೋಜನೆ, ಕಾರವಾರ ಬೀಚ್‌ಗೆ ಕೋಸ್ಟ್‌ಗಾರ್ಡ್ ಬಂದು ಕುಳಿತು ಬಡ ಬೆಸ್ತರನ್ನು ಬೀದಿಪಾಲಾಗಿಸುತ್ತಿರುವುದು ಇದ್ಯಾವುದೂ ಪರಿಹಾರವಾಗುವುದು ಕಾಗೇರಿಗೆ ಬೇಕಾಗಿಲ್ಲ. ಆತ ಶಿರಸಿ ಸೀಮೆಯನ್ನು ಜಿಲ್ಲೆಯಾಗಿಸಿದರೆ ತೊಂದರೆಯೇನಿಲ್ಲ. ಸಣ್ಣ-ಸಣ್ಣ ಜಿಲ್ಲೆಗಳು ಅಭಿವೃದ್ಧಿಗೆ ಪೂರಕ. ಆದರೆ ಶಿರಸಿಯಲ್ಲೊಂದು ಹವ್ಯಕ ಸಾಮ್ರಾಜ್ಯ ಕಟ್ಟಲೆಂದು ಕರಾವಳಿ ಪ್ರದೇಶಕ್ಕೆ ಅನ್ಯಾಯ ಮಾಡುವುದು ಅಕ್ಷಮ್ಯವೇ ಸರಿ. ಇಂಥ ನಂಜಿನ ಮನುಷ್ಯ-ನಿಧಾನ ವಿಷಜಂತು ನಾಯಕನಾಗಲು ಸಾಧ್ಯವಾ? ಆತ ಶಿರಸಿ ಜಿಲ್ಲೆ ಮಾಡಿದರೂ ಅಲ್ಲಿ ಲೀಡರ್ ಆಗಲು ಸಾಧ್ಯವಿಲ್ಲ. ಈತನ ಜಾತೀಯತೆಯಿಂದ ಆ ಭಾಗದ ಅಬ್ರಾಹ್ಮಣರು ಕೆರಳಿಕೆಂಡವಾಗಿದ್ದಾರೆ. ಒಟ್ಟಿನಲ್ಲಿ ಕಾಗೇರಿ ಕಾರವಾರ-ಶಿರಸಿ ಎರಡೂ ಪ್ರದೇಶಕ್ಕೂ ದೊಡ್ಡ ಶಾಪವೇ!

ಉದ್ದಕ್ಕೂ ಆಳುವ ಖೂಳರ ನಿರ್ಲಕ್ಷ್ಯ-ದೌರ್ಜನ್ಯಕ್ಕೆ ತುತ್ತಾಗುತ್ತಲೇ ಬಂದಿರುವ, ಈಗಿತ್ತಲಾಗಂತೂ ಹಲವು ಜ್ವಲಂತ ಸಮಸ್ಯೆಗಳ ಸುಳಿಗೆ ಸಿಲುಕಿ ಸುಸ್ತಾಗಿರುವ ಉತ್ತರ ಕನ್ನಡಕ್ಕೆ ಅಷ್ಟು ಅರ್ಥದಲ್ಲೂ 'ಈತನೇ ನಮ್ಮ ನಾಯಕ' ಎಂಬಂಥವನ ಅಗತ್ಯ ಅತಿಯಾಗಿದೆ! ಆದರೆ ಅಂಥ ವಿಶ್ವಾಸಾರ್ಹ ನಿಜ ನಾಯಕತ್ವ ನೀಡುವ ಛಾತಿವಂತ ಯಾವ ಪಕ್ಷದಲ್ಲೂ ಇಲ್ಲ! ದುಡ್ಡು-ತೋಳು-ಅಧಿಕಾರ-ಧರ್ಮಾಂಧತೆ ಬಲದಿಂದ ನಾಯಕತ್ವ ಪಡೆಯುತ್ತೇನೆಂದು ಹೊರಡುವ ಹರಾಮಿಗಳೇ ಜಿಲ್ಲೆಯ ರಾಜಕಾರಣದಲ್ಲಿ ಹಾವಳಿ ಎಬ್ಬಿಸುತ್ತಿದ್ದಾರೆ.


ಪಕ್ಷ-ಪಂಗಡದ ಪಕ್ಷಪಾತಿಯಾಗಿ ಯೋಚಿಸದ, ಧರ್ಮಕಾರಣ ಕಂಡಲ್ಲಿ ಕಿವಿ ಹಿಂಡುವ, ಜಾತಿ-ಗುಂಪು ರಾಜಕೀಯ ಮೀರಿ ನಿಲ್ಲುವ, ಸಮಗ್ರ ಜಿಲ್ಲೆಯ ಭೌಗೋಳಿಕ-ಸಾಮಾಜಿಕ-ಆರ್ಥಿಕ ಪರಿಕಲ್ಪನೆಯುಳ್ಳ, ರಾಜಕೀಯವಾಗಿಯೂ ಎಲ್ಲವನ್ನೂ ನಿಭಾಯಿಸಿಕೊಂಡು ಹೋಗಬಲ್ಲ, ದೂರದೃಷ್ಟಿ ಹೊಂದಿರುವ ದ್ವೇಷಾಸೂಯೆಗಳಿಲ್ಲದ, ಸಮುಚಿತ್ತದ, ನಿಸ್ವಾರ್ಥ ವ್ಯಕ್ತಿತ್ವ ಇದ್ದಂಥ ಒಬ್ಬ ನಾಯಕನಿಗಾಗಿ ಉತ್ತರ ಕನ್ನಡ ಈಗ ಹಸಿದು ಹಂಬಲಿಸುತ್ತಿದೆ...

ಈ ನತದೃಷ್ಟ ಜಿಲ್ಲೆಯ ಶಾಪ ಮುಕ್ತಿ ಎಂದು?

ಆರೋಗ್ಯ ಯೋಜನೆಯ ದುಡ್ಡು ಅಯೋಗ್ಯರ ಹುಂಡಿಗೆ!

ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ಸದಾಕಾಲ ವಿವಿಧ ಬಂಡಾಯ-ಬೇಗೆಗಳಲ್ಲೇ ಬೇಯುತ್ತಾ ಸಾಗುತ್ತಿದೆ. ಇದೆಲ್ಲದರ ನಡುವೆ ನೈಜ ಅಭಿವೃದ್ಧಿಗಳೆಲ್ಲ ಸಮಾಧಿ ಸೇರಿರುವುದು ಕಣ್ಣ ಮುಂದಿನ ಸತ್ಯ. ಒಂದು ಜನಪರ ಸರ್ಕಾರ ಹೇಗೆ ನಡೆದುಕೊಳ್ಳಬೇಕಿದೆಯೋ, ಅದಕ್ಕೆಲ್ಲ ತದ್ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿರುವ ಸರ್ಕಾರ ಆರೆಸ್ಸೆಸ್‌ನ ವಿಷಕಾರಿ ಅಜೆಂಡಾಗಳನ್ನು ಎಲ್ಲೆಡೆ ಪಸರಿಸುವ ಕೆಲಸವನ್ನು ಅತೀ ನಿಷ್ಠೆಯಿಂದ ಮಾಡುತ್ತಿದೆ. ಇಂಥ ದುಷ್ಟ ಕಾರ್ಯಾಚರಣೆಗೆ ಇದೀಗಲೇ ಶಿಕ್ಷಣ ರಂಗ, ಕೃಷಿ ಕ್ಷೇತ್ರಗಳೆಲ್ಲ ಬಲಿಯಾಗಿವೆ. ಅದೀಗ ವೈದ್ಯಕೀಯ ಕ್ಷೇತ್ರವನ್ನೂ ಆವರಿಸಿಕೊಂಡಿದೆ.

ಇಂಥ ಕೇಸರೀಕರಣದ ಕೊಳಕು ಕೆಲಸಗಳಿಗೆ ಯಡ್ಡಿ ಮತ್ತವರ ಕ್ಯಾಬಿನೆಟ್ಟಿನ ಸ್ವಂತದ ಹಣ ಖರ್ಚಾಗುತ್ತಿಲ್ಲ. ಸಂಘ ಪರಿವಾರದ ಲಾಠಿವೀರರೂ ಕಾಸು ಕೊಡುವುದಿಲ್ಲ. ಬದಲಾಗಿ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಅಥವಾ ರಾಜ್ಯ ಸರ್ಕಾರವೇ ಒಳ್ಳೆ ಕೆಲಸಗಳಿಗೆ ಮೀಸಲಿಟ್ಟ ಹಣವೇ ಬಳಸಲ್ಪಡುತ್ತಿದೆ. ಸದ್ಯ ಆರೋಗ್ಯ ಇಲಾಖೆಯ ವತಿಯಿಂದ ವೈದ್ಯರು ಮತ್ತು ಅರೆ ವೈದ್ಯಕೀಯ ಸಿಬ್ಬಂದಿಗಳಿಗೆ ನೀಡಲಾಗುತ್ತಿರುವ ಧ್ಯಾನದ ಹೆಸರಿನ ಕೇಸರಿ ಶಿಬಿರಗಳೂ ಸರ್ಕಾರಿ ಹಣ ಲಪಟಾಯಿಸುತ್ತಿದೆ. ಕೇಸರಿ ವಿಷ ಹರಡುತ್ತಲೂ ಇದೆ.



ಇಂತಹುದೊಂದು ಶಿಬಿರದ ಹೆಸರಿನ ದರೋಡೆ, ಕೇಸರಿ ವಿಷ ಹರಡುವ ಕಾರ್ಯಕ್ರಮ ಈಗ್ಗೆ ಎರಡ್ಮೂರು ತಿಂಗಳ ಹಿಂದಿನಿಂದಲೇ ಆರಂಭಗೊಂಡು ಈಗಲೂ ಬ್ರೇಕಿಲ್ಲದೆ ಮುಂದುವರೆಯುತ್ತಿದೆ. ಈ ಶಿಬಿರದ ರೂಪುರೇಷೆ, ಹುನ್ನಾರಗಳನ್ನು ಹೇಳುವ ಮೊದಲು ಇದಕ್ಕೆ ಬಲಿಬಿದ್ದ ದುಡ್ಡಿನ ಮೂಲದ ಬಗ್ಗೆ ಹೇಳಬೇಕಿದೆ. ಕೆಎಚ್‌ಎಸ್‌ಡಿಪಿ ಯೋಜನೆಯಡಿ ವಿಶ್ವ ಬ್ಯಾಂಕ್‌ನಿಂದ ಪಡೆದ ಆರ್ಥಿಕ ನೆರವಿನ ಮೊತ್ತ ಹಾಗೂ ಕೇಂದ್ರ ಸರ್ಕಾರದ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ (NRHN) ಯೋಜನೆಗಳ ಭಾರೀ ಮೊತ್ತದ ಹಣ ಅರಗಿಸಿಕೊಳ್ಳುವ ಹುನ್ನಾರವಿದು.

ಮಾನಸಿಕ ಆರೋಗ್ಯ ಸ್ತಿಮಿತದಲ್ಲಿರುವ ಸಚಿವನೊಬ್ಬನ ಸಾರಥ್ಯವಿದ್ದಿದ್ದರೆ ರಾಜ್ಯ ಆರೋಗ್ಯ ಇಲಾಖೆ ಈ ಹಣವನ್ನು ಬಡಜನರ ಆರೋಗ್ಯದ ದೃಷ್ಟಿಯಿಂದಲೇ ವ್ಯಯಿಸುತ್ತಿತ್ತು. ಆದರೆ, ಶ್ರೀರಾಮುಲುನೆಂಬ ಅವಿವೇಕಿ ಇಲ್ಲಿನ ಸರ್ಕಾರಿ ಆಸ್ಪತ್ರೆಗಳನೇಕವು ದನದ ಹಟ್ಟಿಗಿಂತ ಕಡೆಯಾಗಿ ಬಡರೋಗಿಗಳು ಪಾಡು ಪಡುತ್ತಿದ್ದರೂ ಕೇರ್ ಮಾಡದೆ, ವಿಶ್ವಬ್ಯಾಂಕ್ ಹಾಗೂ ಕೇಂದ್ರದ ಹಣವನ್ನು ಕೇಸರೀಕರಣಕ್ಕೆ ವಿನಿಯೋಗಿಸಿದ್ದಾನೆ.

ಈ ರೀತಿ ಪಕ್ಕಾ ವಂಚನೆಯ ಭೂಮಿಕೆಯಲ್ಲೇ ನಿಂತಿರುವ ಇಂಥ ಶಿಬಿರಗಳು ಕಳೆದ ವರ್ಷದ ಡಿಸೆಂಬರ್ ತಿಂಗಳಲ್ಲೇ ಚಿಕ್ಕಮಗಳೂರು ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ನಡೆದಿವೆ. ತದನಂತರ ಅದು ಹಾಸನಕ್ಕೂ ಹರಡಿಕೊಂಡು ರಾಜ್ಯಾದ್ಯಂತ ಪ್ರತಿ ಜಿಲ್ಲೆಗಳಿಗೂ ಹಬ್ಬಿಕೊಂಡಿದೆ. ಬಡರೋಗಿಗಳ ಕಾಸಿಗೆ ಕತ್ತರಿಯಾಡಿಸಿ ನಡೆಯುವ ಈ ಶಿಬಿರಗಳ ಘನ ಉದ್ದೇಶ ಧ್ಯಾನ ಹಾಗೂ ಮನಪರಿವರ್ತನೆ. ಬೆಳಗ್ಗೆ 7 ಗಂಟೆಯಿಂದ ಆರಂಭಗೊಳ್ಳುವ ಧ್ಯಾನ ಕೈಂಕರ್ಯ ಮೂರೂ ದಿನ ತಲಾ 1 ಗಂಟೆಯಷ್ಟು ಕಾಲ ಮುಂದುವರೆಯುತ್ತದೆ. ಈ ಶಿಬಿರ ನಡೆಸಿಕೊಡುವ ಸಂಪನ್ಮೂಲ ವ್ಯಕ್ತಿಗಳು 'ನಾವೇಕೆ ಜೀವಿಸಬೇಕು', 'ನಾವು ಹೇಗೆ ಜೀವಿಸಬೇಕು', 'ಸಕಾರಾತ್ಮಕ ಪ್ರತಿಕ್ರಿಯೆ' ಮುಂತಾದ ತಗಡು ವಿಷಯಗಳ ಬಗ್ಗೆ ಶಿಬಿರಾರ್ಥಿಗಳಿಗೆ ಹುಳಿ ಬಿಡತೊಡಗುತ್ತಾರೆ. ಇದಕ್ಕೂ ಆರೋಗ್ಯಕ್ಕೂ, ವೈದ್ಯಕೀಯ ಕ್ಷೇತ್ರಕ್ಕೂ ಏನು ಸಂಬಂಧವಿದೆ? ವೈದ್ಯರಿಗೆ ಈ ರೀತಿಯ ಶಿಬಿರಗಳಿಂದ ಬೋಧನೆ ಕೊಡುವುದರಿಂದ ಕರ್ನಾಟಕದಲ್ಲಿ ಕಂಗಾಲಾಗಿರುವ ಯಾರಾದರೂ ಬಡರೋಗಿಯ ಆರೋಗ್ಯ ಸುಧಾರಣೆಯಾಗುತ್ತದೆಯೇ? ಇವು ಪ್ರಮುಖ ಪ್ರಶ್ನೆಗಳು.

ಇನ್ನು ತರಬೇತಿ ನೀಡುವ ಮಹಾನ್ 'ಸಂಪನ್ಮೂಲ' ವ್ಯಕ್ತಿಗಳಿಗೆ ಫಿಕ್ಸಾಗಿರುವ ರೇಟು, ಅವರ ಕಾರ್ಯವೈಖರಿಗಳು ಭೀಕರವಾಗಿದೆ. ಅದರಲ್ಲೂ ಚಿಕ್ಕಮಗಳೂರು ಮತ್ತು ಶಿವಮೊಗ್ಗದ ಸಿಬ್ಬಂದಿಗಳಿಗೆ ಚಿಕ್ಕಮಗಳೂರಿನ ಈಗಲ್ ಐ ರೆಸಾರ್ಟ್‌ನಲ್ಲಿ ಶಿಬಿರ ನಡೆಸಲಾಗಿದೆ. ಈಗಲ್ ಐ ಹೇಳಿಕೇಳಿ ಅತ್ಯಂತ ದುಬಾರಿ ರೆಸಾರ್ಟು. ಇದರಲ್ಲಿ 30 ಮಂದಿಯ ತಂಡವನ್ನು 1 ಬ್ಯಾಚ್ ಅಂತ ತೀರ್ಮಾನಿಸಲಾಗಿತ್ತು. ಪ್ರತೀ ಬ್ಯಾಚ್‌ಗೆ ತರಬೇತಿ ನೀಡುವ ಜವಾಬ್ದಾರಿ ವಹಿಸಿಕೊಂಡ ಸಂಸ್ಥೆ 85 ಸಾವಿರ ರೂಪಾಯಿ ಗುಂಜಿಕೊಂಡಿದೆ. ಅಂದರೆ ಎರಡೂ ಬ್ಯಾಚ್‌ಗಳ ಮೂರು ದಿನಗಳ ತರಬೇತಿಗೆ 1.70 ಲಕ್ಷ ರೂಪಾಯಿ ವ್ಯಯಿಸಲಾಗಿದೆ. ಇನ್ನು ಪ್ರತೀ ಶಿಬಿರಾರ್ಥಿ ಸಿಬ್ಬಂದಿಗೆ 1,100 ರಂತೆ ಅಖಂಡ 59,400 ರೂಪಾಯಿ ಈಗಲ್ ದಿ ರೆಸಾರ್ಟ್‌ಗೆ ಕೊಡಲಾಗಿದೆ.

ಆರೋಗ್ಯ ಇಲಾಖೆ ಹಣ ಹೊಡೆದುಕೊಳ್ಳಲು ರೂಪಿಸಿದ ಈ ತರಬೇತಿಯ ಜವಾಬ್ದಾರಿ ಹೊತ್ತುಕೊಂಡಿರುವುದು ಅನ್ನಪೂರ್ಣ ಅಸೋಸಿಯೇಟ್ಸ್ ಎಂಬ ಸಂಸ್ಥೆ. ಇದರ ಕಚೇರಿಯಿರುವುದು ಹರಿಹರದ ಚಿಂತನಾ ನಗರದಲ್ಲಿ. ಇದರ ಮ್ಯಾನೇಜಿಂಗ್ ಡೈರೆಕ್ಟರನಾಗಿರುವವನು ಶೇಷ ನಾರಾಯಣ. ಈತನ ಅವಶೇಷದಂತೆ ಅಡ್ಡಾಡುವಾತ ಶ್ರೀನಿವಾಸರಾವ್ ಎಂಬ ಇನ್ನೊಬ್ಬ ಖದೀಮ. ಈ ಶ್ರೀನಿವಾಸ ರಾವ್ ಅಂತೂ ಅಪ್ಪಟ ಸಮಾಜಸೇವೆ ಮಾಡುವವನ ಗೆಟಪ್ಪಿನಲ್ಲೇ ಮಾತಾಡುತ್ತಾನೆ. ಫೀಜ್‌ನ ವಿಚಾರವೆತ್ತಿದ್ದರೆ 'ಹೇ... ಹಂಗೇನೂ ಇಲ್ಲ. ಎಷ್ಟ್ ಕೊಟ್ರೂ ತಂಗತೀವಿ' ಅಂತಲೂ ಅನ್ನುತ್ತಾನೆ. ಇಂಥಾ ಅನ್ನಪೂರ್ಣ ಅಸೋಸಿಯೇಷನ್ ಆರೋಗ್ಯ ಇಲಾಖೆಯ ದರೋಡೆಗೆ ಪಸಂದಾಗಿ ಸಪೋರ್ಟ್ ಮಾಡಿದೆ.


ಇದು ಕೇಂದ್ರದ ಬೃಹತ್ ಮೊತ್ತದ ಹಣ ನುಂಗಿ ಅದಕ್ಕೊಂದು ಲೆಕ್ಕ ಸೃಷ್ಟಿಸುವ ಮತ್ತು ಕೇಸರೀಕರಣದ ವಿಷ ಹರಡುವ ಹುನ್ನಾರ. ಮಾರ್ಚ್ ತಿಂಗಳ ಅಂತ್ಯದೊಳಗೆ ಈ ತರಬೇತಿಗೆ ಒಂದಷ್ಟು ಹಣ ಸುರುವಿ ಲೆಕ್ಕ ಕೊಡುವುದು ಆರೋಗ್ಯ ಇಲಾಖೆಯ ತಗ್ಗರಿ. ಈ ಪೀಡೆಯಿಂದು ಎಲ್ಲಾ ಜಿಲ್ಲೆಗಳಲ್ಲೂ ಹರಡಿದೆ. ಒಂದಷ್ಟು ಕೋಮು ವಿಷವೂ ಚೆಲ್ಲಾಡಿದೆ.

ಬಡರೋಗಿಗಳ ಹಣವನ್ನು ಈ ರೀತಿ ದುರುಪಯೋಗಪಡಿಸಿಕೊಳ್ಳುತ್ತಿರುವ ಶ್ರೀರಾಮುಲುನಿಗೆ, ಇದಕ್ಕೆ ಹುಕುಂ ನೀಡುತ್ತಿರುವ ಯಡ್ಡಿಗೆ ಯಾವುದರಲ್ಲಿ ಹೊಡೆಯಬೇಕು?

'ವಿಶೇಷ ತನಿಖಾ ದಳ'ದ ವರದಿಯು ಮೋದಿಯನ್ನು ಕಟಕಟೆಗೆ ಎಳೆದು ತರಬೇಕು

ಖ್ಯಾತ ಸಮಾಜ ಶಾಸ್ತ್ರಜ್ಞ ಶಿವ್ ವಿಶ್ವನಾಥನ್ 'ವಿಶೇ ತನಿಖಾ ದಳ'ದ ವರದಿಯ ಬಗ್ಗೆ 'ತೆಹೆಲ್ಕ' ಪತ್ರಿಕೆಗೆ ನೀಡಿರುವ ಪ್ರತಿಕ್ರಿಯೆ

ಅನುವಾದ: ಕೆ.ಫಣಿರಾಜ್



'ತೆಹೆಲ್ಕ' ಪತ್ರಿಕೆಯನ್ನು ಹೊರತುಪಡಿಸಿ, ಬೇರಾವ ಪ್ರಮುಖ ಪತ್ರಿಕೆಗಳೂ ಈ ತನಿಖಾ ವರದಿಯ ವಿವರಗಳನ್ನು ಬಹಿರಂಗಪಡಿಸುವ ಸಂಕಲ್ಪ ತೋರಿಸಲಿಲ್ಲವಷ್ಟೇ. ಇದು ನಮ್ಮ ಮುಖ್ಯಧಾರೆಯ ಮಾಧ್ಯಮಗಳ, ಅದರಲ್ಲೂ ಮುಖ್ಯವಾಗಿ ಗುಜರಾತಿನ ಮಾಧ್ಯಮಗಳ, ಅಸಲಿ ಮನೋಧರ್ಮವನ್ನು ತೋರಿಸುತ್ತದೆ.

'ವಿಶೇಷ ತನಿಖಾ ದಳ'ವು ನರೇಂದ್ರ ಮೋದಿಯ ಮೇಲೆ ಮಾಡಿರುವ ದೋಷಾರೋಪಣೆ ಬಹಳ ದೊಡ್ಡದು. ವರದಿಯು 2002ರ ಹಿಂಸಾಚಾರದಲ್ಲಿ ಮೋದಿ ಭಾಗಿಯಾಗಿದ್ದಾನೆ ಎಂದು ಮಾತ್ರವಲ್ಲದೆ, ಅಪರಾಧವನ್ನು ಸಾಬೀತುಮಾಡಬಲ್ಲ ಸಾಕ್ಷ್ಯಾಧಾರಗಳನ್ನು ನಾಶಪಡಿಸುವಲ್ಲಿಯೂ ಆತ ಬಹು ಮುಖ್ಯ ಪಾತ್ರ ವಹಿಸಿದ್ದಾನೆ ಎಂದು ಆರೋಪಿಸುತ್ತಿದೆ. 'ಹೊರಗುತ್ತಿಗೆ' ವ್ಯವಹಾರದಲ್ಲಿ ಭಾರತಕ್ಕೆ ವಿಶೇಷ ಪರಿಣಿತಿ ಇದೆಯೆಂಬ ಖ್ಯಾತಿಯಂತೂ ಇದೆಯಲ್ಲ, ಆದರೆ ಮೋದಿಯ ಪರಿಣಿತಿ ಇದನ್ನೂ ಮೀರಿದ್ದು. ಆತ ಕೊಲೆಗಳನ್ನೇ 'ಹೊರಗುತ್ತಿಗೆ' ನೀಡಿಬಿಟ್ಟಿದ್ದಾನೆ.

ತಮಗಿಷ್ಟ ಬಂದ ಹಾಗೆ ಅಪರಾಧಗಳನ್ನು ಮುಚ್ಚಿಹಾಕುವಂತೆ ಪೊಲೀಸರಿಗೆ ಆಜ್ಞೆ ನೀಡುವ ಸಲುವಾಗಿ, ಮೋದಿ ಇಬ್ಬರು ನಂಬಿಕಸ್ಥರನ್ನು ಕಳಿಸಿದ್ದ ಎಂದು ವರದಿ ತಿಳಿಸುತ್ತದೆ! ಇದು ನಿಜಕ್ಕೂ ಭಯಾನಕ. ಕೊಲೆಗೈದ ಪಾತಕಿಗಳನ್ನು ರಕ್ಷಿಸುವುದೂ, ಕೊಲೆಗೈಯುವುದೂ ಎರಡು ಒಂದೇ ಬಗೆಯ ಹೀನ ಅಪರಾಧಗಳು. ನಮ್ಮ ಮಾಧ್ಯಮಗಳು ನಕಲಿ ಎನ್ಕೌಂಟರುಗಳನ್ನು ದೊಡ್ಡ ಸುದ್ದಿ ಮಾಡುವುದರಲ್ಲಿ ಭಾರೀ ಉತ್ಸಾಹ ತೋರಿದ ಪರಿಣಾಮವಾಗಿ, 2002ರ ಗಲಭೆಯ ಅಪರಾಧಗಳು ಹಿನ್ನೆಲೆಗೆ ಸರಿದುಬಿಟ್ಟವು. 'ವಿಶೇಷ ತನಿಖಾ ದಳ'ದ ವರದಿಯ ಪ್ರಕಟಣೆಯ ಮೂಲಕ 2002ರ ಕೋಮುಗಲಭೆಯ ಹಿಂಸೆ ಮತ್ತೊಮ್ಮೆ ಪ್ರಾಮುಖ್ಯತೆಯನ್ನು ಪಡೆದುಕೊಂಡಿರುವುದೇನೋ ಸರಿ. ಆದರೆ ಪ್ರಸ್ತುತ ವರದಿಯು ಮೋದಿ ಇಂತಿಂಥ ಕೃತ್ಯಗಳಲ್ಲಿ ಶಾಮೀಲಾಗಿದ್ದಾನೆ ಎಂದು ದೋಷಾರೋಪಣೆ ಮಾಡುತ್ತಿದೆಯೇ ಹೊರತು, ಆತನನ್ನು ಕಟಕಟೆಗೆ ತಂದು ನಿಲ್ಲಿಸಿ ಕಾನೂನು ರೀತ್ಯಾ ವಿಚಾರಣೆಗೆಳೆಯುವಂತಹ ಸಾಕ್ಷ್ಯಾಧಾರಗಳನ್ನು ಪ್ರಸ್ತುತಪಡಿಸುತ್ತಿಲ್ಲ. ಮೋದಿ ಹಿಂಸೆ ನಡೆಯುವುದಕ್ಕೆ ರಾಜಕೀಯ ಅವಕಾಶ ಮಾಡಿಕೊಟ್ಟ ಎಂದು ತೋರಿಸುವುದಕ್ಕೂ, ಆತನ ಕೃತ್ಯಗಳು ಕಾನೂನುರೀತ್ಯಾ ಅಪರಾಧಗಳಾಗಿದ್ದು ಆತ ಕಟಕಟೆಯಲ್ಲಿ ಆಪಾದಿತನಾಗಿ ನಿಲ್ಲುವಂತೆ ಮಾಡುವುದಕ್ಕೂ, ನಡುವೆ ತುಂಬಾ ಸೂಕ್ಷ್ಮವಾದ ಕ್ರಿಯಾವ್ಯತ್ಯಾಸಗಳಿವೆ. ತನಿಖಾ ದಳದ ವರದಿಯು, ಮೋದಿ ರಾಜಕೀಯವಾಗಿ ಹಿಂಸೆಯನ್ನು ಬೆಂಬಲಿಸಿ ಅಪರಾಧವೆಸಗಿದ್ದಾನೆ, ಆತ ಅದನ್ನರಿತು ಪಶ್ಚಾತ್ತಾಪದ ಬೇಗೆಯಲ್ಲಿ ನರಳಲಿ ಎನ್ನುವ ಇಂಗಿತವನ್ನು ವ್ಯಕ್ತಪಡಿಸುತ್ತದೆಯೆ ವಿನಹ ಆತ ನಿಜಕ್ಕೂ ಹಿಂಸೆಯಲ್ಲಿ ಕಾನೂನುಸಂಹಿತೆಯನ್ನು ಉಲ್ಲಂಘಿಸಿ ಭಾಗಿಯಾಗಿದ್ದಾನೆ, ಆ ಪ್ರಕಾರ ಆತ ಆರೋಪಿಯಾಗಿ ಕಟಕಟೆಯಲ್ಲಿ ನಿಲ್ಲಲಿ ಎಂದು ಸ್ಪಷ್ಟವಾಗಿ ಹೇಳಲು ಹಿಂದೇಟು ಹಾಕಿದೆ. ಪ್ರಸ್ತುತ ವರದಿಯು ಪ್ರೇತವನ್ನು ಹಿಡಿದು ಅದರ ಚೇಷ್ಟೆಯನ್ನು ನಿಗ್ರಹಿಸುವ ಕಾರ್ಯ ಮಾಡದೆ, ಪ್ರೇತ ಬಿಡಿಸು ಸಾಂಕೇತಿಕ ಆಚರಣೆಯನ್ನಷ್ಟೇ ನೆರವೇರಿಸಿ ಕೈತೊಳೆದುಕೊಂಡಿರುವುದು ನಿಜಕ್ಕೂ ದುಃಖಕರ ಸಂಗತಿ.

ಇನ್ನೀಗ ನಾವು ಪ್ರಸ್ತುತ ವರದಿಯ ಬಗ್ಗೆ ಸರ್ವೋಚ್ಚ ನ್ಯಾಯಾಲಯ ಯಾವ ನಿಲುವು ತಳೆಯುತ್ತದೆ, ಸರ್ವೋಚ್ಚ ನ್ಯಾಯಾಲಯ ನೇಮಿಸಿರುವ ನಿಷ್ಪಕ್ಷಪಾತಿ ಸಮಿತಿಯ ಸದಸ್ಯರು ಯಾವ ಬಗೆಯಲ್ಲಿ ತಮ್ಮ ಪ್ರತಿಕ್ರಿಯೆಯನ್ನು ನೀಡುತ್ತಾರೆ ಎಂದು ಕಾಯ್ದು ನೋಡಬೇಕಾಗಿದೆ. ಸರ್ವೋಚ್ಚ ನ್ಯಾಯಾಲಯವು ವರದಿಯ ಬಗ್ಗೆ ಯಾವ ರೀತಿಯ ನಿಲುವನ್ನು ಪ್ರಕಟಿಸುತ್ತದೆ ಎನ್ನುವುದನ್ನು ನೋಡಿಕೊಂಡು, ನಾಗರಿಕ ಸಂಘಟನೆಗಳು "ಯಾವ ವಾಸ್ತವಿಕ ಸಾಕ್ಷ್ಯ"ಗಳನ 'ವಿಶೇಷ ತನಿಖಾ ದಳ'ದ ವರದಿ ಸರಿಯಾಗಿ ಉಪಯೋಗಿಸಿಕೊಂಡಿಲ್ಲ, "ಯಾವ ಮಹತ್ವದ ಸಾಕ್ಷಿಗಳನ್ನು" ನಾಶಪಡಿಸಲಾಗಿದೆ ಎಂಬುದರ ಬ ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಿ ಪ್ರಸ್ತುತಪಡಿಸುವಲ್ಲಿ ಮುಂದಾಳತ್ವ ವಹಿಸಬೇಕಾಗುತ್ತದೆ. ಮೋದಿ ಮನುಷ್ಯರ ಜೀವಗಳನ್ನು ಬಲಿ ತೆಗೆದುಕೊಂಡಿದ್ದಾನೆ ಎಂಬ ಸತ್ಯದ ಜೊತೆಗೇ ಯಾವ ಬಗೆಯಲ್ಲಿ ಆತ ಶಿಕ್ಷೆ

ಗುಜರಾತ್ ನರಮೇಧ: ವಿಶೇಷ ತನಿಖಾ ತಂಡದ ವರ ನ್ಯಾಯದ ಗರ್ಭಪಾತ

● ಜೆ. ರಾಜಶೇ

ಖ್ಯಾತ ಲೇಖಕ ಖುಷ್ವಂತ್ ಸಿಂಗ್ 'ನಗಬೇಡಿ' ಎಂದು ಮೊದಲೇ ತಾಕೀತು ಮಾಡಿ ಹೇಳಿದ ಒಂದು ಜೋಕ್ ಹೀಗಿದೆ. ಕಳ್ಳರನ್ನು ಪತ್ತೆಹಚ್ಚುವ ಕ್ಯಾಮೆರಾ ಕಣ್ಣಿನ ರೋಬೋಟ್ ಒಂದನ್ನು ಅಮೆರಿಕದ ವಿಜ್ಞಾನಿಗಳು ನಿರ್ಮಿಸಿದರು. ಆ ಯಂತ್ರವನ್ನು ಪರೀಕ್ಷಾರ್ಥ ಅಮೆರಿಕದಲ್ಲೇ ಒಂದು ಸಾರ್ವಜನಿಕ ಸ್ಥಳದಲ್ಲಿ ಇರಿಸಿದಾಗ ಅರ್ಧ ಗಂಟೆಯಲ್ಲಿ ಅದು 20 ಕಳ್ಳರನ್ನು ಹಿಡಿಯಿತು. ಅಷ್ಟೇ ಅವಧಿಯಲ್ಲಿ ಇಂಗ್ಲೆಂಡ್‌ನಲ್ಲಿ 50, ಸ್ಪೇನ್‌ನಲ್ಲಿ 65 ಮತ್ತು ಘಾನಾದಲ್ಲಿ 600 ಕಳ್ಳರನ್ನು ಅದು ಹಿಡಿಯಿತು. ಭಾರತದಲ್ಲಿ ಮಾತ್ರ ಆ ಯಂತ್ರಕ್ಕೆ ಒಬ್ಬ ಕಳ್ಳನನ್ನೂ ಹಿಡಿಯಲಾಗಲಿಲ್ಲ; ಯಾಕೆಂದರೆ ಐದೇ ನಿಮಿಷಗಳಲ್ಲಿ ಆ ಯಂತ್ರವೇ ಕಳುವಾಗಿತ್ತು, ನಗಬೇಡಿ, ಇದು ಭಾರತದ ನ್ಯಾಯ ವ್ಯವಸ್ಥೆಗೆ ಒಂದು ದೃಷ್ಟಾಂತ ಕತೆಯೂ ಹೌದು. ಅಪರಾಧಿಗಳನ್ನು ಪತ್ತೆಹಚ್ಚಿ ಶಿಕ್ಷಿಸಬೇಕಾದ ನ್ಯಾಯ ವ್ಯವಸ್ಥೆಯನ್ನು ಭಾರತದಲ್ಲಿ ಬಲಿಷ್ಠರು ಅಪಹರಿಸಿದ್ದಾರೆ. ನ್ಯಾಯಾಧೀಶರೇ ಲಂಚಕೋರರಾಗಿದ್ದು ನ್ಯಾಯ ಎಂದರೆ ಏನು? ಎಲ್ಲಿ ಸಿಗುತ್ತದೆ ಅದು? ಎಂದು ಹುಡುಕಿಕೊಂಡು ಹೋಗುವ ಪರಿಸ್ಥಿತಿ ದೇಶದಲ್ಲಿ ಈಗ ಉಂಟಾಗಿದೆ. ಸುಪ್ರೀಂಕೋರ್ಟಿನ ವರಿಷ್ಠ ನ್ಯಾಯಾಧೀಶ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ ಎಂಬ ಸಂಗತಿ ಕೂಡ ಈಗ ಯಾರನ್ನೂ ತಲ್ಲಣಗೊಳಿಸುವುದಿಲ್ಲ, ನೈತಿಕ ಮಾನದಂಡಗಳು ಕಣ್ಮರೆಯಾಗಿರುವ ದೇಶ ಯಾವುದಕ್ಕೂ ಸ್ಪಂದಿಸದ ಕಳೇಬರದಂತಾಗಿದೆ.

ಸುಪ್ರೀಂಕೋರ್ಟಿನ ಇತ್ತೀಚಿಗಿನ 16 ವರಿಷ್ಠ ನ್ಯಾಯಾಧೀಶರುಗಳಲ್ಲಿ ಅರ್ಧದಷ್ಟು ಭ್ರಷ್ಟರು ಎಂದು ಖ್ಯಾತ ನ್ಯಾಯವಾದಿ ಶಾಂತಿಭೂಷಣ್ ಹೇಳಿದ್ದು ಕೋರ್ಟಿನ ಮುಂದೆಯೇ ಅವರು ತಮ್ಮ ಹೇಳಿಕೆಯನ್ನು ಪುನರುಚ್ಚರಿಸಿದ್ದಾರೆ. ನ್ಯಾಯಾಧೀಶರ ಭ್ರಷ್ಟಾಚಾರ, ನ್ಯಾಯವ್ಯವಸ್ಥೆಗೆ ಹಿಡಿದ ರೋಗದ ಒಂದು ಲಕ್ಷಣ ಮಾತ್ರ. ಬಡವರ ವಿರುದ್ಧ ಶ್ರೀಮಂತರ ಪರ, ಕಾರ್ಮಿಕರ ವಿರುದ್ಧ ಮಾಲೀಕರ ಪರ, ಆದಿವಾಸಿಗಳ ವಿರುದ್ಧ ಗಣಿ ಕಂಪನಿಗಳ ಪರ, ಅಭಿವೃದ್ಧಿ ಯೋಜನೆಗಳ ಸಂತ್ರಸ್ತರ ವಿರುದ್ಧ ಸರ್ಕಾರದ ಪರ, ಒಟ್ಟನಲ್ಲಿ ಹೇಳುವುದಾದರೆ ಸಾಮಾನ್ಯರ ವಿರುದ್ಧ ವ್ಯವಸ್ಥೆಯ ಪರ ತೀರ್ಪು ಕೊಡುವ ಕಾಯಿಲೆ ನ್ಯಾಯಾಂಗದ ಎಲ್ಲ ಹಂತಗಳನ್ನೂ ಈಗ ವ್ಯಾಪಿಸಿದೆ. ಎರಡು ಉದಾಹರಣೆಗಳನ್ನು ಗಮನಿಸಿ:

1. ಮಾನವಹಕ್ಕು ಹೋರಾಟಗಾರರೂ, ಆದಿವಾಸಿಗಳ ವೈದ್ಯಕೀಯ ಶುಶ್ರೂಷೆಯಲ್ಲಿ ಪ್ರತಿಫಲ ಬಯಸದೆ ತಮ್ಮನ್ನು ತೊಡಗಿಸಿಕೊಂಡವರೂ ಆಗಿರುವ ಡಾ. ಬಿನಾಯಕ್ ಸೇನ್‌ರನ್ನು ಛತ್ತೀಸ್‌ಗಡದ ಬಿಜೆಪಿ ಸರ್ಕಾರ 2007 ರ ಮೇ ತಿಂಗಳಿನಿಂದ ಬಂಧನದಲ್ಲಿ ಇರಿಸಿದೆ. ಆದಿವಾಸಿಗಳ ಆರೋಗ್ಯ ಅವರ ಸಾಮಾಜಿಕ ಸ್ಥಿತಿಗತಿಯ ಜೊತೆ ತಳುಕು ಹಾಕಿಕೊಂಡಿದೆ ಎಂಬುದನ್ನು ಬಿನಾಯಕ್ ಸೇನ್ ಮನಗಂಡಿದ್ದರು. ಆದಿವಾಸಿಗಳ ನೆಲ ಗಣಿಧಣಿಗಳಿಗೆ ಪರಭಾರೆಯಾಗುವುದನ್ನು ಅವರು ವಿರೋಧಿಸಿದ್ದರು. ಛತ್ತೀಸ್‌ಗಡ ಸರ್ಕಾರವೇ ತನ್ನ ಪ್ರಜೆಗಳ ವಿರುದ್ಧ ಪ್ರಾಯೋಜಿಸಿದ 'ಸಲ್ವಾಜುದುಂ' ಎಂಬ ಬಾಡಿಗೆ ಬಂಟರ ಹಿಂಸಾಚಾರವನ್ನು ಸಹ ಬಿನಾಯಕ್ ಸೇನ್ ವಿರೋಧಿಸಿದ್ದರು. ರಾಜ್ಯದ ಬಿಜೆಪಿ ಸರ್ಕಾರ ಅವರಿಗೆ ನಕ್ಸಲ್ ಎಂಬ ಲೇಬಲ್ ಹಚ್ಚಿ ಸೆರೆಮನೆಗೆ ತಳ್ಳಿದೆ. ಸುಳ್ಳು ಸಾಕ್ಷ್ಯಾಧಾರಗಳನ್ನು ಸೃಷ್ಟಿಸಿ ಬಿನಾಯಕ್ ಸೇನ್‌ರವರ ವಿರುದ್ಧ ಛತ್ತೀಸ್‌ಗಡದ ಪೊಲೀಸರು ದಾಖಲಿಸಿದ ಕೇಸನ್ನು ಡಿಸೆಂಬರ್ 14ರಂದು ರಾಮ್‌ಪುರದ ಸೆಷನ್ಸ್ ನ್ಯಾಯಾಲಯ ಎತ್ತಿಹಿಡಿದು ಅವರಿಗೆ ಜೀವಾವಧಿ ಶಿಕ್ಷೆ ನೀಡಿದೆ. ಇದೀಗ ಛತ್ತೀಸ್‌ಗಡದ ಹೈಕೋರ್ಟ್ ಆ ಕೇಸ್‌ನಲ್ಲಿ ಬಿನಾಯಕ್ ಸೇನ್‌ರಿಗೆ ಜಾಮೀನು ಸಹ ನಿರಾಕರಿಸಿದ್ದು ಅವರ ಜೈಲುವಾಸ ಮುಂದುವರಿದಿದೆ.

2. 1984 ರಲ್ಲಿ ದೆಹಲಿಯ ಸಿಖ್ ನರಮೇಧ, 1992-93 ರಲ್ಲಿ ಬಾಬರಿ ಮಸೀದಿ ಧ್ವಂಸದ ನಂತರ ಮುಂಬಯಿಯಲ್ಲಿ ನಡೆದ ಹಿಂಸಾಕಾಂಡ ಮತ್ತು 2002 ರ ಗುಜರಾತ್ ನರಮೇಧಗಳ ಅಪರಾಧಿಗಳಲ್ಲಿ ಹೆಚ್ಚಿನವರಿಗೆ ಇದುವರೆಗೆ ಶಿಕ್ಷೆ ಆಗಿಲ್ಲ, 1992 ರ ಡಿಸೆಂಬರ್ 6 ರಂದು ಲಕ್ಷಾಂತರ ಜನರ ಎದುರು ಬಾಬರಿ ಮಸೀದಿ ಧ್ವಂಸವಾದರೂ, ಅದಕ್ಕೋಸ್ಕರ ಬಿಜೆಪಿ ಒಂದು ಚಳವಳಿಯನ್ನೇ ನಡೆಸಿದ್ದರೂ ಮಸೀದಿಯನ್ನು ಧ್ವಂಸ ಮಾಡಿದ್ದು ಯಾರು ಎಂದು ಇದುವರೆಗೂ "ಅಧಿಕೃತ"ವಾಗಿ ಸರ್ಕಾರಕ್ಕೂ ಗೊತ್ತಿಲ್ಲ, ನ್ಯಾಯಾಲಯಕ್ಕೂ ಗೊತ್ತಿಲ್ಲ, ಯಾಕೆಂದರೆ ಆ ಬಗ್ಗೆ "ಸೂಕ್ತ ಸಾಕ್ಷ್ಯಾಧಾರಗಳಿಲ್ಲ". ಸಾಕ್ಷ್ಯಾಧಾರಗಳು ಬೇಕೆನ್ನಿಸಿದಾಗ ಪೊಲೀಸರು ಅವನ್ನು ಸೃಷ್ಟಿಸುವುದೂ ಉಂಟು. ಇತ್ತೀಚೆಗೆ ಆರ್‌ಎಸ್‌ಎಸ್‌ನ ಅಸೀಮಾನಂದ, ಮಾಲೆಗಾಂವ್, ಹೈದರಾಬಾದು ಮಕ್ಕ ಮಸೀದಿ,




ಸಂಜೋತಾ ಎಕ್ಸ್‌ಪ್ರೆಸ್ ಬಾಂಬ್ ಸ್ಫೋಟಗಳು ತಾನು ಮತ್ತು ಇತರ ಆರ್‌ಎಸ್‌ಎಸ್ ಕಾರ್ಯಕರ್ತರು ನಡೆಸಿದ ಕೃತ್ಯ ಎಂದು ನ್ಯಾಯಾಧೀಶರ ಎದುರು ಹೇಳಿಕೆ ನೀಡಿದ್ದಾರೆ. ನ್ಯಾಯಾಲಯ ಅದನ್ನು ಸಾಕ್ಷ್ಯಾಧಾರವೆಂದು ಪರಿಗಣಿಸಲೇ ಬೇಕು. ಆದರೆ ಆ ಬಾಂಬ್ ಸ್ಫೋಟಗಳ ಕಾರಣಕ್ಕೆ ಬಂಧಿತರಾದ "ಶಂಕಿತ ಮುಸ್ಲಿಮ್ ಭಯೋತ್ಪಾದಕರು ಈಗಲೂ ಜೈಲಿನಲ್ಲೇ ಇದ್ದಾರೆ. ಆ ಪೈಕಿ ಮಾಲೆಗ ಬಾಂಬ್ ಸ್ಫೋಟದಲ್ಲಿ ಬಂಧಿತರಾಗಿರುವ 12 ಮು ಪಾಡಂತೂ ಇನ್ನಷ್ಟು ಶೋಚನೀಯವಾಗಿದೆ. ಮಹ ಪೊಲೀಸರು ಅವರೆಲ್ಲರನ್ನೂ "ಮಹಾರಾಷ್ಟ್ರ ಸಂ ಅಪರಾಧ ನಿಯಂತ್ರಣ ಕಾಯ್ದೆ" (MCOCCA) ಅಡಿಯಲ್ಲಿ ಬಂಧಿಸಿದ್ದಾರೆ. ಆ ಕರಾಳ ಕಾಯ್ದೆಯ ಆರೋಪಿಗಳು ಪೊಲೀಸರ ಎದುರು ಹೇ ಮಾತುಗಳನ್ನು ಕೂಡ "ಸಾಕ್ಷಿ" ಎಂದು ನ್ಯಾಯಾಲ ಪರಿಗಣಿಸಬೇಕು. ಮಾಲೆಗಾಂವ್ ಸ್ಫೋಟದ 12 ಮು ಆರೋಪಿಗಳಿಗೂ ಪೊಲೀಸರು ಚಿತ್ರಹಿಂಸೆ ನೀಡಿ ಅ ತಪ್ಪೊಪ್ಪಿಗೆಯ ಹೇಳಿಕೆಗಳನ್ನು ಪಡೆದುಕೊಂಡಿ ನ್ಯಾಯಾಲಯ ಈಗ ಆ ಪ್ರಕರ ಅಸೀಮಾನಂದ ಮತ್ತು ಮಹಾರಾಷ್ಟ್ರ ಪೊ ನಡುವೆ ಯಾರ ಸಾಕ್ಷಿಯನ್ನು ಪರಿಗಣಿಸಬ ಪೊಲೀಸರೇ ಕ್ರಿಮಿನಲ್‌ಗಳಂತೆ ನಡೆದುಕೊ ಪ್ರಜೆಗಳನ್ನು ರಕ್ಷಿಸುವವರು ಯಾರು?

ಪ್ರಜಾಪ್ರಭುತ್ವದ ನ್ಯಾಯ ವ್ಯವಸ್ಥೆ ನ್ಯಾಯಾಲಯಗಳಿಗೆ ಪೊಲೀಸರನ್ನು ಹದ ನಲ್ಲಿಡುವ ಅಧಿಕಾರವೂ ಇದೆ; ಅವರನ್ನು ಮಾಡುವ ಅಧಿಕಾರವೂ ಇದೆ. ಆದರೆ ತ ಒಳಗಾದ ಪೊಲೀಸರ ಹೇಳಿಕೆಗಳ ಆ ಮೇಲೆಯೇ ನ್ಯಾಯಾಲಯ ಅವರಿಗೆ ಒ ನಡತೆಯ ಸರ್ಟಿಫಿಕೇಟು ಕೊಡುವುದ ಪ್ರಜೆಗಳಿಗೆ ನ್ಯಾಯಾಲಯದ ರಕ್ಷ ಕಟ್ಟಕಡೆಯ ಭರವಸೆಯೂ ಕಮರಿ ಹೋ ಪ್ರಸಿದ್ಧ ಇಂಗ್ಲಿಷ್ ವಾರ ಪತ್ರಿಕೆ 'ತೆಹೆಲ್ಕಾ' ಫೆಬ್ರವರಿ ಸಂಚಿಕೆಯಲ್ಲಿ ಬಯಲು ಮಾಡಿದ, ಗುಜರಾತ್ ನರ ಕುರಿತ ವಿಶೇಷ ತನಿಖಾ ತಂಡದ ವರದಿ, ನಮ್ಮ ವ್ಯವಸ್ಥೆ ಈಗ ಈ ಬಗೆಯ ನಿರಾಶೆಯ ಪಾತಾಳ ರುವುದನ್ನು ಸೂಚಿಸುತ್ತದೆ.

ಹಾಗೆ ನೋಡಿದರೆ ಈ ತನಿಖಾ ತಂಡದ ನೇಮಕಾ

ದಾದ ಅಪರಾಧಗಳ ಕುರಿತಾದ ಮಾಹಿತಿ ು ಸಾಕ್ಷ್ಯಗಳನ್ನು ನಾಶಪಡಿಸಿದ್ದಾನೆ ಎಂದು ೀತುಮಾಡಿದಾಗ ಮಾತ್ರವೇ, ಆತನನ್ನು ರಾಧಿಯಾಗಿ ಕಟಕಟೆಗೆಳೆದು ತರುವುದಕ್ಕೆ ್ಯವಾಗುತ್ತದೆ. ಮೋದಿಯ ಕೃತ್ಯಗಳನ್ನು ಅಪರಾಧ ಂತೆಯ ಪರಿಧಿಯೊಳಗೆ ತಂದು ೀಷಾರೋಪಣೆಯನ್ನು ಸಿದ್ಧಪಡಿಸುವುದೂ, ಆ ಾಲಕವಾಗಿ ಆತ ಸಂವಿಧಾನಿಕ ಸ್ಥಾನಗಳನ್ನು ಸಿಕೊಳ್ಳದಂತೆ ತಡೆಯುವುದೂ, ತುಂಬ



ರ್ತಿನಲ್ಲಿ ನೆರವೇರಿಸಬೇಕಾದ ಕಾರ್ಯಗಳಾಗಿವೆ. ಕ್ಕೆಲ್ಲ ತುಂಬ ಕಾಲಾವಕಾಶ ಬೇಕು. ಕಳೆದು ಟು ವರ್ಷಗಳ ಕಾಲ ಮೋದಿಯ ವಿರುದ್ಧ ುಸುತ್ತಿರುವವರು ದಣಿದಿದ್ದಾರೆ. ಈ ಸಂಗತಿಗಳ ವು ನನಗಿದೆ. ಇದೀಗ ಮಾಧ್ಯಮಗಳು ತಮ್ಮ ಾಬ್ದಾರಿಯನ್ನು ನಿರ್ವಹಿಸಬೇಕು. ತೀಸ್ತಾ ಸೆಟ್ಲಾ ವರ್ತನೆ ಸರಿ ಇದೆಯೋ ಇಲ್ಲವೋ, ಅವರು ವಿಧಾನಿಕವಾಗಿ ನಡೆದುಕೊಳ್ಳುತ್ತಿದ್ದಾರೋ ಲ್ಲವೋ ಎಂಬಂತಹ ಸಂಗತಿಗಳ ಬಗ್ಗೆ ತೌಡು ುಟ್ಟುವುದನ್ನು ಬಿಟ್ಟು, ಬಹು ಮುಖ್ಯವಾಗಿರುವ

ಇಂತಹ ವಾಸ್ತವಿಕ ಸಂಗತಿಗಳನ್ನು ಎತ್ತಿ ತೋರಿಸುವ ಕಡೆ ಮಾಧ್ಯಮಗಳು ಕಾರ್ಯಪ್ರವೃತ್ತವಾಗಬೇಕು.

ತೀಸ್ತಾ ಸೆಟ್ಲ್ವಾಡ್ 2002ರ ಗಲಭೆಯ ಮುಖ್ಯ ಪ್ರಕರಣಗಳನ್ನು ವಿಶ್ವಸಂಸ್ಥೆಯ ಮುಂದೆ ಇಟ್ಟು, ನ್ಯಾಯ ಕೋರಿದರು; ಇದನ್ನು ಮಾಧ್ಯಮಗಳು ದೊಡ್ಡ ವಿವಾದ ಮಾಡಿದವು. ಇದರಲ್ಲಿ ವಿವಾದಾಸ್ಪದವಾದದ್ದು ಏನಿತ್ತು? ಭಾರತದ ಪ್ರಭುತ್ವ ವಿಶ್ವಸಂಸ್ಥೆಯ ಭಾಗವಲ್ಲವೇ? ಮೋದಿಯನ್ನು ಕಾನೂನುರೀತ್ಯಾ ಕಟಕಟೆಗೆಳೆಯಲು ನಮ್ಮ ವ್ಯವಸ್ಥೆಗೆ ಸಾಧ್ಯವಾಗಿಲ್ಲದಿರಬಹುದು; ಆದರೆ, ಹಿಂಸಾಚಾರದ ಬಗೆಗಿನ ಮಾಹಿತಿ ಜನರ ಆಸ್ತಿ, ಮಾಹಿತಿಯ ವಾರಸುದಾರರಾಗಿ ಅವರು ಅದನ್ನು ಸೂಕ್ತ ವೇದಿಕೆಗಳಲ್ಲಿ ಮಂಡಿಸಿ ನ್ಯಾಯಕ್ಕಾಗಿ ಆಗ್ರಹಿಸುವ ಹಕ್ಕುಳ್ಳವರಾಗಿದ್ದಾರೆ. ಮೋದಿ ಅಂತಹ ಮಾಹಿತಿಗಳನ್ನೇ ನಾಶಪಡಿಸಿ ರಾಜಕೀಯ ವಿಶ್ವಾಸಾರ್ಹತೆಯನ್ನೇ ನಾಶಗೊಳಿಸಿದ್ದಾನೆ. ಇದು ನರಹತ್ಯೆಯ ಪಾತಕಕ್ಕೆ ಸಮ; ನರಹತ್ಯೆಯ ಪಾತಕಗಳನ್ನು ಎದುರಿಸುವ ಮಾನವಂತ ಕ್ರಮಗಳು ಜರೂರಾಗಿ ಇರಬೇಕು. ತೀಸ್ತ ಅಂತಹ ಪ್ರಯತ್ನಕ್ಕೆ ಕೈಹಾಕಿದ್ದಾರೆ, ಇದು ವಿವಾದಕ್ಕೆ ವಸ್ತುವೋ?

ನಮ್ಮ ದೊಡ್ಡ ಉದ್ಯಮಪತಿಗಳು ಮೋದಿಯನ್ನು ಬೆಂಬಲಿಸುತ್ತಿರುವುದು ಸರಿಯಷ್ಟೇ. ಇವರು ಯಾವ ಕಾರಣಕ್ಕೆ ಆತನ ಬೆಂಬಲಕ್ಕೆ ನಿಂತಿದ್ದಾರೆ ಎಂದು ಆಮೂಲಾಗ್ರ ಶೋಧಿಸುವುದೂ ತುಂಬ ಮುಖ್ಯ. ಯಾವ ಉದ್ಯಮಪತಿಗಳು ಮೋದಿಯ ಬೆಂಬಲಕ್ಕೆ ನಿಂತಿದ್ದಾರೆ ಹಾಗು ಇದರ ಫಲವನ್ನು ಜನ ಯಾವ ರೀತಿ ಅನುಭವಿಸಬೇಕಾದೀತು ಎಂದು ತಿಳಿದುಕೊಳ್ಳುವ ಜರೂರಂತೂ ಇದೆ. ಇದರ ಜೊತೆ ನಾವು ತಿಳಿದುಕೊಳ್ಳಬೇಕಾದ ಮತ್ತೊಂದು ಮುಖ್ಯ ಸಂಗತಿಯೂ ಇದೆ. 'ವಿಶೇಷ ತನಿಖಾ ದಳ'ದ ವರದಿಯು ಗುಜರಾತಿನ ಹಲವು ವರಿಷ್ಠ ಪೊಲೀಸ್ ಅಧಿಕಾರಿಗಳು ಹಿಂಸಾಚಾರದಲ್ಲಿ ಶಾಮೀಲಾಗಿರುವುದನ್ನೇನೋ ಬಹಿರಂಗಪಡಿಸಿದೆ. ಆದರೆ, ದೊರೆಯನ್ನು ಸಂತುಷ್ಟವಾಗಿಡಲು ಹಿಂಸಾಚಾರದ ಬಗ್ಗೆ ಮೌನವಾಗಿದ್ದು, ನರಮೇಧದ ನಂತರ ಬಡ್ತಿ, ಸೇವಾವಧಿಯ ವಿಸ್ತರಣೆಗಳ ಬಕ್ಷೀಸು ಪಡೆದ ಐ.ಎ.ಎಸ್. ಅಧಿಕಾರಿಗಳ ಅಪರಾಧ ಎಂಥದ್ದು? ಇದರ ಬಗ್ಗೆ ವರದಿಯು ಹೆಚ್ಚೇನನ್ನೂ ತಿಳಿಸುವುದಿಲ್ಲ, ಇದನ್ನು ಬೇರೆ ವಿಧಾನದಲ್ಲಿ ಶೋಧಿಸಿ ಪ್ರಕಟಿಸುವ ಅವಶ್ಯಕತೆ ಇದೆ; ಯಾಕೆಂದರೆ ಇವರ 'ಮೌನ'ಕ್ಕೆ ಸಮಾಜ ತೆತ್ತ ಬೆಲೆ ಅಗಣಿತ ಎನ್ನುವುದರಲ್ಲಿ ನನಗೆ ಸಂಶಯವಿಲ್ಲ.

ನಗರವಾಸಿ ಲಿಬರಲ್‌ಗಳಿಗೆ ಪ್ರಸ್ತುತ ವರದಿಯು ವೈದ್ಯಕೀಯ ವರದಿಯ ಹಾಗೆ ಕಾಣಿಸುತ್ತಿರುವುದು ದುರದೃಷ್ಟಕರ; ರೋಗವನ್ನು ಪತ್ತೆ ಮಾಡಲು ಸಾಧ್ಯವಾಗದಿದ್ದಲ್ಲಿ ಕೇಸ್ ಖತಂ ಮಾಡಿಬಿಡಿ ಎನ್ನುವುದು ಇವರ ನಿಲುವು. ಹೀಗಾಗಿಯೇ, ಎಂಟು ವರ್ಷಗಳ ನಂತರವೂ ಮೋದಿ ಅಪರಾಧಿ ಎಂದು ಸಾಬೀತುಮಾಡಲು ಸಾಧ್ಯವಾಗುತ್ತಿಲ್ಲ. ಎಂದಾದರೆ, ಆತ ನಿರ್ದೋಷಿ ಎಂದು ಘೋಷಿಸಿ ಬಾಕಿ ಕೆಲಸ ಮುಂದುವರೆಸಿ ಎಂಬ ಅಭಿಪ್ರಾಯಗಳನ್ನು ನಾವು ಕೇಳುತ್ತಿದ್ದೇವೆ. ಸಣ್ಣಪುಟ್ಟ ಅಪರಾಧಿಗಳ ಬಗ್ಗೆ ಇಂತಹ ಧಾರಾಳತನವನ್ನು ತೋರಬಹುದು; ಆದರೆ ಇಂತಹ ಅಪರಾಧಿಗಳು ಅಧಿಕಾರದ ಗದ್ದುಗೆ ಏರಿ ಘಾತುಕ ಅಪರಾಧಿಗಳಾಗಿ ಬಿಡುತ್ತಾರೆ- ಮೋದಿ ಅಂತಹ ಮನುಷ್ಯ. ತನಿಖೆಯನ್ನು ಕೊನೆಗೊಳಿಸಿದಾಕ್ಷಣ ಹಿಂಸೆಯ ನೆನಪುಗಳೇನೂ ಅಳಿಸಿಹೋಗುವುದಿಲ್ಲ. ಭಯೋತ್ಪಾದನೆ ನ್ಯಾಯಪಡೆಯುವ ವಿಧಾನವಲ್ಲದಿದ್ದರೂ ಹಿಂಸೆಯ ನೆನಪು ಮತ್ತೊಂದು ರೂಪದಲ್ಲಿ ಪ್ರಕಟವಾಗುವ ವಿಧಾನವಂತೂ ಹೌದು.


ಮೋದಿ ರಾವುಗನ್ನಡಿಯಲ್ಲಿ ವಿರಾಟ್ ಆಗಿ ಬಿಂಬಿಸಲ್ಪಡುತ್ತಿರುವ ಸಂಘಪರಿವಾರದ ಪ್ರಚಾರಕ; ಸುಶಿಕ್ಷಿತ ವರ್ಗ ತಮಗೆ ಅನುಕೂಲವಾದ ಆಧುನಿಕ ಗುಜರಾತನ್ನು ಸಾಕಾರಮಾಡಬಲ್ಲ ಕೇಡಿಯಾದ ಸರ್ವಾಧಿಕಾರಿಯ ಆಗಮನದ ಕನಸು ಕಾಣುತ್ತಿತ್ತು-ಮೋದಿ ಅವರ ಅಭಿಲಾಷೆಗೆ ತಕ್ಕ ಹಾಗೆ ಸಾಕಾರಗೊಂಡಿದ್ದಾನೆ. ಇಂತಹವರು ಗುಜರಾತ್ ತನ್ನ ಸಹಬಾಳ್ವೆಯ ಪಾರಂಪರಿಕ ನಾಗರಿಕತೆಯನ್ನು ಒರೆಸಿ ಹಾಕಲೂ, ನಾಗರಿಕ ನೈತಿಕ ಜವಾಬ್ದಾರಿಗಳನ್ನು ಯಾವ ಹಿಂಜರಿಕೆ ಇಲ್ಲದೆ ಕಿತ್ತೆಸೆಯಲೂ ಉತ್ಸುಕವಾಗಿರುವ ಗುಜರಾತಾಗಿದೆ. ಅಹಮದಾಬಾದಿನ ಘನತೆವೆತ್ತ ಸಂಸ್ಥೆಗಳು 2002ರ ಗುಜರಾತಿ ಹಿಂಸಾಚಾರದ ಬಗ್ಗೆ ಚಕಾರವೆತ್ತುವುದಿಲ್ಲ ಎಂದು ಪಣತೊಟ್ಟಿರುವುದು ಇಂತಹ ಸಾಮಾಜಿಕ ಮನೋಸ್ಥಿತಿಗೆ ಒಂದು ಉದಾಹರಣೆಯಾಗಿದೆ. 2002ರ ಹಿಂಸಾಕಾಂಡದಲ್ಲಿ ನೊಂದವರ ಭಯಾನಕ ನೆನಪುಗಳ ಗಾಯಗಳು ಮಾಯುವಂತಹ ನ್ಯಾಯ ದೊರಕದ ಹೊರತು ಈ ಸಮಾಜ ಹಿಂಸೆಯ ಮಸಿ ಬಳಿದುಕೊಂಡ ಮುಖವನ್ನೇ ಮೆರೆಸುತ್ತಿರುತ್ತದೆ.

'ತೆಹೆಲ್ಕ' ಪತ್ರಿಕೆಯನ್ನು ಹೊರತುಪಡಿಸಿ, ಬೇರಾವ ಪ್ರಮುಖ ಪತ್ರಿಕೆಗಳೂ ಈ ತನಿಖಾ ವರದಿಯ ವಿವರಗಳನ್ನು ಬಹಿರಂಗಪಡಿಸುವ ಸಂಕಲ್ಪ ತೋರಿಸಲಿಲ್ಲವಷ್ಟೇ. ಇದು ನಮ್ಮ ಮುಖ್ಯಧಾರೆಯ ಮಾಧ್ಯಮಗಳ, ಅದರಲ್ಲೂ ಮುಖ್ಯವಾಗಿ ಗುಜರಾತಿನ ಮಾಧ್ಯಮಗಳ, ಅಸಲಿ ಮನೋಧರ್ಮವನ್ನು ತೋರಿಸುತ್ತದೆ.

್ಮ ನ್ಯಾಯ ವ್ಯವಸ್ಥೆಯ ವೈಫಲ್ಯದ ಸಂಕೇತ. 2002 ಬ್ರವರಿ 27 ರಂದು ಗುಜರಾತ್‌ನ ಗೋಧ್ರಾದಲ್ಲಿ ರಮತಿ ಎಕ್ಸ್‌ಪ್ರೆಸ್‌ನ ಬೋಗಿಯೊಂದಕ್ಕೆ ಬೆಂಕಿ ಹಚ್ಚಿ ಜನರನ್ನು ಸಾಯಿಸಿದ ದುರ್ಘಟನೆಗೆ ಪ್ರತಿಭಟನೆಯಾಗಿ ಹಿಂದೂ ಪರಿಷತ್ ಮತ್ತು ಬಿಜೆಪಿ ಫೆಬ್ರವರಿ 28 ದು ಗುಜರಾತ್ ಬಂದ್‌ಗೆ ಕರೆಕೊಟ್ಟವು. ಅಂದು ಭವಿಸಿದ ಹಿಂಸಾಚಾರದಲ್ಲಿ ಅಹ್ಮದಾಬಾದ್‌ನ ಮೇಘಾನಿ ರದ ಗುಲ್ಬರ್ಗ್ ಸೊಸೈಟಿಯ ಅಪಾರ್ಟ್‌ಮೆಂಟ್ ಮೇಲೆ ದ ಸಾಮೂಹಿಕ ದಾಳಿ ಅತ್ಯಂತ ಕರಾಳವಾದದ್ದು. ವಿರಾರು ಜನ, ಹಾಡುಹಗಲೇ, ಆ ಕಟ್ಟಡವನ್ನು ುತ್ತಿಗೆಗಟ್ಟಲೆ ಕಾಲ ಸುತ್ತುವರಿದು, ಕಟ್ಟಡದ ಮುಸ್ಲಿಂ ವಾಸಿಗಳಲ್ಲಿ ಹೆಚ್ಚಿನವರನ್ನು ಹೊಡೆದು, ಇರಿದು ಮುಗಿಸಿದರು. ಆನಂತರ ಕಟ್ಟಡಕ್ಕೆ ಬೆಂಕಿಹಚ್ಚಲಾಯಿತು. ದರಿಂದಲೂ ಕೆಲವರು ಸತ್ತರು. ಹಾಗೆ ಸತ್ತವರಲ್ಲಿ ಆ ಟ್ಟಡದ ನಿವಾಸಿಯೂ, ಮಾಜಿ ಲೋಕಸಭಾ ಸದಸ್ಯರೂ ನ ಎಹ್ಸಾನ್ ಜಾಫ್ರಿ ಕೂಡ ಒಬ್ಬರು. ಅವರ ಪತ್ನಿ ಕಿಯಾ ಜಾಫ್ರಿ, ಆ ದಿನ ಬೆಳಗ್ಗೆಯಿಂದಲೇ ರಾಜ್ಯದ ುಖ್ಯಮಂತ್ರಿ ಹಾಗೂ ಹಿರಿಯ ಪೊಲೀಸು ಅಧಿಕಾರಿಗಳಿಗೆ ೇಲಿಂದ ಮೇಲೆ ಫೋನ್ ಮಾಡಿ ವಿಷಯ ತಿಳಿಸಲು ತ್ನಿಸಿದರೂ ಯಾರಿಂದಲೂ ಪ್ರತಿಕ್ರಿಯೆ ಬರಲಿಲ್ಲ. ಘಟನೆ ದ ನಂತರ ಆ ಕುರಿತು ದೂರು ದಾಖಲಿಸಿಕೊಳ್ಳಲು ೊಲೀಸರು ಮೊದಲು ನಿರಾಕರಿಸಿದರು. ನಂತರ ರೋಪಿಗಳ ಹೆಸರುಗಳನ್ನು ನಮೂದಿಸದೆ, "ಘಟನೆ ಭವಿಸಿರುವುದು ನಿಜ. ಆದರೆ ಆರೋಪಿಗಳು ಯಾರು ದು ತಿಳಿದುಬಂದಿಲ್ಲ" ಎಂದು ದೂರು ದಾಖಲಿಸಿ ೊಳ್ಳಲಾಯಿತು. ಗುಜರಾತ್ ನರಮೇಧದ ಸುಮಾರು ,000 ಪ್ರಕರಣಗಳಲ್ಲಿ ಹೆಚ್ಚಿನವು ಹೀಗೆ ಫೈಸಲ್ ಬಿಟ್ಟಿವೆ. ಪೊಲೀಸರು ದೂರು ದಾಖಲಿಸಿಕೊಂಡು ರೋಪಿಗಳನ್ನು ಹೆಸರಿಸಿದ ಪ್ರಕರಣಗಳಲ್ಲಿ ಕೂಡ ೋರ್ಟಿನಲ್ಲಿ ಆರೋಪಿಗಳ ತನಿಖೆ ನಡೆಸಬೇಕಾದ ಪಬ್ಲಿಕ್ ಾಸಿಕ್ಯೂಟರ್‌ಗಳು ಅವರ ಪರವಾಗಿಯೇ ವಾದಿಸಿ, ರ್ಯಾದುದಾರರಿಗೆ ನ್ಯಾಯ ಸಿಗದಂತೆ ನೋಡಿಕೊಂಡಿದ್ದಾರೆ. ಪಬ್ಲಿಕ್ ಪ್ರಾಸಿಕ್ಯೂಟರ್‌ಗಳ ಪೈಕಿ ಹೆಚ್ಚಿನವರು ಸಂಘ ಪರಿವಾರಕ್ಕೆ ಸೇರಿದವರಾಗಿದ್ದರು. ಈ ಎಲ್ಲ ಕಾರಣಗಳಿಂದ ಗುಜರಾತ್‌ನ ನ್ಯಾಯಾಲಯಗಳಿಂದ ಗುಲ್ಬರ್ಗ್ ಸೊಸೈಟಿ ಹತ್ಯಾಕಾಂಡದ ನ್ಯಾಯೋಜಿತ ವಿಚಾರಣೆ ನಡೆಯುವುದು ಸಾಧ್ಯವೇ ಇರಲಿಲ್ಲ, ಹಾಗಾಗಿ ಝಕಿಯಾ ಜಾಫ್ರಿ ಪ್ರಕರಣದ ುರಿತು ಸುಪ್ರೀಂಕೋರ್ಟಿಗೆ ಮೇಲ್ಮನವಿ ಸಲ್ಲಿಸಿದರು. 27.3.2009 ರಂದು ಝಾಕಿಯಾ ಅವರ ಮನವಿ ಮೇರೆಗೆ ಗುಲ್ಬರ್ಗ್ ಸೊಸೈಟಿ ಮತ್ತು ಗುಜರಾತ್ ನರಮೇಧದ ಇನ್ನು ಕೆಲವು ಮಹತ್ವದ ಪ್ರಕರಣಗಳ ಕುರಿತು ಮರು ತನಿಖೆ ನಡೆಸಲು ನಿವೃತ್ತ ಸಿಬಿಐ ನಿರ್ದೇಶಕ ಆರ್.ಕೆ. ರಾಘವನ್ ನೇತೃತ್ವದಲ್ಲಿ ವಿಶೇಷ ತನಿಖಾ ತಂಡವೊಂದನ್ನು ನೇಮಿಸಿತು. ರಾಘವನ್ ದಕ್ಷತೆ ಮತ್ತು ಪ್ರಾಮಾಣಿಕತೆಗಳಿಗೆ ಹೆಸರಾದವರು. ಕಾನೂನು, ಭದ್ರತೆ, ಆಂತರಿಕ ಸುರಕ್ಷಿತತೆ ಮುಂತಾದ ವಿಷಯಗಳ ಬಗ್ಗೆ ಪರಿಣತರಾಗಿರುವ ಅವರು ಫ್ರಂಟ್ ಲೈನ್ ಪತ್ರಿಕೆಯ ಅಂಕಣ ಲೇಖಕರೂ ಆಗಿದ್ದಾರೆ. ರಾಘವನ್ ನೇತೃತ್ವದ ತನಿಖಾ ತಂಡದ ಬಗ್ಗೆ ಮಾನವಹಕ್ಕು ಹೋರಾಟಗಾರರು ಮೊದಲಿಗೆ ಭರವಸೆ ಇಟ್ಟುಕೊಂಡಿದ್ದರೂ ನಂತರ ಗುಜರಾತ್‌ನ ಕೆಲವು ಸಂಘಟನೆಗಳು ತನಿಖಾ ತಂಡದ ವಿಚಾರಣೆಯ ಬಗ್ಗೆ ಸಂದೇಹ ವ್ಯಕ್ತಪಡಿಸಿದ್ದರು. ತನಿಖಾ ವರದಿಯ ತೀರ್ಮಾನಗಳು ಈಗ ಆ ಸಂದೇಹಗಳನ್ನು ದೃಢಪಡಿಸಿವೆ. ಹಾಗೆಂದು ಆ ವರದಿ ತಿರಸ್ಕಾರಕ್ಕೆ ಮಾತ್ರ ಯೋಗ್ಯ ಎಂದು ಭಾವಿಸುವಂತೆಯೂ ಇಲ್ಲ. ಗುಜರಾತ್ ಹಿಂಸಾಕಾಂಡದಲ್ಲಿ ನರೇಂದ್ರ ಮೋದಿ ಸರ್ಕಾರ ಶಾಮೀಲಾಗಿರುವುದನ್ನು ವರದಿ ಸ್ಪಷ್ಟವಾಗಿ ಹೇಳುತ್ತದೆ. ಮುಖ್ಯಮಂತ್ರಿ ನರೇಂದ್ರ ಮೋದಿಯನ್ನೂ ಒಳಗೊಂಡಂತೆ ಗುಜರಾತ್ ಸರ್ಕಾರ ನೈತಿಕವಾಗಿ ಕಳಂಕಿತ ಎಂದು ಸಹ ವರದಿ ತೀರ್ಮಾನಿಸುತ್ತದೆ. ಆದರೆ ಅದೇ ವೇಳೆಗೆ ಮುಖ್ಯಮಂತ್ರಿ ಮತ್ತು ಇತರರು ಕಾನೂನುರೀತ್ಯ ಅಪರಾಧಿಗಳಲ್ಲ; ಮತ್ತು ಅವರನ್ನು ಕೋರ್ಟಿಗೆ ಎಳೆಯಲು ಸೂಕ್ತ ಸಾಕ್ಷ್ಯಾಧಾರಗಳು ಇಲ್ಲ ಎಂದು ಅದು ನಿರ್ಣಯಿಸುತ್ತದೆ.

ಗುಜರಾತ್ ಹತ್ಯಾಕಾಂಡದ ಬಗ್ಗೆ ಮಾಡಲಾಗಿರುವ ಆಪಾದನೆಗಳಲ್ಲಿ ಈ ಕೆಳಗಿನವುಗಳನ್ನು ವಿಶೇಷ ತನಿಖಾ ತಂಡದ ವರದಿ ದೃಢೀಕರಿಸುತ್ತದೆ.

1. ಗುಜರಾತ್ ಸರ್ಕಾರ ನರಮೇಧ ಕುರಿತ ಬಹುತೇಕ ದಾಖಲೆಗಳನ್ನು ಉದ್ದೇಶಪೂರ್ವಕವಾಗಿ ನಾಶಪಡಿಸಿದೆ.
2. ನರಮೇಧದ ಸಂತ್ರಸ್ತರು, ಗಾಯಾಳುಗಳು ಹಾಗೂ ನಿರಾಶ್ರಿತರನ್ನು ಸಂತೈಸುವಲ್ಲಿ ರಾಜ್ಯ ಸರ್ಕಾರ ಸ್ಪಷ್ಟವಾದ ಮತೀಯವಾದಿ ಧೋರಣೆಯನ್ನು ಅನುಸರಿಸಿದೆ.
3. ಸ್ವತಃ ಮುಖ್ಯಮಂತ್ರಿಯೇ ಗೋಧ್ರಾ ಘಟನೆಯ ನಂತರ ಉದ್ರೇಕಕಾರಿ ಭಾಷಣಗಳನ್ನು ಮಾಡಿ ಸಾರಾಸಗಟಾಗಿ ಎಲ್ಲ ಮುಸ್ಲಿಮ್ ಪ್ರಜೆಗಳೂ ಅಪರಾಧಿಗಳು ಎಂದು ನಿಂದಿಸಿದ್ದಾರೆ.
4. ನರಮೇಧದ ಪ್ರಕರಣಗಳಿಗೆ ಸಂಬಂಧಿಸಿದ ಕೋರ್ಟು ಕೇಸುಗಳಲ್ಲಿ ಸಂತ್ರಸ್ತರ ಪರವಾಗಿ ವಾದಿಸಬೇಕಾದ ಪಬ್ಲಿಕ್ ಪ್ರಾಸಿಕ್ಯೂಟರ್ ಹುದ್ದೆಗಳಿಗೆ ಸಂಘ ಪರಿವಾರದ ಕಾರ್ಯಕರ್ತರನ್ನೇ ಆಯ್ಕೆ ಮಾಡಲಾಗಿದೆ.
5. ರಾಜ್ಯದ ಗೃಹ ಖಾತೆಯನ್ನು ಮುಖ್ಯಮಂತ್ರಿ ನಿರ್ವಹಿಸುತ್ತಿದ್ದರು. ಆದರೆ 2002 ಫೆಬ್ರವರಿ 28 ರ ಗುಜರಾತ್ ಬಂದ್ ದಿನ ಅಹ್ಮದಾಬಾದ್‌ನ ಪೊಲೀಸ್ ಕಂಟ್ರೋಲ್ ರೂಮ್ ಗೃಹ ಖಾತೆಗೆ ಏನೇನೂ ಸಂಬಂಧವಿರದ ಆರೋಗ್ಯ ಸಚಿವ ಅಶೋಕ್ ಭಟ್ ಹಾಗೂ ನಗರಾಭಿವೃದ್ಧಿ ಸಚಿವ ಐ.ಕೆ. ಜಡೇಜ ಅವರ ಉಸ್ತುವಾರಿಯಲ್ಲಿತ್ತು.



6. ರಾಹುಲ್ ಶರ್ಮ, ವಿವೇಕ್ ಶ್ರೀವಾಸ್ತವ, ಹಿಮಾಂಶು ಭಟ್, ಸತೀಶ್ ಚಂದ್ರ ವರ್ಮ ಮುಂತಾದ ಪ್ರಾಮಾಣಿಕ ಅಧಿಕಾರಿಗಳ ಮೇಲೆ ಕಿರುಕುಳ, ಒತ್ತಾಯದ ವರ್ಗ ಮುಂತಾದ ಕ್ರಮ ಜರುಗಿಸಿದರೆ ಕ್ರಿಮಿನಲ್‌ಗಳ ಜೊತೆ ಕೈ ಜೋಡಿಸಿದ ಪೊಲೀಸ್ ಕಮಿಷನರ್ ಪಿ.ಸಿ. ಪಾಂಡೆಯಂತವರಿಗೆ ಹುದ್ದೆಯಲ್ಲಿ ಭಡ್ತಿ, ನಿವೃತ್ತಿಯ ನಂತರ ಫಲವತ್ತಾದ ನಿಗಮಗಳಿಗೆ ನೇಮಕಾತಿ ಮೊದಲಾದ ಪುರಸ್ಕಾರಗಳನ್ನು ಕೊಡಲಾಯಿತು.

ವಿಶೇಷ ತನಿಖಾ ತಂಡದ ಎದುರು ಹಾಜರಾದ ಮುಖ್ಯಮಂತ್ರಿ ನರೇಂದ್ರ ಮೋದಿ ನರಮೇಧದ ಕುರಿತು ಕೇಳಿದ ಪ್ರಶ್ನೆಗಳಿಗೆ ಹಾರಿಕೆಯ ಉತ್ತರಗಳನ್ನು ನೀಡಿದರು. ಬಂದ್ ಹಿಂದಿನ ದಿನ ತಾನು ಕರೆದಿದ್ದ ಅಧಿಕಾರಿಗಳ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ಯಾರು ಯಾರು ಎಂಬುದರ ಬಗ್ಗೆಯೂ ಸರಿಯಾದ ಉತ್ತರ ಕೊಡಲಿಲ್ಲ. "ಹಿಂದೂಗಳಿಗೆ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಲು ಪೊಲೀಸು ಅಧಿಕಾರಿಗಳು ಅವಕಾಶ ಮಾಡಿಕೊಡಬೇಕು" ಎಂದು ತಾನು ಹೇಳಿಯೇ ಇಲ್ಲ ಎಂದು ಮುಖ್ಯಮಂತ್ರಿ ಹೇಳಿದರು. ಅವರು ಹಾಗೆ ಹೇಳಿರುವುದಕ್ಕೆ ಬಲವಾದ ಸಾಕ್ಷ್ಯಾಧಾರಗಳಿದ್ದರೂ ವಿಶೇಷ ತನಿಖಾ ತಂಡ ಅವರನ್ನು ಆ ಬಗ್ಗೆ ಪ್ರಶ್ನಿಸುವ ಗೋಜಿಗೇ ಹೋಗಲಿಲ್ಲ. ಆದು ಬರ್ಬರ ದಿನಗಳಲ್ಲಿಯೂ ಧೈರ್ಯ, ಕರ್ತವ್ಯ ನಿಷ್ಠೆ ಮತ್ತು ಪ್ರಾಮಾಣಿಕತೆಗಳಿಂದ ನಡೆದುಕೊಂಡ ಅಪರೂಪದ ಅಧಿಕಾರಿಗಳಲ್ಲಿ ಒಬ್ಬರಾಗಿದ್ದ ಗೂಢಚರ್ಯೆ ವಿಭಾಗದ ಡಿ.ಜಿ. ಶ್ರೀಕುಮಾರ್ ತನ್ನ ಡೈರಿಯಲ್ಲಿ ಪೊಲೀಸು ಇಲಾಖೆಯ ಕರ್ತವ್ಯ ಲೋಪದ ಕುರಿತಂತೆ ಈ ಕೆಳಗಿನ ಅಂಶಗಳನ್ನು ನಮೂದಿಸಿದ್ದರು.

1. ಹಿಂಸಾಕೃತ್ಯಗಳಿಗೆ ಸಂಬಂಧಿಸಿದ ದೂರುಗಳನ್ನು ಪೊಲೀಸರು ದಾಖಲಿಸಿಕೊಳ್ಳಲು ಒಂದೋ ನಿರಾಕರಿಸುತ್ತಿದ್ದರು; ಅಥವಾ ದೂರಿನಲ್ಲಿ ಕಾಣಿಸಿದ ಅಪರಾಧವನ್ನು ತೆಳುಗೊಳಿಸುತ್ತಿದ್ದರು.
2. ವಿ.ಎಚ್.ಪಿ. ಮತ್ತು ಭಜರಂಗದಳ ರಾಜ್ಯದಲ್ಲಿ ಮುಸ್ಲಿಮರಿಗೆ ವಿಧಿಸಿದ್ದ ಸಾಮಾಜಿಕ ಬಹಿಷ್ಕಾರ ಕುರಿತು ಪೊಲೀಸರು ನಿಷ್ಕ್ರಿಯರಾಗಿದ್ದರು. ಗಲಭೆಯ ದಿನಗಳಲ್ಲೂ ಆ ಸಂಘಟನೆಗಳ ದ್ವೇಷ ಪ್ರಚೋದನೆ ಮುಂದುವರಿದಿತ್ತು.
3. ಪೊಲೀಸು ಠಾಣೆಗಳು ವಿ.ಎಚ್.ಪಿ. ಮತ್ತು ಬಜೆಪಿಗಳ ಕಚೇರಿಗಳಾಗಿ ಮಾರ್ಪಟ್ಟಿದ್ದವು. ಆದರೆ ವಿಶೇಷ ತನಿಖಾ ತಂಡ ಶ್ರೀಕುಮಾರ್‌ರ ಈ ದಾಖಲೆಯನ್ನು ಸಾಕ್ಷ್ಯಾಧಾರ ಎಂದು ಪರಿಗಣಿಸಲು ನಿರಾಕರಿಸಿದೆ.

ನರೇಂದ್ರ ಮೋದಿ ಮತ್ತು ಅವರ ಬಜೆಪಿ ಸರ್ಕಾರವನ್ನು ಅಪರಾಧಿ ಎಂದು ಘೋಷಿಸಲು ನ್ಯಾಯಾಲಯಕ್ಕೆ ಇನ್ನು ಯಾವ ಸಾಕ್ಷ್ಯಾಧಾರ ಬೇಕು? ತನಿಖಾ ತಂಡದ ವರದಿಯ ಮುಖ್ಯಾಂಶಗಳನ್ನು ಬಹಿರಂಗಪಡಿಸಿದ ತೆಹೆಲ್ಕಾ ಆ ಕುರಿತು ಹೇಳುವಂತೆ "ನ್ಯಾಯಕ್ಕಾಗಿ ನಡೆಯುವ ಹೋರಾಟಕ್ಕೆ ದಣಿವು ಎಂಬುದು ಇದ್ದೇ ಇದೆ. ಹೋರಾಟದಲ್ಲಿ ಮನುಷ್ಯ ಚೇತನ ಸೋತು ಸುಣ್ಣವಾಗುತ್ತದೆ. ವರ್ಷಗಳು ಕಳೆದಂತೆ ಹೋರಾಟಗಾರರಿಗೆ ನ್ಯಾಯದ ಬೇಡಿಕೆಯ ಬದಲು ಯಾವುದೋ ಸ್ಥಾಪಿತ ಹಿತಾಸಕ್ತಿ ಇರುವಂತೆ ಜನರಿಗೆ ಭಾಸವಾಗುತ್ತದೆ. ಆದದ್ದು ಆಗಿಹೋಯಿತು; ಇವರು ಯಾಕೆ ಸುಮ್ಮನಿರಬಾರದು ಎಂದು ಜನ ಯೋಚಿಸತೊಡಗುತ್ತಾರೆ. ಯಾಕೆ ಈ ಹೋರಾಟಗಾರರು ನಮ್ಮನ್ನು ನೆಮ್ಮದಿಯಲ್ಲಿ ಇರಗೊಡುವುದಿಲ್ಲ ಎಂದು ಸಜ್ಜನರೇ ಕೇಳುತ್ತಾರೆ. ಗುಜರಾತ್ ಸಂಭವಿಸಿ 9 ವರ್ಷ ಕಳೆದುಹೋಗಿದೆ. ಆದರೆ ಯಾರಿಗೂ ಶಿಕ್ಷೆ ಆಗಿಲ್ಲ. ಅಪರಾಧಕ್ಕೆ ಶಿಕ್ಷೆ ಆಗದೆ ಕಳೆಯುವ ಪ್ರತಿಯೊಂದು ದಿನವೂ ಈ ಸಮಾಜವನ್ನು ಇನ್ನಷ್ಟು ಒರಟಾಗಿಸುತ್ತದೆ. ಹಿಂಸಾಚಾರಕ್ಕೆ ಶಿಕ್ಷೆ ಇಲ್ಲದ ಸಮಾಜದಲ್ಲಿ ಹಿಂಸೆ ಕ್ರಮೇಣ ಮಾಮೂಲಿನ ಸಂಗತಿಯಾಗುತ್ತದೆ." ಗುಜರಾತ್ ಹಿಂಸಾಕಾಂಡದ ಕುರಿತ ವಿಶೇಷ ತನಿಖಾ ತಂಡ ಕೂಡ ಹಿಂಸೆಯನ್ನು ಮಾಮೂಲು ಎಂದು ಭಾವಿಸಿರುವುದು ವಿಪರ್ಯಾಸ. ●



ಕೌಬಾಯ್ ಸ್ವಾಮಿ ಕದ್ದ ದುಡ್ಡಲ್ಲಿ ಆಸ್ತಿ ಮಾಡಿದ

ಗೋಕರ್ಣವನ್ನು ಉದ್ಧಾರ ಮಾಡುತ್ತೇನೆಂದು ದೇವಸ್ಥಾನ ಕಬಳಿಸಿರುವ ಕೌಬಾಯ್ ಸ್ವಾಮಿ ಈಗ ಭಕ್ತರು ನೀಡುತ್ತಿರುವ ದಕ್ಷಿಣೆ, ಕಾಣಿಕೆ, ಪ್ರಸಾದದ ದುಡ್ಡು ಎಲ್ಲವನ್ನೂ ದೋಚುತ್ತಿದ್ದಾನೆ. ಆ ಹಣದಲ್ಲೇ ಆಸ್ತಿ ಮಾಡಿಕೊಳ್ಳುತ್ತಿದ್ದಾನೆ. ಇದು ಹಗಲುದರೋಡೆಯಲ್ಲದೆ ಬೇರೇನೂ ಅಲ್ಲ.

• ಪಾರ್ವತೀಶ

ದಿನಬೆಳಗಾದರೆ ಸುಳ್ಳಾಡುತ್ತಾ, ಸುಳ್ಳನ್ನೇ ಉಸಿರಾಡುತ್ತಾ, ಸುಳ್ಳನ್ನೇ ಹೊದ್ದು ಮಲಗುತ್ತಿರುವ ರಾಮಚಂದ್ರಾಪುರ ಮಠಾಧೀಶ ರಾಘವೇಶ್ವರ ಸ್ವಾಮಿ ಲೇಟೆಸ್ಟಾಗಿ ಹೊಸ ಸುಳ್ಳಿನ ಸರಮಾಲೆಯೊಂದನ್ನು ಸೃಷ್ಟಿಸಿ ಸಿಕ್ಕಿಬಿದ್ದಿದ್ದಾನೆ.

ಅದು

ಈತನ ವಾರ್ಷಿಕ ಆದಾಯ ಪ್ರಮಾಣ ಪತ್ರದ್ದು ಒಂದು.

ಇನ್ನೊಂದು ಕಾನೂನುಬಾಹಿರವಾಗಿ ಭೂಮಿ ಖರೀದಿಸಿರುವ ಹಗರಣ.

ಬಂಟ್ವಾಳ, ಕುಮಟಾ, ಗೋಕರ್ಣ, ಸುಳ್ಯ ಹಾಗೂ ರಾಣಿಬೆನ್ನೂರಿನಲ್ಲಿ ಈ ಅಕ್ರಮ ಭೂಖರೀದಿ ಡೀಲ್‌ಗಳು ನಡೆದಿದ್ದು ರಾಜ್ಯ ಕಂದಾಯ ಇಲಾಖೆಯ ಅಧಿಕಾರಿಗಳು ಕೌಬಾಯ್ ಸ್ವಾಮಿ ವಿರುದ್ಧ ಕಾನೂನು ಕ್ರಮ ಜರುಗಿಸಲು ಯತ್ನಿಸಿ ವಿಫಲರಾಗಿರುವ ಕತೆ ಇದು.




ಭಕ್ತರಿಗೆ ಸುಳ್ಳು ಬೋಧನೆ...

2008ರ ಆಗಸ್ಟ್‌ನಲ್ಲಿ ಗೋಕರ್ಣ ದೇವಸ್ಥಾನವನ್ನು ಮುಜರಾಯಿ ಇಲಾಖೆಯಿಂದ ಅಕ್ರಮವಾಗಿ ಕೈವಶಮಾಡಿಕೊಂಡ ಈ ಕೌಬಾಯ್ ಸ್ವಾಮಿ ಆವತ್ತಿನಿಂದಲೂ ತಿಂಗಳೊಂದರಂತೆ ಹಗರಣ ಮಾಡಿಕೊಂಡೇ ಬರುತ್ತಿದ್ದಾನೆ.

ಮಲೆನಾಡು ಹಾಗೂ ಕರಾವಳಿ ಜಿಲ್ಲೆಗಳ ಹವ್ಯಕ ಸಮುದಾಯದ ಮಹಾನ್ ಧರ್ಮಗುರು ತಾನೆಂಬಂತೆ ಪೋಜು ಕೊಡುತ್ತಾ ಬಂದಿರುವ ರಾಘವೇಶನ ಬಗ್ಗೆ ಸ್ವತಃ ಹವ್ಯಕ ಜನರಲ್ಲೇ ತಿರಸ್ಕಾರ ಭಾವವಿದೆ. ಈ ಕೌಬಾಯ್ ಸ್ವಾಮಿಯ ಭಾಮೈದ ಜಗದೀಶ ಶರ್ಮ ರಾಮಚಂದ್ರಾಪುರ ಮಠದ ಶಾಲೆಯಲ್ಲಿ ಕಲಿಯುತ್ತಿದ್ದ ಚಿಕ್ಕ ಹುಡುಗಿಯರನ್ನೇ ಲೈಂಗಿಕ ಶೋಷಣೆ ಮಾಡಿ ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದ.

ಸಾವಿರಾರು ಜನ ಇದನ್ನು ಪ್ರತಿಭಟಿಸಿದಾಗಲೂ ಈ ಸ್ವಾಮಿ ಕಿಂಚಿತ್ತೂ ಕೇರ್ ಮಾಡದೆ ಭಾಮೈದನ ಪರ ನಿಂತಿದ್ದ. ಗೋತಳಿ ರಕ್ಷಿಸುತ್ತೇನೆಂದು ಹೊರಟು ಸರ್ಕಾರದ ಕೋಟಿಗಟ್ಟಲೇ ಹಣ ನುಂಗಿದ. ಹೊಸನಗರದ ಮಠದ ಆಸುಪಾಸಿನ ಸರ್ಕಾರಿ ಕಾಡು ಸವರಿ, ಸಿಕ್ಕ ಜಾಗಕ್ಕೆಲ್ಲಾ ಬೇಲಿ ಸುತ್ತಿಕೊಂಡ. 2010ರ ಜೂನ್‌ನಲ್ಲಿ ಮಂಗಳೂರಿನ ಆರ್ಯ ಸಮಾಜಕ್ಕೆ ಸೇರಿದ್ದ ಶ್ರದ್ಧಾನಂದ ಆಶ್ರಮದ 30 ಕೋಟಿ ರೂ. ಬೆಲೆಯ ಮೂರೂವರೆ ಎಕರೆ ಜಾಗ ನುಂಗಿ ನೀರು ಕುಡಿದ. ಗೋಕರ್ಣ ದೇವಸ್ಥಾನ ಹಸ್ತಾಂತರದ ಬಗ್ಗೆ ಕರ್ನಾಟಕ ಹೈಕೋರ್ಟ್ ವಿಚಾರಣೆ ನಡೆಸುತ್ತಿದ್ದು ಅದನ್ನು ತಡೆಯಲು ಸುಪ್ರೀಂಕೋರ್ಟ್‌ಗೂ ಹೋದ. ಅಲ್ಲಿ ಸುಪ್ರೀಂಕೋರ್ಟ್ ತೀರ್ಪು ತನ್ನ ವಿರುದ್ಧ ಬಂದರೂ 'ನಾನೇ ಗೆದ್ದೆ' ಎಂದು ವಿಭಟ್ಟರ ವಿಜಯಕರ್ನಾಟಕದಲ್ಲಿ ಬರೆಸಿಕೊಂಡು ಬೀಗಿದ.




ಮಲ್ಲನ್

ಈಗ ನೋಡಿದರೆ ತನ್ನ ವಾರ್ಷಿಕ ಆದಾಯ ಕೇವಲ 2.80 ಲಕ್ಷ ಎಂದು ಘೋಷಿಸಿಕೊಂಡರೂ ಕೋಟಿಗಟ್ಟಲೇ ಹಣಕಾಸಿನ ವ್ಯವಹಾರ ನಡೆಸುತ್ತಿದ್ದಾನೆ.

ಸುಳ್ಳು ದಾಖಲೆ, ಅಕ್ರಮ ಭೂಖರೀದಿ

ಶಿವಮೊಗ್ಗ ಜಿಲ್ಲೆಯ ಹೊಸನಗರ ತಹಶೀಲ್ದಾರರು ದಿನಾಂಕ 20-7-2009ರಂದು ರಾಘವೇಶ್ವರ ಸ್ವಾಮಿಗೆ ಒಂದು ಆದಾಯ ದೃಢೀಕರಣಪತ್ರ ಕೊಟ್ಟಿದ್ದಾರೆ. ಸಂಖ್ಯೆ: ವಾಆಪವಿಷ:319/2009-10ರ ಈ ಪತ್ರದಲ್ಲಿ ಸ್ವಾಮಿಯ ಆದಾಯ 2.80 ಲಕ್ಷ ರೂಪಾಯಿಗಳೆಂದು ದೃಢೀಕರಿಸಲಾಗಿದೆ. ಈ ರೀತಿಯ ದೃಢೀಕರಣ ಪತ್ರಗಳನ್ನು ಅರ್ಜಿದಾರರು ಒದಗಿಸುವ ತಮ್ಮ ಆದಾಯ ಮೂಲದ ಮಾಹಿತಿ ಆಧರಿಸಿಯೇ ಆಯಾ ತಹಶೀಲ್ದಾರರು ನೀಡುತ್ತಾರೆ. ಇದಾದನಂತರ ಮಠದ ಕಾರ್ಯದರ್ಶಿ ಗಣಪತಿ ಹೆಗಡೆ ಎಂಬುವವನು ಸ್ವಾಮಿಯ ಪರವಾಗಿ ಇನ್ನೊಂದು ಅರ್ಜಿ ನೀಡಿ 2.80 ಲಕ್ಷ ರೂ. ಆದಾಯಕ್ಕೆ ಸಂಬಂಧಿಸಿದಂತೆ ಕೃಷಿ ಹಾಗೂ ಕೃಷಿಯೇತರ ಆದಾಯ ಎಂದು ಪ್ರತ್ಯೇಕಿಸಿ ದೃಢೀಕರಣ ಪತ್ರ ನೀಡುವಂತೆ ಕೋರುತ್ತಾನೆ. ಹೆಗಡೆ ಈ ಅರ್ಜಿಯನ್ನು 2010ರ ಆಗಸ್ಟ್ 20ರಂದು ಕೊಟ್ಟಾಗ ಅದೇ ದಿನ ಸಂಜೆಯೊಳಗಾಗಿ ಹೊಸನಗರ ತಹಶೀಲ್ದಾರ ಹೊಸ ದೃಢೀಕರಣ ಇಶ್ಯೂ ಮಾಡುತ್ತಾನೆ. ಅದರಲ್ಲಿ ರಾಘವೇಶ್ವರನಿಗೆ ಕೃಷಿ ಮೂಲದಿಂದ ವಾರ್ಷಿಕ 1 ಲಕ್ಷ ರೂ. ಆದಾಯವೆಂತಲೂ ಕೃಷಿಯೇತರ ಬಾಬ್ತಿನಿಂದ 1.80 ಲಕ್ಷ ರೂ. ಆದಾಯವೆಂತಲೂ ದೃಢೀಕರಿಸಿದ್ದಾನೆ.

ಆಶ್ಚರ್ಯದ ಸಂಗತಿ ಏನೆಂದರೆ ಹೊಸನಗರದ ತಹಶೀಲ್ದಾರ ಈ



ವಾರ್ಷಿಕ ಆದಾಯದ ಸುಳ್ಳುಪತ್ರ

ಗೋಕರ್ಣ ಮಾಫಿಯಾ

ಪುರಾಣ ಪ್ರಸಿದ್ಧ ಪುಣ್ಯಕ್ಷೇತ್ರ ಗೋಕರ್ಣದಲ್ಲಿ ಮಾಫಿಯಾಗಳ ಕಾರುಬಾರು ಎದ್ದು ಕಾಣುತ್ತದೆ.

ಪೊಲೀಸ್ ಹಾಗೂ ಮಾಫಿಯಾಗಳ ಪಾಲುದಾರಿಕೆಯ ದಂಧೆಯಾಗಿ ಇದು ಬೇರು ಬಿಟ್ಟುಕೊಂಡಿದೆ.

ಡ್ರಗ್ಸ್, ಅಕ್ರಮ, ಲಿಕ್ಕರ್, ವೇಶ್ಯಾವಾಟಿಕೆ ಹಾಗೂ ಹಫ್ತಾ ವಸೂಲಿಯೇ ಈ ಮಾಫಿಯಾದ ಆದಾಯ ಮೂಲಗಳು.

ಗೋವಿಂದೇಗೌಡ ಅಂಡ್ ಬ್ರದರ್ಸ್ ಇದರ ಕಿಂಗ್‌ಪಿನ್‌ಗಳಾದರೆ ಪೊಲೀಸ್ ಆಫೀಸರ್ ಎಂ.ಟಿ.ಪ್ರಮೋದ ರಾವ್ ಯಾನೆ ಪ್ರಮೋದ್ ನಾಯಕ್ ಈ ದಂಧೆಯ ಮಹಾನ್ ಪೋಷಕರಾಗಿದ್ದಾನೆ. ಆಶ್ಚರ್ಯ ಏನೆಂದರೆ ಕೌಬಾಯ್ ಸ್ವಾಮಿಗೆ ಇವರೆಲ್ಲರೂ ಇದುವರೆಗೂ ಆಪ್ತರೇ ಆಗಿದ್ದರು. ಅದೇಕೋ ಏನೋ ಇತ್ತೀಚೆಗೆ ಗೋವಿಂದೇಗೌಡನಿಗೂ ಕೌಬಾಯ್‌ಗೂ ಸಂಬಂಧ ಹಳಸಿಕೊಂಡಿದೆ ಎನ್ನಲಾಗಿದೆ.

ಗೋಕರ್ಣದ ಓಂ ಬೀಚ್‌ನಲ್ಲಿ ಅಲೆದಾಡುವ ವಿದೇಶಿಯರಿಗೆ ಅಫೀಮು-ಚರಸ್‌ನಂತಹ ಡ್ರಗ್ಸ್ ಸರಬರಾಹು ನಿರಂತರವಾಗಿ ನಡೆಯುತ್ತಿದೆ. ಗೋವಾ ದಿಕ್ಕಿಗೆ ಟ್ಯಾಕ್ಸಿ ಓಡಿಸುವ ಬಹುತೇಕ ಡ್ರೈವರ್‌ಗಳು ವಾಪಸ್ ಬರುವಾಗ ಗಾಡಿ ಭರ್ತಿ ಲಿಕ್ಕರ್ ತುಂಬಿಕೊಂಡು ಗೋಕರ್ಣಕ್ಕೆ ಬರುತ್ತಾರೆ.



ಓಂ ಬೀಚ್, ಕುಟ್ಲೆ ಬೀಚ್‌ಗಳು ಈ ದಂಧೆಗೆ ಈಗಲೂ ಕುಖ್ಯಾತ. ಮೊದಲು ಇಲ್ಲಿದ್ದ ಸರ್ಕಲ್ ಇನ್ಸ್‌ಪೆಕ್ಟರ್ ಪ್ರಮೋದ್ ರಾವ್ ಯಾನೆ ನಾಯಕ್ ಹುಟ್ಟಾ ಭ್ರಷ್ಟ. ಗೋಕರ್ಣದ ಸಮಸ್ತ ಅಕ್ರಮ ದಂಧೆಗಳಿಗೂ ಪೋಷಕನಂತಿದ್ದು ಭಾರಿ ಹಣ ಗಳಿಸುತ್ತಿದ್ದ. ಇವನ ಪೂರಾ ಸರ್ವೀಸ್ ಗೋಕರ್ಣ, ಹೊನ್ನಾವರ, ಶಿರಸಿ, ಕುಮಟಾ ಹೀಗೆ ಕರಾವಳಿ ಏರಿಯಾಗಳಲ್ಲೇ ನಡೆದಿದೆ. ಹಿರೇಗುತ್ತಿಯವನಾದ ಪ್ರಮೋದ್ ಸುಳ್ಳು ಜಾತಿ ಪತ್ರ ನೀಡಿ ಎಸ್‌ಟಿ ಕೋಟಾದಲ್ಲಿ ಕೆಲಸ ಗಿಟ್ಟಿಸಿರುವವನು. ಗೋಕರ್ಣ ಹೆಸರಿಗೆ ಪುಣ್ಯ ಕ್ಷೇತ್ರವಾದರೂ ಇಲ್ಲಿ ಖರ್ಚಾಗುವಷ್ಟು ಲಿಕ್ಕರ್ ಬೇರೆಲ್ಲೂ ಆಗುವುದಿಲ್ಲ. ಇಲ್ಲಿನ ಬೀಚ್‌ಗಳಲ್ಲಿ ಅಂಗಡಿ, ಹೋಟೆಲ್ ಮತ್ತಿತರ ವ್ಯಾಪಾರ ನಡೆಸುವವರು ಯಾರಲ್ಲೂ ಲೈಸೆನ್ಸ್ ಕೇಳುವುದಿಲ್ಲ. ಯಾರಿಗೂ ತೆರಿಗೆ ಕಟ್ಟುವುದಿಲ್ಲ. ಪುರಸಭೆ, ಗ್ರಾಮಪಂಚಾಯತಿ ಹೀಗೆ ಯಾರಿಗೂ ಇಲ್ಲಿ ಕಂಟ್ರೋಲ್ ಇಲ್ಲದಂತಾಗಿದೆ. ಆದರೆ ಮಾಫಿಯಾಗಳು ಮಾತ್ರ ಇಲ್ಲಿನ ಪ್ರತಿಯೊಂದರ ಉಸ್ತುವಾರಿಯನ್ನೂ ನೋಡಿಕೊಳ್ಳುತ್ತಾ ಹಫ್ತಾ ವಸೂಲಿ ನಡೆಸುತ್ತಿದ್ದಾರೆ.

...ಕೊಂಡು ಸುಳ್ಳು

...ಕರ್ಣ ದೇವಸ್ಥಾನ ಸೇರಿದಂತೆ ಇಡೀ ಗೋಕರ್ಣ ಊರನ್ನು ...ಸುತ್ತಮುತ್ತಲಿನ ಪ್ರದೇಶವನ್ನೆಲ್ಲಾ ಅಭಿವೃದ್ಧಿಪಡಿಸುವುದಾಗಿ ಕೌಬಾಯ್ ...ಳಿಕೊಳ್ಳುತ್ತಿದ್ದ. ಈತ ಗೋಕರ್ಣ ದೇವಸ್ಥಾನ ಕಬಳಿಸಿ ಇನ್ನೇನು ...ಆಗುತ್ತಾ ಬಂದಿದೆ. ಆದರೆ ಈಗಲೂ ಅಲ್ಲಿ ಜನಸಾಮಾನ್ಯರಿಗಾಗಿ, ... ಏನೂ ಕೆಲಸಗಳಾಗಿಲ್ಲ, ಸರಿಯಾಗಿ ಹೇಳಬೇಕೆಂದರೆ ಗೋಕರ್ಣ ...ವಲಿಗಿಂತ ಅಧ್ವಾನವಾಗಿದೆ. ಆದರೆ ಕೌಬಾಯ್ ಸ್ವಾಮಿಯ ಮಠ ...ತುಕೊಳ್ಳುತ್ತಿದೆ.

...ಸ್ಥಾನಕ್ಕೆ ಬರುವ ಭಕ್ತರಿಗೆ ಈಗಲೂ ಅಚ್ಚುಕಟ್ಟಾದ ಶೌಚಾಲಯಗಳಿಲ್ಲ, ...ಗೆ ಮೂಲಭೂತ ಸೌಲಭ್ಯಗಳೇ ಇನ್ನೂ ರೂಪುಗೊಂಡಿಲ್ಲ, ಅದು ...ಗೋಲ್‌ಮಾಲ್ ನಡೆಸಿ ಟೂರಿಸಂ ಇಲಾಖೆಯಿಂದ 4 ಕೋಟಿ ...ಬಿಗಡೆ ಮಾಡಿಸಿ ರಸ್ತೆ ಕೆಲಸ ಮಾಡಿಸಲಾಗುತ್ತಿದೆಯಷ್ಟೆ.

... ಹೊಸದರಲ್ಲಿ ಕೌಬಾಯ್ ಸ್ವಾಮಿ ಹತ್ತಾರು ಯೋಜನೆ ಪ್ರಕಟಿಸಿದ್ದ. ... ನವೀಕರಣ, ಅಮೃತ ಪ್ರಸಾದ ಭೋಜನ ಶಾಲೆ, ಭಾರತೀಯ ...ು ವಿಶ್ವವಿದ್ಯಾಲಯ, ಶ್ರೀಮಂತರಿಗಾಗಿ ಮೆಡಿಕೇರ್ ಸೆಂಟರ್ ...ಇವೆಲ್ಲಾ ದುಡ್ಡು ಮಾಡುವ ಸ್ಕೀಂಗಳೇ ಹೊರತು ಭಕ್ತರಿಗಾಗಿ ...ಲ್ಲ, ಆದರ ಬದಲಾಗಿ ಮೊದಲಿದ್ದ ಪೂಜಾ ಕೈಂಕರ್ಯಗಳ ...ಬದಲಿಸಿ ರೇಟು ಹೆಚ್ಚಿಸಿದ್ದಾನೆ. ಮೊದಲು 100ರಿಂದ 500 ...ದ್ದ ಪೂಜಾ ರೇಟುಗಳು ಈಗ 2 ಸಾವಿರದಿಂದ 5 ಲಕ್ಷ ...ತನಕ ಜಾಸ್ತಿಯಾಗಿದೆ.



ಇದ್ಯಾವ ಸೀಮೆಯ ದೈವಸೇವೆ ಇರಬೇಕು ಯೋಚಿಸಿ?

ಗೋಕರ್ಣ ದೇವಸ್ಥಾನದಲ್ಲಿ ಪ್ರತಿದಿನ ಅಂದಾಜು 50 ಸಾವಿರದಿಂದ ಒಂದು ಲಕ್ಷ ರೂ.ಗಳತನಕ ಕಾಣಿಕೆ ಹಣ ಸಂಗ್ರಹವಾಗುತ್ತಿದೆ. ಈ ದುಡ್ಡು ಪೂರಾ ಕೌಬಾಯ್ ಜೇಬು ಸೇರುತ್ತಿದೆ.

ಆ ಹಣವನ್ನು ಎತ್ತಿಕೊಂಡು ಅವನು ಅಶೋಕೆಯಲ್ಲಿರುವ ಮೂಲ ಮಠದ ಅಭಿವೃದ್ಧಿಗೆ ಹಾಗೂ ಆಸ್ತಿ ಖರೀದಿಗೆ ಬಳಸುತ್ತಿದ್ದಾನೆ. ನೆಪಮಾತ್ರಕ್ಕೆ ಗೋಕರ್ಣದ ಭದ್ರಕಾಳಿ ಪದವಿ ಪೂರ್ವ ಕಾಲೇಜಿಗೆಂದು ತಿಂಗಳಿಗೆ 40 ಸಾವಿರ ದೇಣಿಗೆ ನೀಡುತ್ತಿರುವುದಾಗಿ ಸುಳ್ಳು ಲೆಕ್ಕ ತೋರಿಸಲಾಗುತ್ತಿದೆ. ಆದರೆ ಈ ಕಾಲೇಜಿಗೆ ಸರ್ಕಾರದ ಅನುದಾನವೇ ಸಿಗುತ್ತಿದೆ. ಹಾಗಿರುವಾಗ ತಿಂಗಳಿಗೆ 40 ಸಾವಿರ ಯಾಕೆ ಕೊಡಬೇಕು?

ಕಾಲೇಜಿನ ಮುಖ್ಯಸ್ಥ ಮಲ್ಲನ್ ಇದರಲ್ಲಿ ಶಾಮೀಲಾಗಿದ್ದಾನೆ.

ಕೌಬಾಯ್ ಸ್ವಾಮಿ ಮೊದಲು ಆಂಜನೇಯ ವಿಗ್ರಹ ಮಾಡಿಸುತ್ತೇನೆಂದ. ಅದಾಗಲಿಲ್ಲ. ಅದೆಲ್ಲಿಂದಲೋ ಗಂಗಾಜಲ ತರಿಸುತ್ತೇನೆಂದು, ಅದು ಗೋಕರ್ಣದವರೆಗೂ ಹರಿದುಬರಲೇ ಇಲ್ಲ. ಈಗ ನೋಡಿದರೆ 'ಸುವಸ್ತು ಸಂಗ್ರಹ ರಥ' ಹೊರಡಿಸಿದ್ದಾನೆ. ಮಲೆನಾಡಿನ ಹಳ್ಳಿಹಳ್ಳಿಗಳಿಗೆ ಹೋಗಿ ಮುಗ್ಧ ಭಕ್ತರಿಂದ ಹಣ ಎತ್ತುವ ಹೊಸ ಸ್ಕೀಂ ಇದಾಗಿದೆ. ಕರ್ನಾಟಕದಲ್ಲಿ ನೆರೆ ಬಂದಾಗ ಹುಬ್ಬಳ್ಳಿಗೆ ಹೋಗಿ ನೆರೆ ಸಂತ್ರಸ್ತರಿಗೆ 5 ಸಾವಿರ ಮನೆ ಕಟ್ಟಿಸುತ್ತೇನೆಂದ. ಅವಿವೇಕಿ ಸಿನಿಮಾ ನಟ ವಿವೇಕ್ ಒಬೇರಾಯ್ ಅವತ್ತು ಜೊತೆಯಲ್ಲಿದ್ದ. ಆದರೆ ಈಗಲೂ ಮನೆಯಿರಲಿ, ಒಂದೇ ಒಂದು ಇಟ್ಟಿಗೆಯನ್ನು ಈ ಕೌಬಾಯ್ ಜನರಿಗೆ ಕೊಟ್ಟಿಲ್ಲ.

ಈಗ ನೋಡಿದರೆ ಕೋಟಿ ರುದ್ರಯಾಗ ನಡೆಸುತ್ತೇನೆಂದು ಪ್ರಚಾರ ನಡೆಸುತ್ತಿದ್ದಾನೆ. ಹಿಂದೂ ಪುರಾಣಗಳಲ್ಲಿ ಅತಿರುದ್ರ, ಮಹಾರುದ್ರ ಯಾಗಗಳ ಪ್ರಸ್ತಾಪವಿದೆಯಾಗಲಿ ಕೋಟಿ ರುದ್ರ ಎಂಬುದಿಲ್ಲ. ಜೊತೆಗೆ ಈ ಯಾಗದಲ್ಲಿ 800 ಜನ ಭಾಗಿಯಾಗಿದ್ದಾರೆಂದು ಹೇಳುತ್ತಾನೆ. ಹೋಗಿ ನೋಡಿದರೆ ಅಲ್ಲಿ 80 ಜನರೂ ಕಾಣಿಸುವುದಿಲ್ಲ.

ಬಹುಶಃ ಇಡೀ ಕರ್ನಾಟಕದಲ್ಲಿ ಇಷ್ಟೊಂದು ಬಂಡತನ ಹಾಗೂ ಸುಳ್ಳು ಹೇಳುವ ಧರ್ಮಗುರು ಮತ್ತೊಬ್ಬನಿಲ್ಲ.

...ಪತ್ರ ಬರೆದಿರುವುದು ರಾಘವೇಶ್ವರ ... ಬದಲಾಗಿ ಕುಮಟ ಅಸಿಸ್ಟೆಂಟ್ ...ಗೆ!

... ಹಿನ್ನೆಲೆ ಏನೆಂದರೆ ಈ ಕೌಬಾಯ್ ಸ್ವಾಮಿ ... ಗೋಕರ್ಣದಲ್ಲಿ ಒಂದೂ ಮುಕ್ಕಾಲೆಕರೆ ...ನ್ನು ಖರೀದಿಸಿದ ಬಾಬ್ತುಗೆ ಈ ... ಅಗತ್ಯವಿತ್ತು, ಸ್ವಾಮಿಗೆ ಕೃಷಿ ಆದಾಯವೂ ...ದ ಆತ ಕೃಷಿಕನೆಂತಲೂ, ಕೃಷಿ ಭೂಮಿಗೆ

...ಧಾರ್ಮಿಕ ಕಾರ್ಯಕ್ರಮಗಳ ಸೇವಾ ವಿವರ

...ಣಪತಿ ಆರಾಧನೆ	ರೂ.
[illegible]	21,000
[illegible]	5,000
[illegible]	2,000
...ದ್ರಾರಾಧನೆ	
...ತಿರುದ್ರ ಹವನ	5,00,000
...ತಿರುದ್ರ ಜಪ	3,00,000
...ಸಹಿತ ಮಹಾರುದ್ರ ಹವನ	50,000
...ಮಹಾರುದ್ರ ಜಪ	25,000
...ಸಹಿತ ಶತರುದ್ರ ಹವನ	11,000
...ಶತರುದ್ರ ಜಪ	5,000
[illegible]	3,000

...ಅರ್ಹನೆಂತಲೂ ತೋರಿಸಿಕೊಳ್ಳಲು ಈ ...ಳಸಿಕೊಳ್ಳಲಾಗಿದೆ.

...ಮೀನು ಖರೀದಿ ಡೀಲ್‌ಗಳಲ್ಲಿ ...ಎವ ಅಕ್ರಮಗಳದ್ದೇ ಒಂದು ರಾಮಾಯಣ ...ಗಾಗುವಷ್ಟಿದೆ. ಆ ವಿಚಾರ ನಂತರ ...

...ಂದು ಕೋಟಿಗೆ ವಿಮೆ, ಪ್ರೀಮಿಯಂ 5 ಲಕ್ಷ

...ಹೊಸನಗರ ತಹಶೀಲ್ದಾರ್‌ಗೆ ತನ್ನ ವರ್ಷದ ...80 ಲಕ್ಷ ರೂ. ಎಂದು ...ರುವ ಕೌಬಾಯ್ ಮತ್ತೊಂದೆಡೆ ತನ್ನ ಇನ್ಶೂರೆನ್ಸ್ ಪಾಲಿಸಿಯ ವಾರ್ಷಿಕ ಪ್ರೀಮಿಯಂಗಾಗಿ 5 ಲಕ್ಷ ರೂಪಾಯಿ ಕಟ್ಟುತ್ತಿದ್ದಾನೆ.

ಭಾರತೀಯ ಜೀವ ವಿಮಾ ನಿಗಮದ ಪಾಲಿಸಿ ಸಂಖ್ಯೆ 621975234 ಹಾಗೂ 621973233ಗಳಲ್ಲಿ ತಲಾ 50 ಲಕ್ಷ ರೂಪಾಯಿಗಳ ಪಾಲಿಸಿಗಳು ಕೌಬಾಯ್‌ಗಿದೆ. ಒಟ್ಟು 1 ಕೋಟಿ ರೂಪಾಯಿ ಮೊತ್ತದ ಈ ಪಾಲಿಸಿಗಳಿಗೆ ವರ್ಷಕ್ಕೆ ಎರಡೂವರೆ ಲಕ್ಷ, ಎರಡೂವರೆ ಲಕ್ಷದಂತೆ ಒಟ್ಟು ಐದು ಲಕ್ಷ ರೂಪಾಯಿ ಪ್ರೀಮಿಯಂ ಹಣ ಕಟ್ಟುತ್ತಿದ್ದಾನೆ ರಾಘವೇಶ.

ಇಲ್ಲಿನ ಪ್ರಶ್ನೆ ಏನೆಂದರೆ ತನ್ನ ಆದಾಯ ಜುಜುಬಿ 2.80 ಲಕ್ಷ ರೂ. ಎಂದು ಘೋಷಿಸಿಕೊಂಡಿರುವ ಸ್ವಾಮಿ ಅದು ಹೇಗೆ ಇನ್ಶೂರೆನ್ಸ್ ಬಾಬ್ತು 5 ಲಕ್ಷ ರೂ. ಕಟ್ಟುತ್ತಿದ್ದಾನೆ. ಆ ಬಾಕಿ ಹಣವನ್ನೇನು ಪವಾಡ ಮಾಡಿ ಸೃಷ್ಟಿಸಿದನಾ ಅಂತ?

ಹೀಗೆ ಸರ್ಕಾರಕ್ಕೆ ಸುಳ್ಳು ಮಾಹಿತಿ ನೀಡಿದ ಬಗ್ಗೆ ಕೌಬಾಯ್ ಏನೂ ತಲೆಕೆಡಿಸಿಕೊಂಡಿಲ್ಲ, ಆದರೆ ಹೊಸನಗರದ ತಹಶೀಲ್ದಾರ್ ಆದರೂ ಈ ಕಾನೂನಿನ ಉಲ್ಲಂಘನೆಯನ್ನು ಪ್ರಶ್ನಿಸಬೇಕಲ್ಲವೇ?

ಬೆಳೆಯುತ್ತಿದೆ ಆಸ್ತಿಯ ಬೊಜ್ಜು!

ಗೋಕರ್ಣ ದೇವಸ್ಥಾನವು ಕೈವಶವಾದ ನಂತರ ರಾಘವೇಶನಿಗೆ ಆಸ್ತಿ ಖರೀದಿಯ ಉಮೇದು ಶುರುವಾಗಿದೆ. ಕೋಟ್ಯಾಂತರ ರೂ.ಬೆಲೆಬಾಳುವ ಒಟ್ಟು 186 ಎಕರೆ ಭೂಮಿ ಈಗ ಕೌಬಾಯ್ ವಶವಾಗಿದೆ.

ಇದರ ಪೈಕಿ ಕೃಷಿಕನೆಂಬ ದೃಢೀಕರಣವಿಲ್ಲದೆ ಖರೀದಿಸಿರುವುದು, ಲ್ಯಾಂಡ್ ಸೀಲಿಂಗ್ ಕಾಯ್ದೆ ಉಲ್ಲಂಘಿಸಿರುವುದು, ಹಣದ ಮೂಲದ ಬಗ್ಗೆ ಖಚಿತ ಮಾಹಿತಿ ನೀಡದೆ ನಡೆಸಿರುವ ಖರೀದಿ ಡೀಲ್‌ಗಳೆಲ್ಲಾ ಸೇರಿವೆ.

ಇತ್ತೀಚೆಗೆ ಈತ ಕೊಂಡಿರುವ ಆಸ್ತಿಗಳ ವಿವರ ಹೀಗಿವೆ.

1. ಗೋಕರ್ಣ ಗ್ರಾಮ ಸರ್ವೆನಂಬರ್ 886-2.36 ಎಕರೆ

2. ರಾಮಚಂದ್ರಾಪುರ-19.26 ಎಕರೆ

3. ಗೋಕರ್ಣ-1.37 ಎಕರೆ

4. ಬಾಳತಿಲ (ಬಂಟ್ವಾಳ ತಾಲ್ಲೂಕು)-44.22 ಎಕರೆ

5. ಕೊಲ್ಲಮೊಗರು (ಸುಳ್ಯ ತಾಲ್ಲೂಕು)- 5.16 ಎಕರೆ

– ಇದರ ಬಾಬ್ತು ಒಟ್ಟು 71.21 ಎಕರೆಗಳು.

ಅಸಲಿ ಸಂಗತಿ ಏನೆಂದರೆ ಈ ಎಲ್ಲಾ ಜಮೀನುಗಳ ಖರೀದಿಯು ಖುದ್ದು ರಾಘವೇಶ್ವರ ಸ್ವಾಮಿಯ ವೈಯಕ್ತಿಕ ಹೆಸರಿನಲ್ಲಿ ಆಗಿದೆ. ಅಂದರೆ ವರ್ಷಕ್ಕೆ 2.80 ಲಕ್ಷ ರೂ. ಮಾತ್ರ ಆದಾಯವಿರುವ ಒಬ್ಬನು ಅದು ಹೇಗೆ 71 ಎಕರೆ ಭೂಮಿ ಖರೀದಿಸುತ್ತಾನೆ? ಈ ಹಣದ ಮೂಲ ಯಾವುದು? ಇದು ಗೋಕರ್ಣ ದೇವಸ್ಥಾನದಲ್ಲಿ ಸಂಗ್ರಹವಾಗುತ್ತಿರುವ ಹಣದ ಗಂಟಾ? ಈ ಪ್ರಶ್ನೆ ಯಾಕೆ ಬರುತ್ತದೆಂದರೆ ಗೋಕರ್ಣ ದೇವಸ್ಥಾನದಲ್ಲಿ ಪ್ರತಿದಿನ ಎಷ್ಟು ಹಣ ಸಂಗ್ರಹವಾಗುತ್ತಿದೆ ಎಂಬ ಪ್ರಶ್ನೆಯನ್ನೂ ಸರ್ಕಾರ ಕೇಳುತ್ತಿಲ್ಲ. ಕೌಬಾಯ್ ಸ್ವಾಮಿಯ ಕಂಟ್ರೋಲಿನಲ್ಲಿ ಸದ್ಯಕ್ಕೆ ದೇವಸ್ಥಾನ ಇದೆಯಾದರೂ ದೇವಸ್ಥಾನದ ಹಸ್ತಾಂತರದ ವಿಚಾರ ಇನ್ನೂ ಹೈಕೋರ್ಟ್‌ನಲ್ಲಿದೆ. ಹಾಗಿರುವಾಗ ಭಕ್ತರು ನೀಡುತ್ತಿರುವ ಕಾಣಿಕೆ ಹಣದ ಮೇಲೆ ರಾಘವೇಶನಿಗೆ ಮಾತ್ರ ಹಕ್ಕಿಲ್ಲ ಮುಜರಾಯಿ ಇಲಾಖೆಗೂ ಹಕ್ಕಿದೆ.


ಕೌಬಾಯ್ ಸ್ವಾಮಿಯ ಲ್ಯಾಂಡ್ ಡೀಲ್‌ಗಳಿಗೆ ಕೊನೆಯೇ ಇದ್ದಂತಿಲ್ಲ, ಗೋಕರ್ಣದ ದುಡ್ಡು ಲಪಟಾಯಿಸಿ 71.21 ಎಕರೆ ಸ್ವಂತ ಹೆಸರಿನಲ್ಲಿ ರಿಜಿಸ್ಟರ್ ಮಾಡಿಸಿಕೊಂಡಿರುವ ಜೊತೆಗೆ ಮಠದ ಹೆಸರಲ್ಲೂ ಭೂಕಬಳಿಕೆ ನಡೆಸಿದ್ದಾನೆ.

1. ರಾಮಚಂದ್ರಾಪುರ-109.30 ಎಕರೆ

2. ಗುಡ್ಡದ ಅನ್ವೇರಿ (ರಾಣೆಬೆನ್ನೂರು ತಾಲ್ಲೂಕು)-62.04 ಎಕರೆ

–ಇವೆಲ್ಲಾ ಭೂ ಖರೀದಿಗಳೂ 2008ರ ಆಗಸ್ಟ್ 14ರ ನಂತರ ನಡೆದಿವೆ. ಅಂದರೆ ಗೋಕರ್ಣ ದೇವಸ್ಥಾನ ಕೈವಶಗೊಂಡ ನಂತರ.

ರಾಘವೇಶನ ಸ್ವಂತ ಹೆಸರಿಗೆ ರಿಜಿಸ್ಟರ್ ಆಗಿರುವ ಗೋಕರ್ಣದ ಸರ್ವೆನಂ 886ರ 2.36 ಎಕರೆ



ಹಮ್ಮಣ್ಣಗೌಡ ಎಂಬಾತನಿಗೆ ಸೇರಿದ್ದು ದಿನಾಂಕ 30-3-2009ರಂದು 12.65 ಲಕ್ಷ ನೀಡಿ ಖರೀದಿಸಲಾಗಿದೆ. (ಸಬ್‌ರಿಜಿಸ್ಟ್ರಾರ್ ದಾಖಲೆ 1147/2008-09). ಅದೇರೀತಿ ಗೋಕರ್ಣ ಗ್ರಾಮದ ಸರ್ವೆ ನಂ.886ರಲ್ಲಿ 1.24 ಎಕರೆಯನ್ನು ನಾಗೇಶ್ ಮಹಾಬಲೇಶ್ವರ ಗೌಡ ಎಂಬಾತನಿಂದ 6.30 ಲಕ್ಷ ರೂ.ಗೆ ದಿ.30-03-2009ರಂದು ಖರೀದಿಸಲಾಗಿದೆ (ಸಬ್ ರಿಜಿಸ್ಟ್ರಾರ್ ನೋಂದಣಿ ಸಂಖ್ಯೆ 1148/08-09). ಇವೆಲ್ಲಾ ರೆವಿನ್ಯೂ ಕಾಯ್ದೆ ಉಲ್ಲಂಘಿಸಿ ನಡೆಸಿರುವ ಖರೀದಿಗಳು. ನಿಯಮ 79 ಎ ಮತ್ತು 79 ಬಿ ಕಾಯ್ದೆಯ ಪ್ರಕಾರ ಕೃಷಿ ಭೂಮಿ ಖರೀದಿಸುವಾಗ ಕಡ್ಡಾಯವಾಗಿ ಆದಾಯ ಪ್ರಮಾಣಪತ್ರ ಹಾಗೂ ಕೃಷಿ ಪ್ರಮಾಣಪತ್ರ ಒದಗಿಸಬೇಕಾಗುತ್ತದೆ. ಆದರೆ ಕೌಬಾಯ್ ಸ್ವಾಮಿ ಅವೆಲ್ಲವನ್ನೂ ಭೂ ಖರೀದಿಯಾದ ನಂತರ ಕೊಟ್ಟಿದ್ದಾನೆ.

ಮತ್ತದು ಸುಳ್ಳು ಮಾಹಿತಿಯ ದಾಖಲೆ!

ಈ ಬಗ್ಗೆ ಒಬ್ಬರು ಕಂದಾಯ ಇಲಾಖೆಗೆ ದೂರು ನೀಡಿದ್ದು ಈಗ ವಿಚಾರಣೆ ನಡೆದಿದೆ. ಕುಮಟಾ ಡೆಪ್ಯೂಟಿ ತಹಶೀಲ್ದಾರ್ ಹಾಗೂ ಅಸಿಸ್ಟೆಂಟ್ ಕಮೀಷನರ್ ಎಸ್.ನವೀನ್‌ಕುಮಾರ ರಾಜು ಕಾನೂನನ್ನೂ ಗಾಳಿಗೆ ತೂರಿ ಕೌಬಾಯ್ ಸ್ವಾಮಿಯ ಅಕ್ರಮ ಮುಚ್ಚಿಹಾಕಲು ಯತ್ನಿಸುತ್ತಿದ್ದಾರೆ. ಗೋಕರ್ಣವನ್ನು ಉದ್ಧಾರ ಮಾಡುತ್ತೇನೆಂದು ದೇವಸ್ಥಾನ ಕಬಳಿಸಿರುವ ಕೌಬಾಯ್ ಸ್ವಾಮಿ ಈಗ ಭಕ್ತರು ನೀಡುತ್ತಿರುವ ದಕ್ಷಿಣೆ, ಕಾಣಿಕೆ, ಪ್ರಸಾದದ ದುಡ್ಡು ಎಲ್ಲವನ್ನೂ ದೋಚುತ್ತಿದ್ದಾನೆ.

ಆ ಹಣದಲ್ಲೇ ಆಸ್ತಿ ಮಾಡಿಕೊಳ್ಳುತ್ತಿದ್ದಾನೆ.

ಇದು ಹಗಲುದರೋಡೆಯಲ್ಲದೆ ಬೇರೇನೂ ಅಲ್ಲ.

...ಠಗಳ ಹಣಕಾಸು ದಂಧೆ-ಸರ್ಕಾರಿ ನಿಯಂತ್ರಣದಿಂದ ಹೊರಗೆ


...ಯ್ದೆ ತಿದ್ದುಪಡಿಗೆ ಸಂಚು

...ದೂ ಪುರೋಹಿತಶಾಹಿಗಳ ಉದ್ಧಾರಕ್ಕೆಂದೇ ಶ್ರಮಿಸುತ್ತಿರುವ ಯಡ್ಡಿ ಸರ್ಕಾರ ...ದೊಂದು ಅನಾಹುತಕಾರಿ ಕೆಲಸಕ್ಕೆ ಕೈ ಹಾಕಿದೆ.

...ಟಕ ಹಿಂದೂ ಧಾರ್ಮಿಕ ಸಂಸ್ಥೆ ಹಾಗೂ ಚಾರಿಟಬಲ್ ಕಾಯ್ದೆ (ತಿದ್ದುಪಡಿ) ...ಯ ಕರ್ನಾಟಕ ಯಾವುದೇ ಮಠಮಾನ್ಯಗಳು ಹಾಗೂ ಧಾರ್ಮಿಕ ಸಂಸ್ಥೆಗಳು ...ಕಾಸಿನ ವಹಿವಾಟಿನ ವಿವರಗಳನ್ನು ಪ್ರತಿ ವರ್ಷ ಸರ್ಕಾರಕ್ಕೆ ಸಲ್ಲಿಸಬೇಕಿದೆ. ...ಸುದಿಂದ ವಿನಾಯಿತಿ ಪಡೆಯಲು ಮಠಾಧೀಶರುಗಳು ಅನೇಕ ಬಾರಿ ...ವಿಫಲರಾಗಿದ್ದಾರೆ. ರಾಜ್ಯ ಹೈಕೋರ್ಟ್ ಸಹ ಈ ವಿಚಾರಕ್ಕೆ ಸಂಬಂಧಿಸಿದಂತೆ ...ರುದ್ಧವೇ ತೀರ್ಪು ನೀಡಿದೆ.

...ಇದನ್ನೆಲ್ಲಾ ನಿರ್ಲಕ್ಷಿಸಿ ಯಡ್ಡಿ ಸರ್ಕಾರ ಈಗ ಆ ಕಾಯ್ದೆಗೆ ತಿದ್ದುಪಡಿ ...ಲು ಹೊರಟಿದೆ. ಬಹುತೇಕ ಬ್ರಾಹ್ಮಣ ಹಾಗೂ ಲಿಂಗಾಯತ ಮಠಗಳಿಗೇ ...ಹೆಚ್ಚು ಲಾಭವಾಗಲಿದೆ.

ಈಗಿರುವ ಕಾಯ್ದೆಗೆ ತಿದ್ದುಪಡಿ ಏನಾದರೂ ಆಗಿಯೇ ಬಿಟ್ಟರೆ ಮಠಗಳು ಮುಂದಿನ ದಿನಗಳಲ್ಲಿ ಕರ್ನಾಟಕದ ಪರ್ಯಾಯ ಸ್ವಿಸ್ ಬ್ಯಾಂಕುಗಳಾಗುವುದರಲ್ಲಿ ಸಂಶಯವಿಲ್ಲ.



ಸುಪ್ರೀಂ ಕೋರ್ಟ್ ತಿದ್ದುಪಡಿಯಾಗಲಿರುವ ಹೊಸ ಕಾನೂನನ್ನು ಯಾವುದೇ ಕಾರಣದಿಂದಲೂ ಒಪ್ಪಲಾರದು. ಏಕೆಂದರೆ ಅದು ಸಂವಿಧಾನಕ್ಕೆ ವಿರುದ್ಧವಾಗಿರುತ್ತದೆ. ಜೊತೆಗೆ ಈ ದೇಶದ ಸಂವಿಧಾನ, ಕಾನೂನು, ಕಾರ್ಯಾಂಗ ಹಾಗೂ ನ್ಯಾಯಾಂಗಗಳ ಯಾವ ವ್ಯಾಪ್ತಿಗೂ ಮಠಗಳ ವ್ಯವಹಾರ ನಿಲುಕದೇ ಹೋದರೆ ಗತಿಯೇನು?

ಹಾಲಿ ಮುಜರಾಯಿ ಸಚಿವ ವಿ.ಎಸ್.ಆಚಾರ್ಯ ಹೇಳಿಕೇಳಿ ಆರೆಸ್ಸೆಸ್ ಕಾರ್ಯಕರ್ತ. ಈ ಅವಿವೇಕಿಗೆ ಬ್ರಾಹ್ಮಣ ಮಠಾಧೀಶರಿಗೆ ಸೇವೆ ಮಾಡುವ ಕೆಲಸ ಬಿಟ್ಟರೆ ಬೇರೆ ಕೆಲಸ ಗೊತ್ತೇ ಇಲ್ಲ, ಪೇಜಾವರ ಸ್ವಾಮಿ, ಕೌಬಾಯ್ ಸ್ವಾಮಿ, ಸುತ್ತೂರು ಸ್ವಾಮಿ ಇನ್ನೂ ಮುಂತಾದವರು ಈ ಕಾಯ್ದೆ ತಿದ್ದುಪಡಿಗಾಗಿ ಲಾಬಿ ನಡೆಸುತ್ತಿದ್ದಾರೆ.

ಬೆಳಗಾವಿ: ವಿಶ್ವ ಕನ್ನಡ ಸಮ್ಮೇಳನದ ಹೆಸರಲ್ಲಿ ಕೇಸರಿ ಜಾತ್ರೆಗೆ ತಯಾರಿ

ವಿಶ್ವ ಕನ್ನಡ ಸಮ್ಮೇಳನದ ನೆಪದಲ್ಲಿ ಕೇಸರಿ ಜಾತ್ರೆ ನಡೆಸಲು ಚೆಡ್ಡಿಗಳು ಸಜ್ಜಾಗುತ್ತಿದ್ದಾರೆ. ಎಂದೋ ನಡೆದು ಹೋಗಬೇಕಿದ್ದ ಈ ಕನ್ನಡ ಸಮ್ಮೇಳನವನ್ನು ಈಗ ಮುಂದಿನ ಚುನಾವಣಾ ತಯಾರಿ ಎಂಬಂತೆ ಗಡಿಭಾಗ ದಲ್ಲಿ ಆಯೋಜಿಸುತ್ತಿರುವುದು ಸುಳ್ಳಲ್ಲ.



ಮುಂದಿನ ತಿಂಗಳು ಮಾರ್ಚ 11ರಿಂದ ಮೂರು ದಿನಗಳ ಕಾಲ ಬೆಳಗಾವಿಯಲ್ಲಿ ನಡೆಯಲಿರುವ ಸಮಾರಂಭದ ತಯಾರಿಯನ್ನು ಗಮನಿಸಿದರೆ ಚೆಡ್ಡಿಗಳು ವಿಶ್ವ ಕನ್ನಡ ಸಮ್ಮೇಳನ ವನ್ನು ದುರುಪಯೋಗ ಮಾಡಿಕೊಳ್ಳುವುದರಲ್ಲಿ ಯಾವುದೇ ಸಂದೇಹವಿಲ್ಲ. ಯಾರದೋ ದುಡ್ಡಲ್ಲಿ ಯಲ್ಲಮ್ಮನ ಜಾತ್ರೆ ಮಾಡುವಲ್ಲಿ ನಿಸ್ಸೀಮರಾದ ಬಿಜೆಪಿಗರು ಗಡಿ ರಕ್ಷಣೆ ಹೆಸರಲ್ಲಿ ಖಜಾನೆ ಬಕ್ಷಣೆಗೆ ದಿನಕ್ಕೊಂದು ಸ್ಕೆಚ್ ರೆಡಿ ಮಾಡಿ ಕೋಟಿ ಕೋಟಿ ಬಿಲ್ ತೆಗೆಯುತ್ತಿದ್ದಾರೆ.

ಸಮ್ಮೇಳನಕ್ಕೆಂದು ರಚಿಸಲಾಗಿರುವ ಸಮಿತಿಗಳ ಆಯ್ಕೆಯಲ್ಲಿ ಸಾಕಷ್ಟು ತಾರತಮ್ಯ-ಪಕ್ಷಭೇದ ಮಾಡಲಾಗಿದೆ. ಗಡಿಭಾಗದ ಕನ್ನಡ ಪರ ಹೋರಾಟಗಾರರನ್ನು ನಿರ್ಲಕ್ಷ್ಯ ಮಾಡಲಾಗಿದೆ. ಸಮ್ಮೇಳನ ಎಕ್ಕುಟ್ಟಲು ಏನೇನು ಬೇಕೋ ಅದೆಲ್ಲವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಗೋವಿಂದ ಕಾರಜೋಳ ಮತ್ತು ಬೆಳಗಾವಿ ಉಸ್ತುವಾರಿ ಸಚಿವ ಉಮೇಶ ಕತ್ತಿಗಳೇ ಮಾಡುತ್ತಿದ್ದಾರೆ.

ತಮಗೆ ಹೊಂದಾಣಿಕೆ ಆಗುವ ಅಧಿಕಾರಿಗಳಿಗೆ ಜವಾಬ್ದಾರಿ ನೀಡಿದ್ದಾರೆ. ಸೋಮಾರಿಗಳ ಸಂತೆಯಂತಿರುವ ಬೆಳಗಾವಿ ಜಿಲ್ಲೆಯ ಬಹುತೇಕ ಹಿರಿಯ ಅಧಿಕಾರಿ ವರ್ಗ ಕಾಗದದಲ್ಲೆ ಕರಾಮತ್ತು ತೋರಿಸಿ ಹಾಯಾಗಿ ಕಾಲ ಕಳೆಯುತ್ತಿದ್ದಾರೆ. ಹೀಗಾದರೆ ಹೊರ ದೇಶಗಳಿಂದ ಸುಮಾರು 500 ಜನ ಕನ್ನಡಿಗರು ಸೇರಿದಂತೆ ನಾಡಿನ ಲಕ್ಷಾಂತರ ಭಾಷಾಭಿಮಾನಿಗಳು ಪಾಲ್ಗೊಳ್ಳುವ ವಿಶ್ವ ಕನ್ನಡ ಸಮ್ಮೇಳನದ ತಯಾರಿ ಬಾಕಿ ಇರುವ ಮೂರು ವಾರಗಳಲ್ಲಿ ಹೇಗೆ ತಾನೇ ಮುಗಿಯಲು ಸಾಧ್ಯ ಎಂಬ ಪ್ರಶ್ನೆ ಬೆಳಗಾವಿ ಕನ್ನಡಾಭಿಮಾನಿಗಳಲ್ಲಿ ಉದ್ಭವಿಸಿದೆ.

ಸರಕಾರ ಸಮ್ಮೇಳನಕ್ಕೆ ಮೂವತ್ತು ಕೋಟಿ ಹಣ ಬಿಡುಗಡೆ ಮಾಡುವುದಾಗಿ ಘೋಷಿಸಿದೆ. ಆದರೆ ಅದರಲ್ಲಿ ಹತ್ತು ಕೋಟಿ ಮಾತ್ರ ಈತನಕ ಬಿಡುಗಡೆಯಾಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಎಂಟು ಕೋಟಿಯನ್ನ ಬೆಂಗಳೂರಲ್ಲಿಟ್ಟುಕೊಂಡು ಎರಡು ಕೋಟಿಯನ್ನು ಮಾತ್ರ ಬೆಳಗಾವಿಗೆ ಕಳುಹಿಸಿದೆ. ಸಚಿವ ಕಾರಜೋಳ ಇಲಾಖೆಯ ಈ ವರಸೆ ಕಂಡು ಕೆರಳಿರುವ ಜಿಲ್ಲಾ ಮಂತ್ರಿ ಉಮೇಶ ಕತ್ತಿ 'ಹಣ ಇಲ್ಲದೆ ಅದೇನು ಕಿಸಿತಾನೋ ನೋಡತೇನಿ' ಎಂದು ಕಾರಜೋಳನ ಮೇಲೆ ಎಲ್ಲವನ್ನು ಹಾಕಿ ಸುಮ್ಮನಾಗಿದ್ದಾನೆ. ಇನ್ನು ಉಸ್ತುವಾರಿ ಸಮಿತಿಯ ಮುಖ್ಯಸ್ಥನಾಗಿರುವ ಸಂಸದ ಪ್ರಭಾಕರ ಕೋರೆ ಇಬ್ಬರ ಜಗಳ ನೋಡಿ ಹೈರಾಣಾಗಿ ದಿಲ್ಲಿ ವಿಮಾನ ಏರಿದ್ದಾರೆ.

2007ರಲ್ಲಿ ಮಹಾರಾಷ್ಟ್ರದ ಕೇಸರಿ ಭಾಷಾಂಧರನ್ನು ಹತ್ತಿಕ್ಕಲು, ಎಮ್‌ಇಎಸ್ ಮತ್ತು ಶಿವಸೇನದಂತಹ ಕೇಸರಿ ಬೆಂಕಿ ಕಾರುವ ಪಕ್ಷಗಳಿಗೆ ತಕ್ಕ ಉತ್ತರ ನೀಡಲು ಗಡಿ ತಂಟೆ ಜೀವಂತವಿರುವ ಬೆಳಗಾವಿಯಲ್ಲಿ ವಿಶ್ವ ಕನ್ನಡ ಸಮ್ಮೇಳನ ನಡೆಸುವ ಯೋಜನೆಯನ್ನು ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಪ್ರಕಟಿಸಿದಾಗ ಇಲ್ಲಿಯ ಕನ್ನಡಿಗರು ಹಬ್ಬ ಆಚರಿಸಿದ್ದರು. ಜೊತೆಗೆ ಸಮ್ಮೇಳನದಲ್ಲೇನಿರಬೇಕು ಎಂಬುದರ ಬಗ್ಗೆ ಜನಾಭಿಪ್ರಾಯ ಸಂಗ್ರಹಣೆ ಮತ್ತು ತಯಾರಿಗೆಂದು ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಒಂದು ಕಚೇರಿಯನ್ನು ತೆರೆದು ಒಬ್ಬ ಅಧಿಕಾರಿಯನ್ನು ನೇಮಿಸಿದ್ದರು. ಆದರೆ ಕುಮಾರಸ್ವಾಮಿ ನಂತರ ಅಧಿಕಾರಕ್ಕೆ ವಕ್ಕರಿಸಿದ ಯಡಿಯೂರಪ್ಪ ಸಮ್ಮೇಳನ ವನ್ನು ಅಕ್ಷರಶಃ ರಾಜಕೀಯ ಲೆಕ್ಕಾಚಾರ ದಲ್ಲಿ ತೂಗಹತ್ತಿದರು. ಗಡಿ ಭಾಗದಲ್ಲಿ ಬಿಜೆಪಿ ಬೇರು ಬಿಡಲು ಪದೇಪದೆ ಸಮ್ಮೇಳನ ವನ್ನು ಮುಂದಕ್ಕೆ ಹಾಕಿದರು. ಆದರೆ ಯಾವಾಗ ಬೆಳಗಾವಿಯ ಕನ್ನಡಾಭಿಮಾನಿಗಳು ಬೀದಿಗಿಳಿದು ಯಡ್ಡಿಯ ವಿರುದ್ಧ ತಿರುಗಿಬಿದ್ದರೋ ಆವಾಗ ಎಚ್ಚೆತ್ತು ದಿನ ನಿಗದಿಪಡಿಸಿದರು ಯಡ್ಡಿ.



ಆದರೆ ಸರ್ಕಾರದ ಈ ತೀರ್ಮಾನ ಹೊರಬೀಳುತ್ತಲೇ ಸಮ್ಮೇಳ ನದ ತಯಾರಿಗಳು ಪ್ರಾರಂಭವಾಗಬೇಕಿತ್ತು, ಆದರೆ ಅದ್ಯಾವುದೂ ನಡೆದಿಲ್ಲ, ಮೊನ್ನೆ ನಡೆದ ಸಮ್ಮೇಳನದ ವಿಶೇಷಾಧಿಕಾರಿಗಳ ಸಭೆಗೆ ಯಡ್ಡಿ ಹಾಜರಾಗಲಿಲ್ಲ, ಹಾಗೆಯೇ ಪೂರ್ವಭಾವಿ ಸಭೆಯಲ್ಲಿ ಉಮೇಶ ಕತ್ತಿ ಮತ್ತು ಕಾರಜೋಳ ಎಲ್ಲ ಜನರ ಮುಂದೆ ಜಗಳವಾಡಿದ್ದಾರೆ. ಅವತ್ತು ಅವರಿಬ್ಬರು ಕೈ ಕೈ ಹಚ್ಚುವುದೊಂದು ಬಾಕಿಯಿತ್ತಷ್ಟೆ. ಇದೆಲ್ಲದರ ನಡುವೆ ಹಣ ಬಿಡುಗಡೆ ಮಾಡಲು ಹಣಕಾಸು ಇಲಾಖೆಯ ಕಾರ್ಯದರ್ಶಿ ಜ್ಯೋತಿರಾಮಲಿಂಗಮ್ ಹಿಂದೇಟು ಹಾಕುತ್ತಿದ್ದಾರಂತೆ. ಸ್ಥಳೀಯ ಇಲಾಖೆಯ ಯಾವುದಾದರೂ ಫಂಡಿನಿಂದ ಸಮ್ಮೇಳನಕ್ಕೆ ಹಣ ಹೊಂದಿಸಿಕೊಳ್ಳಿ ಎಂದು ಅವರು ಹೇಳಿದ್ದಾರಂತೆ. ಈ ವಿಷಯ ಬೆಳಗಾವಿ ಬಜಾರಿಗೆ ಬಂದಾಗಿನಿಂದ ಜನ ಸಮ್ಮೇಳನ ನಡೆಯುವ ಗ್ಯಾರಂಟಿ ಇಲ್ಲ ಎಂದು ಮಾತನಾಡಿಕೊಳ್ಳುತ್ತಿದ್ದಾರೆ.

ನಾಡಿನ ಅತಿದೊಡ್ಡ ಜಿಲ್ಲೆ ಎನಿಸಿಕೊಂಡಿರುವ ಬೆಳಗಾವಿಯಲ್ಲಿ ಹದಿನೆಂಟು ಜನ ಶಾಸಕರಿದ್ದಾರೆ. ಇಬ್ಬರು ರಾಜ್ಯಸಭಾ ಮತ್ತು ಲೋಕಸಭಾ ಸದಸ್ಯರು ಮಾತ್ರವಲ್ಲದೆ ಇಬ್ಬರು ಎಮ್‌ಎಲ್‌ಸಿಗಳಿದ್ದಾರೆ. ಆದರೆ ಒಬ್ಬರಲ್ಲಿಯೂ ಸಮ್ಮೇಳನದ ಬಗ್ಗೆ ಆಸಕ್ತಿ ಕಂಡು ಬರುತ್ತಿಲ್ಲ. ... ಹೊರತುಪಡಿಸಿ ಉಳಿದ ಪಕ್ಷದ ಶಾಸಕ ಮತ್ತು ಸ... ಚೆಡ್ಡಿಗಳ ಹಾರಾಟ ಕಂಡು ಸುಮ್ಮನಾಗಿದ್ದಾರೆ. ಸಮ್ಮೇ... ಮುಖ್ಯಸ್ಥನಾಗಿರುವ ಪ್ರಭಾಕರ ಕೋರೆ, ತನ್ನ ಹಿಡಿತದ... ಕೆ.ಎಲ್.ಇ. ಸಂಸ್ಥೆ ಮೀಟಿಂಗ್‌ನಂತೆ ಇಲ್ಲಿಯೂ ... ಮಾಡುತ್ತಿದ್ದಾರೆ. ಮಂತ್ರಿ ಲಕ್ಷ್ಮಣ ಸವದಿ, ಆನಂದ ಮ... ಜಗದೀಶ ಮೆಟಗುಡ್ಡ, ಸಂಜಯ ಪಾಟೀಲ, ದುರ್ಯೋ... ಐಹೊಳೆ, ರಮೇಶ ಕತ್ತಿ, ನಾಯಕ ಸೇರಿದಂತೆ ಅನೇ... ಸಮ್ಮೇಳನದ ಹೆಸರಲ್ಲಿ ದುಡ್ಡೆತ್ತಲು ಕಾಯುತ್ತಿದ್ದಾರೆ.

ಇನ್ನು ಜಿಲ್ಲಾಧಿಕಾರಿಯಾಗಿರುವ ಏಕರೂಪ ... ಅನುಭವದ ಕೊರತೆಯಿದೆ. ಈ ಹಿಂದೆ ಜಿ.ಪಂ.ನಲ್ಲಿ ... ಆಗಿದ್ದ ಕಾರ್ ಅಧಿಕಾರಿಗಳಿಂದ ಕೆಲಸವನ್ನು ಸರಿ... ತೆಗೆಯದೆ ಸರಕಾರಿ ಯೋಜನೆಗಳನ್ನು ಹಳ್ಳ ಹಿ... ಎಲ್ಲರಿಗೂ ಗೊತ್ತಿರುವ ಸಂಗತಿಯೇ. ... ವಾಗ ಸಮ್ಮೇಳನದ ಯಶಸ್ಸು ನಿರೀಕ್ಷಿಸು... ಹುಚ್ಚರೆ ಸರಿ. ಜಿ.ಪಂ. ಸಿ.ಇ.ಓ. ಗೋ... ರಾಜು, ಹೆಚ್.ಕೆ.ಮಲ್ಲಾಪೂರ, ಮಹಾ... ಪಾಲಿಕೆ ಆಯುಕ್ತ ಎಸ್.ಜಿ.ಪಾಟೀಲ, ... ಆಯುಕ್ತ ಚೌಗಲೆ ಸೇರಿದಂತೆ ಬಹುತೇಕ... ಮಟ್ಟದ ಅಧಿಕಾರಿಗಳು ಪಕ್ಕಾ ಸೋ... ಗಳು. ವಿಶ್ವ ಕನ್ನಡ ಸಮ್ಮೇಳನದಂಥ ... ಸಾಹಿತ್ಯ ಸಮಾರಂಭ ನಡೆಸಲು ಕನ್ನ... ಹೋರಾಡಿದ, ಅಧ್ಯಯನ ಮಾಡಿದ ಹಿ... ಸಲಹೆ-ಮಾರ್ಗದರ್ಶನ ಪಡೆಯು... ಅವಶ್ಯ. ಆದರೆ ಇಲ್ಲಿ ಅದ್ಯಾವುದೂ ನ... ಹಿರಿಯರಾದ ಪಾಟೀಲ ಪುಟ್ಟಪ್ಪ, ಸಾಹಿತಿಗಳಾದ ಚ... ಕಣವಿ, ಸರಜೂ ಕಾಟ್ಕರ್, ರಾಘವೇಂದ್ರ ಜ... ಶಿವರಾಮೇಗೌಡ ರಂತಹ ವರನ್ನು ಇಲಾಖೆಯ... ಮಾತನಾಡಿಸಿಲ್ಲ.

ತನ್ನಷ್ಟಕ್ಕೆ ತಾನು ದೊಡ್ಡವನು ಎಂದುಕೊಂ... ನಿರ್ದೇಶಕ ಮನು ಬಳಿಗಾರ, ಅನುಭವ ಇಲ್ಲದ ಅಧಿ... ಮಾತು ಕಟ್ಟಿಕೊಂಡು ಕಾರುಬಾರು ನಡೆಸುತ್ತಿದ್ದಾರೆ. ಸ... ಚರ್ಚೆಗಳನ್ನು ಬೆಂಗಳೂರಿನಲ್ಲಿ ನಡೆಸಿ ಇಲ್ಲಿಯ ... ಕ್ರಿಯಾ ಸಮಿತಿಯ ವಿರೋಧ ಕಟ್ಟಿಕೊಂಡಿದ್ದಾರೆ. ಸಮ... ಇನ್ನೂ ಮೂರು ವಾರ ಮಾತ್ರ ಬಾಕಿ ಇದೆ. ... ಉಪ ಸಮಿತಿಗಳ ರಚನೆಯಾಗಿಲ್ಲ, ಮುಂದು... ಮಾಡಲು ಹಣವಿಲ್ಲ, ಗುರುತಿಸಿರುವ 300 ... ಕನ್ನಡಿಗರನ್ನು ಇನ್ನೂ ಸಂಪರ್ಕಿಸಿಲ್ಲ, ಅವರ ಬ... ಆಹ್ವಾನ ಕಳುಹಿಸಿಲ್ಲ. ಇದೆಲ್ಲದರ ನಡುವೆಯೂ ಸ... ನಡೆಯಿತೆಂದಿಟ್ಟುಕೊಳ್ಳಿ, ಅದು ಅಪ್ಪಟ ಕೇಸರಿ ಸ... ಆಗಬಹುದಷ್ಟೆ!

• ಹುರಳಿಕುಪ್ಪಿ ವಿನ...

ಸಮಸ್ಯೆ ನೂರು, ಭೋಜನಕ್ಕೆ ತಯಾರು!

ಈ ಹಿಂದೆ 1985ರಲ್ಲಿ ಮೈಸೂರಿನಲ್ಲಿ ವಿಶ್ವ ಕನ್ನಡ ಸಮ್ಮೇಳನ ನಡೆದಿದ್ದು ಈಗ ಇಪ್ಪತ್ತಾರು ವರ್ಷಗಳ ನಂತರ ನಡೆಯುತ್ತಿರುವುದು ಗಡಿ ಭಾಗದ ಜನರಲ್ಲಿ ಅನೇಕ ನಿರೀಕ್ಷೆಗಳನ್ನು ಹುಟ್ಟಿಸಿದೆ. ಸಮ್ಮೇಳನದಲ್ಲಿ ಗಡಿ ಮತ್ತು ಹೊರನಾಡ ಕನ್ನಡಿಗರು ಎದುರಿಸುತ್ತಿರುವ ಸಮಸ್ಯೆ, ಮಹಾರಾಷ್ಟ್ರದಲ್ಲಿರುವ ಕನ್ನಡಿಗರ ಸ್ಥಿತಿ ಮತ್ತು ರಕ್ಷಣೆಯ ಬಗ್ಗೆ ಚಿಂತಿಸಬೇಕಿದೆ. ನಾಡಿನ ಗಡಿ ಭಾಗಗಳಲ್ಲಿ ಮುಚ್ಚಿರುವ ಕನ್ನಡ ಶಾಲೆ ಮತ್ತು ಆಸ್ಪತ್ರೆಗಳನ್ನು ಮತ್ತೆ ಆರಂಭಿಸುವ ಬಗ್ಗೆ ನಿರ್ಣಯಿಸಬೇಕಿದೆ. ಗಡಿ ಗ್ರಾಮಗಳ ಅಭಿವೃದ್ಧಿ ಸೇರಿದಂತೆ ಮೂಲಭೂತ ಸೌಕರ್ಯ ಕಲ್ಪಿಸಲು ಪಣತೊಡಬೇಕಿದೆ. ಇದಲ್ಲದೆ ವಿದೇಶದಲ್ಲಿರುವ ಕನ್ನಡಿಗರ ರಕ್ಷಣೆಯ ಬಗ್ಗೆ ಗಮನಹರಿಸಬೇಕಿದೆ.

ಆದರೆ ಇದಾವುದರ ಬಗ್ಗೆಯೂ ಅರಿವಿಲ್ಲದ ಬೆಳಗಾವಿ ರಾಜಕಾರಣಿಗಳಿಗೆ ಸಮ್ಮೇಳನದಲ್ಲಿ ಚರ್ಚೆಯಾಗಬೇಕಾದ ಅಂಶಗಳ ಪಟ್ಟಿ ತಯಾರಿಸಬೇಕೆಂಬ ಜ್ಞಾನ ಕೂಡ ಇಲ್ಲ, ಸಮ್ಮೇಳನದ ಹೆಸರಲ್ಲಿ ಬೆಳಗಾವಿ ನಗರದಲ್ಲಿ ಗೂಡಂಗಡಿ ಇಟ್ಟುಕೊಂಡು ಜೀವನ ಸಾಗಿಸುತ್ತಿದ್ದ ಸಣ್ಣ ವ್ಯಾಪಾರಿಗಳನ್ನು ತೆರವುಗೊಳಿಸಿ ಅವರ ಊಟಕ್ಕೆ ಕನ್ನಹಾಕಿದ್ದಾರೆ. ಇನ್ನು ನಗರದಲ್ಲಿ ನಾಡಿನ ಇತಿಹಾಸ ತಿಳಿಸಬಲ್ಲ ಚಿತ್ರಕಲೆ ಬಿಡಿಸಲು ನೀಡಲಾಗಿದ್ದ 30 ಲಕ್ಷ ವೆಚ್ಚದ ಟೆಂಡರನ್ನು ಕ್ಯಾನ್ಸಲ್ ಮಾಡಿ ಬಡ ಕಲಾವಿದರ ಕೆಲಸ ಕಸಿದುಕೊಂಡು ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿನ ಚಿತ್ರಕಲಾ ಶಿಕ್ಷಕರಿಂದ ಈ ಕೆಲಸ ಮಾಡಿಸಲು ಮುಂದಾಗಿದ್ದಾರೆ. ಇದನ್ನೆಲ್ಲ ಗಮನಿಸಿದರೆ, ಸಮ್ಮೇಳನವೆಂಬುದು ರಣ ಹಸಿವಿನ ಅಧಿಕಾರಿಗಳು ಮತ್ತು ರಾಜಕಾರಣಿಗಳ ಭೋಜನದ ತಯಾರಿಯಂತಲೇ ಭಾಸವಾಗುತ್ತಿದೆ.

ಚಿಕ್ಕಮಗಳೂರು ಜಿ.ಪಂ: ಅಧ್ಯಕ್ಷರ ಆಯ್ಕೆಯಲ್ಲಿ ಬಿಜೆಪಿಯೊಳಗೆ ರಗ...

ಚಿಕ್ಕಮಗಳೂರು ಜಿಲ್ಲೆಯಲ್ಲಿ ಬಿಜೆಪಿ ಬಲಿತುಕೊಂಡಿದೆ. ಇಲ್ಲಿನ ಲೋಕಸಭಾ ಸ್ಥಾನವನ್ನು ಸತತ ಐದು ಸಲ ಕಾಂಗ್ರೆಸ್ ಕಳೆದುಕೊಂಡಿದೆ. ನಾಲ್ಕು ಸಲ ಬಿಜೆಪಿ ಗೆದ್ದಿದೆ. 1996ರಲ್ಲಿ ಜನತಾ ಪಕ್ಷದಿಂದ ಬಿ.ಎಲ್.ಶಂಕರ್ ಗೆದ್ದಿದ್ದರು. ನಂತರದ ಎಲ್ಲಾ ಚುನಾವಣೆಗಳು ಬಿಜೆಪಿಗೆ ಮುನ್ನಡೆ ದೊರಕಿಸಿವೆ. ಎಲ್ಲಾ ಐದು ವಿಧಾನಸಭಾ ಕ್ಷೇತ್ರಗಳನ್ನು ಬಿಜೆಪಿ ಬಾಚಿಕೊಂಡಿದೆ. ಇದಕ್ಕೆ ಕಾರಣಗಳು ಸ್ಪಷ್ಟ. ಕಳೆದ ಒಂದೂವರೆ ದಶಕದಿಂದ ಕಾಂಗ್ರೆಸ್ ಮತ್ತು ಜೆಡಿಎಸ್ ನಡುವಿನ ತಿಕ್ಕಾಟ ಬಿಜೆಪಿಗೆ ವರದಾನವಾಗಿದೆ. ಆದರೆ ಈ ನಡುವೆ ಬಿಜೆಪಿಯಲ್ಲೇ ವೈಮನಸ್ಯ ಶುರುವಿಟ್ಟದ್ದು ಪರದಾಟಕ್ಕೆ ಕಾರಣವಾಗಿದೆ.



ಇತ್ತೀಚೆಗಷ್ಟೆ ನಡೆದ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿ ಚುನಾವಣೆಗಳಲ್ಲಿ ಅತಂತ್ರ ಫಲಿತಾಂಶ ಬರುವ ನಿರೀಕ್ಷೆ ಇತ್ತು, ಆದರೆ ಬಿಜೆಪಿ ದಿಗಿಲುಗೊಳ್ಳುವಷ್ಟು ಸ್ಥಾನಗಳನ್ನು ಗೆದ್ದಿತು. ಈ ಅನಿರೀಕ್ಷಿತ ಬೆಳವಣಿಗೆಯಿಂದ ಅನೇಕರ ಲೆಕ್ಕಾಚಾರಗಳು ತಲೆಕೆಳಗಾದವು.

ಆಗ ಶುರುವಾಯಿತು ಬಿಜೆಪಿಗೆ 'ಸಂಕಟ ಕಾಲ'! ಕೆಲತಿಂಗಳ ಹಿಂದೆ ಶೃಂಗೇರಿಯ ಶಾಸಕ ಡಿ.ಎನ್.ಜೀವರಾಜ್, ಚಿಕ್ಕಮಗಳೂರಿನ ಸಿ.ಟಿ.ರವಿ, ಮೂಡಿಗೆರೆಯ ಎಂ.ಪಿ.ಕುಮಾರಸ್ವಾಮಿ ಮಂತ್ರಿ ಪದವಿಗೆ ಲಾಬಿ ನಡೆಸುತ್ತಿದ್ದಾಗ ಬಿಜೆಪಿ ರಾಜ್ಯ ಮುಖಂಡರಿಗೆ ಜೀವರಾಜ್ ಹೇಳಿದ್ದೇನು ಗೊತ್ತಾ? "ಮಂತ್ರಿ ಪದವಿಗೆ ಸಚೇತಕ ಹುದ್ದೆ ಅಡ್ಡವಾದರೆ ಈ ಸ್ಥಾನಕ್ಕೆ ನಾನು ರಾಜೀನಾಮೆ ನೀಡಲು ಸಿದ್ಧ. ನನಗೆ ಮಂತ್ರಿ ಸ್ಥಾನವಿಲ್ಲದಿದ್ದರೆ ಜಿಲ್ಲೆಯಲ್ಲಿ ಬೇರ್‍ಯಾರಿಗೂ ಕೊಡಬಾರದು. ಆದರ ಬದಲು ಜಿಲ್ಲೆಗೆರಡು ನಿಗಮ, ಮಂಡಳಿಗಳ ಅಧ್ಯಕ್ಷ ಸ್ಥಾನಗಳನ್ನು ಕೊಡಿ" ಅಂದಿದ್ದ.



ಆಗ ಬಿಜೆಪಿಯ ರಾಜ್ಯಾಧ್ಯಕ್ಷ ಈಶ್ವರಪ್ಪ ಬಿಜೆಪಿಯ ಜಿಲ್ಲಾಧ್ಯಕ್ಷ ಎಂ.ಕೆ.ಪ್ರಾಣೇಶ್‌ಗೆ ಅರಣ್ಯ ವಸತಿ ನಿಗಮವನ್ನು ಮತ್ತು ರೇಖಾ ಹುಲಿಯಪ್ಪಗೌಡ ಅವರಿಗೆ ತೆಂಗು ಮತ್ತು ನಾರು ಮಂಡಳಿಯನ್ನು ಕೊಟ್ಟು ಕೈತೊಳೆದುಕೊಂಡಿದ್ದರು. ಆದರೆ ಜಿಲ್ಲಾ ಪಂಚಾಯತಿ ಚುನಾವಣೆ ಎದುರಾದಾಗ ಸದಾನಂದಗೌಡರನ್ನು ಕಂಡ ರೇಖಾ "ತೆಂಗು ಮತ್ತು ನಾರಿನ ಅಧ್ಯಕ್ಷಗಿರಿ ನಂಗೆ ಬೇಡ. ಜಿಲ್ಲಾ ಪಂಚಾಯತಿಗೆ ಸ್ಪರ್ಧಿಸಲು ಅವಕಾಶ ಕೊಡಿ. ಗೆದ್ದರೆ ಅಧ್ಯಕ್ಷ ಗಾದಿ ಕೊಡಿ" ಅಂದಿದ್ದರು. ಸದಾನಂದ ಗೌಡ ಅದಕ್ಕೆ ಒಪ್ಪಿದ್ದರು.



ಯಡವಟ್ಟು ಪ್ರಾರಂಭವಾಗಿದ್ದೇ ಅಲ್ಲಿಂದ.

ಜಿಲ್ಲಾ ಪಂಚಾಯತಿಗೆ ಬಿಜೆಪಿಯಿಂದ ಗೆದ್ದವರಲ್ಲಿ ಬಹುತೇಕರು ಪ್ರಭಾವಿಗಳು. ಅವರಲ್ಲಿ ರೇಖಾ ಹುಲಿಯಪ್ಪಗೌಡ ಮತ್ತು ಕವಿತಾ ಬೆಳ್ಳಿ ಪ್ರಕಾಶ್ ಪ್ರಮುಖರು. ರೇಖಾ ಹೇಳಿಕೇಳಿ ಸ್ವಂತ ವರ್ಚಸ್ಸಿನಿಂದ ಮೇಲೆದ್ದಿರುವ ಹೆಣ್ಣುಮಗಳು. ಎಂ.ಎ ಪದವೀಧರೆ. ಚುನಾವಣೆಯಲ್ಲಿ ಗೆದ್ದಂದಿನಿಂದ ರೇಖಾ ಅಧ್ಯಕ್ಷ ಗಾದಿಯ ಮೇಲೆ ಕಣ್ಣಿಟ್ಟಿದ್ದರು. ಹಾಗೆಯೇ ಜಿಲ್ಲಾ ಪಂಚಾಯತಿಯ ಮಾಜಿ ಅಧ್ಯಕ್ಷ ಬೆಳ್ಳಿ ಪ್ರಕಾಶ್ ಅವರ ಪತ್ನಿ ಕವಿತಾರ ದೃಷ್ಟಿಯೂ ಅದರತ್ತ ನೆಟ್ಟಿತ್ತು.

ಈ ಸಮಸ್ಯೆಯನ್ನು ಬಗೆಹರಿಸಲು ಸಿ.ಟಿ.ರವಿ ರೆಸಾರ್ಟ್ ರಾಜಕೀಯ ನಡೆಸಿ ಒಮ್ಮತ ಮೂಡಿಸಲು ಪ್ರಯತ್ನಿಸಿದರಾದರೂ ವಾಸ್ತವವಾಗಿ ನಡೆದಿದ್ದು ಮಾತ್ರ ಬೇರೆ. ರೇಖಾ ಹುಲಿಯಪ್ಪಗೌಡ ಮತ್ತು ಕವಿತಾರ ಪ್ರತಿಷ್ಠೆ ಮತ್ತು ಜಿದ್ದಾಜಿದ್ದಿಯಿಂದಾಗಿ ಲಾಭವಾಗಿದ್ದು ಪ್ರಫುಲ್ಲಾ ಮಂಜುನಾಥ್‌ಗೆ! ತಮಾಷೆಯ ಸಂಗತಿಯೆಂದರೆ ಆರಂಭದಲ್ಲಿ ಪ್ರಫುಲ್ಲಾ ಮಂಜುನಾಥ್ ಹೆಸರು ಈ ರೇಸಿನಲ್ಲಿರಲೇ ಇಲ್ಲ.

ಈ ಹಿಂದೆ ರವಿ ವಿಧಾನಸಭೆಗೆ ಸ್ಪರ್ಧಿಸಿದ್ದಾಗ ಆತನ ಪರವಾಗಿ ಲಕ್ಯಾ ಭಾಗದಲ್ಲಿ ರೇಖಾ ಹೆಣಗಾಡಿದ್ದರು. ರೇಖಾ ಈಗ ಪಕ್ಷದಲ್ಲಿ ವರ್ಚಸ್ಸು ಗಳಿಸಿಕೊಂಡಿದ್ದಾರೆ. ರಾಜ್ಯ ನಾಯಕರ ಸ್ನೇಹವಿದೆ. ಎಂಥವರ ಎದುರೂ ನಿಂತು ಮಾತನಾಡುವ ಚಾಣಾಕ್ಷತೆಯಿದೆ. ಈಕೆ ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದಿಂದ ಮುಂದೆ ಟಿಕೆಟ್ ಗಿಟ್ಟಿಸುವ ಪ್ರಯತ್ನಕ್ಕೆ ಕೈ ಹಾಕುವ ಮಾತುಗಳೂ ಕೇಳಿಬಂದಿವೆ. ಇದು ಒಂದಿಲ್ಲೊಂದು ದಿನ ತನಗೇ ಶಾಪವಾ... ಎಂಬುದು ರವಿಯನ್ನು ಕಾಡಿರಬೇಕು.

ಉಳಿದಂತೆ ಕವಿತಾ ಕೂಡ ಸಣ್ಣ ಮಟ್ಟದಲ್ಲಿ... ಪ್ರಕಾಶ್‌ನಂಥ ಘಟಾನುಘಟಿ ರಾಜಕಾರಣಿಯ ಪ... ಇವರನ್ನು ಅಧ್ಯಕ್ಷಗಾದಿಗೇರಿಸಿದರೆ ಮತ್ತೊಂದು ರಗ... ಮೈಮೇಲೆ ಎಳೆದುಕೊಂಡಂತಾಗುವ ಅಪಾಯ ... ಇದರಿಂದ ಹೊರಬರಲು ರವಿ ಜಾಣ ನರಿಯ ... ಹುಡುಕಿ ಪ್ರಫುಲ್ಲಾ ಮಂಜುನಾಥ್ ಆಯ್ಕೆಗೆ ... ಸಿದ್ಧಗೊಳಿಸಿದ. ಸದ್ಯ ಕಮಲದ ದಳಗಳು ಅರಳುವ ... ಅವನ್ನು ಚಿವುಟುವ ಪ್ರಯತ್ನದಲ್ಲಿ ರವಿ ಯಶಸ್ವಿಯಾ... ರೇಖಾ ಹುಲಿಯಪ್ಪಗೌಡ ಮತ್ತು ಕವಿತಾ ಬೆಳ್ಳಿ ... ಸದ್ಯದಮಟ್ಟಿಗೆ ತಣ್ಣಗಾಗಿದ್ದಾರೆ. ಆದರಿದು ... ಕದನವೊಂದರ ಮುನ್ಸೂಚನೆಯಂತೆಯೇ ಕಾಣಿಸು...

• ಅಜೀಜ್ ಕಿರುಗು...

ರವಿ ನೆರಳಲ್ಲಿ ಕಳಪೆ ತಿರುಳು!



ತನ್ನ ಸ್ಥಾನ ಭದ್ರಗೊಳಿಸಿಕೊಳ್ಳಲು ಏನು ಮಾಡಲೂ ತಯಾರಾಗಿರುವವನು ಸಿ.ಟಿ. ರವಿ. ಅದಕ್ಕೆ ಸಪೋರ್ಟಿಗೆಂಬಂತೆ ಸಾಕಷ್ಟು ಹಣವನ್ನೂ ಮಾಡಿಕೊಂಡಿದ್ದಾನೆ. ಈತ ಶಾಸಕನಾಗುವ ಮೊದಲಿದ್ದ ಆಸ್ತಿಗೂ ಇವತ್ತು ಗಳಿಸಿಕೊಂಡಿರುವ ಆಸ್ತಿಗೂ ಅಜಗಜಾಂತರ ವ್ಯತ್ಯಾಸವಿದೆ. ಜಿಲ್ಲೆಯ ಅಧಿಕಾರಿ ವರ್ಗವನ್ನು ಮತ್ತು ಗುತ್ತಿಗೆದಾರರನ್ನು ತಿಂದುಂಡು ಕೊಬ್ಬಲು ಬಿಟ್ಟಿರುವ ರವಿ ಅದನ್ನೇ ಕಾಸಿನ ಮೂಲವಾಗಿಸಿಕೊಂಡಿರುವುದು ಸುಳ್ಳಲ್ಲ. ಹೀಗೆ ರವಿಯ ನೆರಳಲ್ಲಿ ಅಧಿಕಾರಿಗಳು ಎಂತೆಂಥ ಭಾನಗಡಿ ಮಾಡುತ್ತಿದ್ದಾರೆಂಬುದಕ್ಕೆ ಚಿಕ್ಕಮಗಳೂರು ಕಾರಾಗೃಹದಲ್ಲಿ ನಡೆಯುತ್ತಿರುವ ಕುಡಿಯುವ ನೀರಿನ ಯೋಜನೆಯೆ ಸಾಕ್ಷಿ. ಅಖಂಡ ಹದಿನೈದು ... ರೂಪಾಯಿಯ ಈ ಕಾಮಗಾರಿಯ ಕೆಲಸ ನಡೆದಿದೆ. ಆದರೆ ಪ್ಲಾನಿಂಗ್ ಮಾಡಿಲ್ಲ! ಇದರ ಹಿಂದಿರುವ ... ಯಾರಿಗಾದರೂ ಅರ್ಥವಾಗುವಂಥಾದ್ದೇ.

ವಸ್ತಾರೆ ಬಳಿ 4.3 ಕಿಮೀ ಡಾಂಬರು ರಸ್ತೆ ಕಾಮಗಾರಿ ಒಂದು ಕೋಟಿ ಮೊತ್ತದಲ್ಲಿ ನಡೆದಿದೆ. ಇದರ ... ಹಿಡಿದ ಸುದರ್ಶನ್ ಸಿ.ಟಿ.ರವಿಯ ಖಾಸಾ ಭಾವ. ಚಿಲ್ಲರೆ ಕಾಮಗಾರಿಗಳನ್ನ ನಡೆಸುತ್ತಿದ್ದ ಇವನಿಗೆ ... ಭಾಮೈದನೆಂಬುದರ ಹೊರತಾಗಿ ಮತ್ಯಾವ ಯೋಗ್ಯತೆಯೂ ಇಲ್ಲ. ಇದರಿಂದಾಗಿಯೇ ಕಳಪೆತನಗಳು ಕಾಮಗಾರಿಯ... ವಿಜೃಂಭಿಸಿವೆ. ಸರಿಯಾದುದೊಂದು ತನಿಖೆ ನಡೆದರೆ ಚಿಕ್ಕಮಗಳೂರಿಗೆ ಚಿಕ್ಕಮಗಳೂರೇ ಬೆಚ್ಚಿಬೀಳುವಷ್ಟು ಹ... ಅದ್ವಾನಗಳು ಹೊರಬೀಳುತ್ತವೆ. ನೆನಪಿರಲಿ, ಇದೆಲ್ಲದರ ಮೇಲೆ ರವಿಯ ನೆರಳಿದೆ!

ಸುನೀತಾಳ ಪುರಾಣವೂ, ...ಲಿಂಗಸ್ವಾಮಿಯ ...ಸಲತ್ತೂ...

...ಎರಡನೆ ಬಾರಿಗೆ ಜಿಪಂಗೆ ಅಧ್ಯಕ್ಷೆಯಾಗಿರುವ ...ವೀರಪ್ಪಗೌಡರದ್ದೇ ಮತ್ತೊಂದು ಸ್ಟೋರಿ. ...ಯಾವತ್ತೂ ಒಂದು ಪಕ್ಷಕ್ಕೆ ನಿಷ್ಠಳಾಗಿದ್ದವಳಲ್ಲ. ...ವೈದ್ಯ ವೀರಪ್ಪಗೌಡರ ಹೆಂಡತಿ ಸುನೀತಮ್ಮ ...ಕಾಂಗ್ರೆಸ್‌ನಿಂದ ಜಿಪಂ ಸದಸ್ಯೆಯಾದರೂ ಆಗಿನ ...ನಾಯಕನಾಗಿದ್ದ ಸಿದ್ದರಾಮಯ್ಯರಿಗೆ ಯಾಮಾರಿಸಿ ...ಬೆಂಬಲದಿಂದ ಅಧ್ಯಕ್ಷೆ ಆಗಿಬಿಟ್ಟಿದ್ದಳು. ಬನ್ನೂರಿನ ...ಶಾಸಕ ಚಿಕ್ಕಮಾದನಾಯ್ಕರನ್ನೇ ತನ್ನ ರಾಜಕೀಯ ...ವರ್ ಮಾಡಿಕೊಂಡು ಅವರ ನೆರಳಲ್ಲೇ ರಾಜ... ...ಬೆಳೆದಳು. ಕೊನೆಗೆ ತನ್ನ ಗುರುವಿಗೇ ತಿರುಮಂತ್ರ... ...ಕ್ಕಮಾದುವನ್ನು ಮೂಲೆಗೆ ಸರಿಸಿ ಒಕ್ಕಲಿಗ ...ನಿಂದ ಬಿಜೆಪಿಯಿಂದ ಎಮ್ಮೆಲ್ಲೆಯೂ ಆಗಿ ...ಅಧಿಕಾರ ಸಿಕ್ಕನಂತರ ಮಿತಿಮೀರಿದ ಭ್ರಷ್ಟಾಚಾರ ...ಅದಕ್ಕಾಗಿಯೇ ಈಕೆಯ ವಿರುದ್ಧ ಸಿದ್ದು ಬೆಂಬಲಿಗ... ...ಡ ನಿಲುವಳಿಯನ್ನೂ ಮಂಡಿಸಿದ್ದರು.

...ತನ್ನ ಮೇಲೆ ಬಂದ ಆರೋಪವನ್ನ ಅಧಿಕಾರಿಗಳ ...ಏ ಎಕ್ಸಿಕ್ಯೂಟಿವ್ ಇಂಜಿನಿಯರ್ ಚಿಕ್ಕೀರಪ್ಪನನ್ನು ...ಲು ಹಿಂದೆ ಮುಂದೆ ನೋಡಲಿಲ್ಲ. ನಂತರ ...ಮಾಡಿಟ್ಟ ಈ ಹಣದಿಂದಲೇ ಬಿಜೆಪಿಯಿಂದ ...ಪಡೆದು ಬನ್ನೂರು ವಿಧಾನಸಭಾ ಕ್ಷೇತ್ರದಿಂದ ...ಯಾದಳು. ಬಿಜೆಪಿ ಎಂಎಲ್‌ಎಯಾಗಿದ್ದುಕೊಂಡು ...ರ ಕುಮಾರಸ್ವಾಮಿ ಜೊತೆ ಸಂಪರ್ಕ ಸಾಧಿಸಿ, ...ವಿರೋಧಿ ಚಟುವಟಿಕೆಯಲ್ಲಿ ತೊಡಗಿದ್ದಳು. ...-ಬಿಜೆಪಿ ಮೈತ್ರಿಕೂಟವಿದ್ದಾಗಲೇ ಈ ಬಿಜೆಪಿ ...ಎ ಜೆಡಿಎಸ್‌ನ ಶಾಸಕಿಯಂತೆ ಓಡಾಡುತ್ತಿದ್ದದ್ದು ...ಪಕ್ಷದವರಿಗೆ ನುಂಗಲಾರದ ತುತ್ತಾಗಿತ್ತು. ನಂತರ ...ಕ್ತು ಪತಿ ಡಾ.ವೀರಪ್ಪಗೌಡ ಅಧಿಕೃತವಾಗಿಯೇ ... ಸೇರಿದರು.

...ಬಾರಿ ಜೆಡಿಎಸ್‌ನಿಂದ ಜಿಪಂ ಅಧ್ಯಕ್ಷರಾಗಲು ...ಅರ್ಹರಿದ್ದರೂ, ಮಾಜಿ ಶಾಸಕಿ ಸುನೀತಮ್ಮನ ...ಜಿಪಂನ ಅಧ್ಯಕ್ಷಗಿರಿಗೆ ಏರಿಸಲು ಹಲವು ...ಿವೆ. ಅವುಗಳಲ್ಲಿ ಮುಖ್ಯವಾದದ್ದು ಸಾರಾ ...ಗೆ ಕೋಟಿ ರೂಪಾಯಿ ಕೊಡಲಾಗಿದೆ ಎಂಬ ...ನೀತಮ್ಮ ಅಧ್ಯಕ್ಷಗಿರಿಗೆ ಏರುವ ಹಪಾಹಪಿಯಲ್ಲಿ ...ಕ್ರಮಗಳನ್ನೂ ನಡೆಸಿದ್ದಾಳೆ. ಒಕ್ಕಲಿಗರು ಹಿಂದುಳಿದ ...ಕ್ಕೆ ಸೇರಬೇಕಾದರೆ 2 ಲಕ್ಷದ ಆದಾಯದ ...ದ್ದರೂ, ಸುನೀತಮ್ಮ ಸರ್ಕಾರಕ್ಕೆ ವಂಚಿಸಿ ತನ್ನ ...ಆದಾಯ ಕೇವಲ 2 ಲಕ್ಷ ಎಂದು ತಹಶೀಲ್ದಾರ್... ...ರಿಗೆ ಯಾಮಾರಿಸಿ ಆದಾಯ ಪ್ರಮಾಣಪತ್ರವನ್ನ ...ಅಧ್ಯಕ್ಷಗಿರಿಗೆ ಏರಿದ್ದಾಳೆ.




...ತಾ ಎಮ್ಮೆಲ್ಲೆಯಾದ ಮೇಲೆ ...ವ ಬಳಸಿ ಸ್ವಂತ ತಮ್ಮ ರವಿ ... ಮೂಲಕ ಮರಳುದಂಧೆಗೂ ...ಇದರಲ್ಲಿ ರವಿಪ್ರಕಾಶ್ ಮಾಡಿದ ...ಮರಳಿನಿಂದ ಹತ್ತಾರು ಕೋಟಿ ...ಶ್ರೀಮಂತಳಾಗಿದ್ದಾಳೆ. ಮಾದೇ... ...ಕುಂಡಿಯ ಬಳಿ ಗೆಸ್ಟ್‌ಹೌಸ್ ...ವೆಂದು ಪ್ರವಾಸೋದ್ಯಮ ...ಇಂದ ಸಹಾಯಧನ ಪಡೆದು ...ಮ್ಮ ಕಟ್ಟಿಸಿರುವ ಶಿವಶಕ್ತಿ ...ಮ ಭವನದಿಂದಲೇ ವಾರ್ಷಿಕ ...ಆದಾಯ ಬರುತ್ತದೆ. ಬನ್ನೂರಿನಲ್ಲಿ ಮತ್ತೊಂದು ...ಮ ಭವನ ತಲೆ ಎತ್ತುತ್ತಿದೆ. ಗಂಡನ ಹೆಸರಿನಲ್ಲಿ ...ನರ್ಸಿಂಗ್ ಹೋಂ ಚೆನ್ನಾಗಿಯೇ ನಡೆಯುತ್ತಿದೆ. ...ಎಮ್ಮೆಲ್ಲೆಗಳಿಗೆ ನೀಡುವ ಪೆನ್ಷನ್ ಒಂದು ವರ್ಷಕ್ಕೆ ...ವಾಗುತ್ತದೆ. ಈ ಜೋಡಿ ದಂಪತಿಗಳ ವಾರ್ಷಿಕ ...ಕೋಟಿಗಟ್ಟಲೆ ಇದೆ. ಇಂತಹದ್ದರಲ್ಲಿ ಸುನೀತಮ್ಮ ...ದ ವಾರ್ಷಿಕ ಆದಾಯ ಕೇವಲ 2 ಲಕ್ಷ ...ಳುತ್ತಿರುವುದು ಮಾತ್ರ ಅಪ್ಪಟ ಸುಳ್ಳು. ಇಷ್ಟೆಲ್ಲಾ ...ದ್ದರೂ ತಹಶೀಲ್ದಾರ್ ಶೈಲಜರವರು 2 ಲಕ್ಷದ ...ದೃಢೀಕರಣ ಪತ್ರ ನೀಡಿರುವುದಕ್ಕೆ ಉತ್ತರ ...ದೆ. ಇದನ್ನೇ ಕಾಂಗ್ರೆಸಿಗರು ರಂಪ ಎಬ್ಬಿಸಿದ್ದಾರೆ. ...ಳ ಆದಾಯದ ಮೂಲವನ್ನ ಕೆದಕುತ್ತಿದ್ದಾರೆ. ...ಬಿಜೆಪಿಯಿಂದ ಉಪಾಧ್ಯಕ್ಷನಾಗಿರುವ ಶಿವರಾಮು ...ಸಿದ್ದಲಿಂಗಮೂರ್ತಿಯ ಚೇಲಾ. ನಿಜ ...ನಡೆ ಶಿವರಾಮು ಹೆಸರಿಗೆ ಉಪಾಧ್ಯಕ್ಷನಾದರೂ ...ದ್ದಲಿಂಗಸ್ವಾಮಿಯ ಸಹೋದರ ಸಿದ್ದವೀರಪ್ಪನೇ ...ಇದು ಸಿದ್ದಲಿಂಗಸ್ವಾಮಿಗೆ ಅಗತ್ಯವೂ ...ಚುನಾವಣೆ ಪೂರ್ವದಲ್ಲಿ ಹರಿಸಿದ ಹಣದ ...ಕೊಟ್ಟಿದೆ ಎಂಬ ಭಾವನೆಯಿದೆ. ●


ಮೈಸೂರು ಜಿ.ಪಂ: ಬಿಜೆಪಿ-ಜೆಡಿಎಸ್ ಮೈತ್ರಿ ಕಳಚಿ ಬಿತ್ತು ಮೂರೂ ಪಕ್ಷಗಳ ಮುಖವಾಡ!



ಇವತ್ತು ರಾಜ್ಯ ರಾಜಕಾರಣದಲ್ಲಿ ಬಿಜೆಪಿಗೆ ಮುಖಾಮುಖಿ ಫೈಟ್ ಕೊಟ್ಟು ಎದುರಿಸುತ್ತಿರುವುದು ಪ್ರಮುಖ ಪ್ರತಿಪಕ್ಷ ಕಾಂಗ್ರೆಸ್ಸಲ್ಲ, ಬದಲಿಗೆ ಎಚ್.ಡಿ. ಕುಮಾರಸ್ವಾಮಿ ನೇತೃತ್ವದ ಜನತಾದಳ. ಯಡಿಯೂರಪ್ಪ ಮತ್ತು ದೇವೇಗೌಡರ ಕುಟುಂಬಗಳು ಒಬ್ಬರನ್ನೊಬ್ಬರು ಮುಗಿಸುವವರೆಗೂ ವಿರಮಿಸುವುದಿಲ್ಲ ಎಂಬಂತೆ ಬಾಣ/ಪ್ರತಿಬಾಣಗಳನ್ನು ಎಸೆಯುತ್ತಲೇ ಇದ್ದಾರೆ. ಇಷ್ಟಿದ್ದೂ ಮೈಸೂರು ಜಿಲ್ಲಾ ಪಂಚಾಯ್ತಿಯಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಇವೆರಡೂ ಪಕ್ಷಗಳು ಮೈತ್ರಿ ಮಾಡಿಕೊಂಡು, ಕಾಂಗ್ರೆಸ್ಸನ್ನು ಹೊರಗಿಟ್ಟವೆಯೆಂದರೆ ಆಶ್ಚರ್ಯವೆನಿಸಬಹುದೇನೋ. ಆದರೆ ಮೈಸೂರಿನ ಮಟ್ಟಿಗೆ ಇದರಲ್ಲಿ ಅಚ್ಚರಿಯಾಗುವಂಥದೇನೂ ಇಲ್ಲ. ಕುಮಾರಸ್ವಾಮಿ ರೆಸಾರ್ಟ್‌ಗಳಿಗೆ ಶಾಸಕರನ್ನು ಹೊತ್ತೊಯ್ದು ಬಿಜೆಪಿ ಸಖ್ಯದಲ್ಲಿ ಮುಖ್ಯಮಂತ್ರಿಯಾದಾಗಲೇ ಇಂತಹ ಅಚ್ಚರಿಗಳೆಲ್ಲ ಸತ್ತು ಹೋಗಿದ್ದವು!

ಜಿಲ್ಲಾ ಪಂಚಾಯತಿಯ 46 ಸ್ಥಾನಗಳಲ್ಲಿ ಕಾಂಗ್ರೆಸ್‌ಗೆ-21, ಜೆಡಿಎಸ್‌ಗೆ-16, ಬಿಜೆಪಿ-8 ಮತ್ತು ಪಕ್ಷೇತರ ಎಲ್.ಮಾದಪ್ಪನವರನ್ನ ಆಯ್ಕೆ ಮಾಡುವುದರ ಮೂಲಕ ಜನರು ಯಾವ ಪಕ್ಷಕ್ಕೂ ಬಹುಮತ ನೀಡಿರಲಿಲ್ಲ. ಮೈಸೂರು ಜಿಪಂ ಚುಕ್ಕಾಣಿ ಹಿಡಿಯಲು ಯಾವುದೇ ಪಕ್ಷ ಇನ್ನೊಂದರ ಜೊತೆ ಹೊಂದಾಣಿಕೆ ಮಾಡಿಕೊಳ್ಳಲೇ ಬೇಕಿತ್ತು. ಕಾಂಗ್ರೆಸ್ ಮತ್ತು ಜೆಡಿಎಸ್ ಹೊಂದಾಣಿಕೆ ಮಾಡಿಕೊಳ್ಳುವ ಸಾಧ್ಯತೆಗಳು ಹೆಚ್ಚಿದ್ದರೂ ಇಬ್ಬರಿಗೂ ತಮ್ಮ ಪಕ್ಷಗಳ ಸದಸ್ಯರು 'ಹಣಕ್ಕಾಗಿ ಆಪರೇಷನ್' ಆಗಿಬಿಡುತ್ತಾರೆಂಬ ಭಯ ಫಲಿತಾಂಶ ಬಂದಾಗಲೇ ಶುರುವಾಗಿತ್ತು. ಆದರೆ ಬಿಜೆಪಿಗೆ ಇಂತಹ ಭಯ ಇರಲಿಲ್ಲ. ಯಾಕೆಂದರೆ ಸದಸ್ಯರಾಗುವ ಮೊದಲೇ ತಮ್ಮನ್ನ ಸಿಎಂ ಯಡ್ಡಿಯ ಚೆಡ್ಡಿಯಂತಿರುವ ಸಿದ್ದಲಿಂಗಸ್ವಾಮಿಗೆ ಮಾರಿಕೊಂಡು ಮೂಗುದಾರ ಹಾಕಿಸಿಕೊಂಡು ಗೆದ್ದುಬಂದಿದ್ದರು.






ಶ್ರೀನಿವಾಸ್ ಪ್ರಸಾದ್





ವಿಶ್ವನಾಥ್

ಆದರೆ ಎಲ್ಲಾ ಕಡೆಯಂತೆ ಬಿಜೆಪಿ ಮೈಸೂರಿನಲ್ಲೂ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಮೀಸಲಾತಿ ನಿಗದಿ ಮಾಡುವಾಗ ತನ್ನದೇ ತಂತ್ರವನ್ನು ಹೆಣೆಯಿತು. ಅಧ್ಯಕ್ಷ ಸ್ಥಾನವನ್ನು ಬಿಸಿಎಂ-ಬಿ ಮಹಿಳೆಗೂ, ಉಪಾಧ್ಯಕ್ಷ ಸ್ಥಾನವನ್ನು ಪರಿಶಿಷ್ಟ ಜಾತಿಗೂ ಮೀಸಲಾಗುವಂತೆ ನೋಡಿಕೊಳ್ಳಲಾಯಿತು. 21 ಸ್ಥಾನ ಗೆದ್ದಿದ್ದ ಕಾಂಗ್ರೆಸ್‌ನ ಕಡೆ ಎರಡು ಸ್ಥಾನಕ್ಕೂ ಬೇಕಿದ್ದ ಅರ್ಹ ಅಭ್ಯರ್ಥಿಗಳು ಇದ್ದರೆ, ಜೆಡಿಎಸ್‌ನ ಬಳಿ ಉಪಾಧ್ಯಕ್ಷ ಸ್ಥಾನಕ್ಕೆ ಬೇಕಾದ ಅರ್ಹ ವ್ಯಕ್ತಿ ಇರಲಿಲ್ಲ.

ಕಳೆದ ಒಂದು ವರ್ಷದಿಂದ ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಗುದ್ದಾಟಕ್ಕೆ ಇದು ಇನ್ನೊಂದು ಕಾರಣವನ್ನು ಒದಗಿಸಿತು. ಸಿದ್ದರಾಮಯ್ಯ ಅವರನ್ನು ಕಾಂಗ್ರೆಸ್‌ಗೆ ತರುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಎಚ್.ವಿಶ್ವನಾಥ್ ಈಗ ಸಿದ್ದು ಯಾವಾಗ ಕಾಂಗ್ರೆಸ್ ಬಿಡುತ್ತಾರೆ ಎಂದು ಕಾಯುತ್ತಿದ್ದಾರೆ. ಅವರು ಮತ್ತು ಶ್ರೀನಿವಾಸ್ ಪ್ರಸಾದ್ ಸಾಧ್ಯವಾದಾಗಲೆಲ್ಲಾ 'ಸಿದ್ದು ಕಾಂಗ್ರೆಸ್‌ಗೆ ಅನಿವಾರ್ಯರಲ್ಲ' ಎಂಬುದನ್ನು ತೋರಿಸಲು ಪ್ರಯತ್ನ ಪಡುತ್ತಲೇ ಇದ್ದಾರೆ. ಸಿದ್ದುವನ್ನು ಕಾಂಗ್ರೆಸ್‌ಗೆ ಆಗ ಎಳೆದುತರಲು ಅವರಿಗಿದ್ದ ಕಾರಣ ಹೇಗಾದರೂ ಸರಿ ಜೆಡಿಎಸ್ ಅನ್ನು ಮುಗಿಸಬೇಕೆಂಬುದಾಗಿತ್ತು. ಸಿದ್ದು ಸಹಾ ಕಾಂಗ್ರೆಸ್‌ಗೆ ಬಂದ ಆರಂಭದಲ್ಲಿ ಜೆಡಿಎಸ್ ಜೊತೆಗಿನ ಮೈತ್ರಿ ಪ್ರಸ್ತಾಪಕ್ಕೆ ಅಡ್ಡಿ ಮಾಡುತ್ತಲೇ ಬಂದಿದ್ದರು. ಆದರೆ ತಾನು ಮುಖ್ಯಮಂತ್ರಿ ಆಗಬೇಕಾಗಿ ಬಂದರೆ, ಜೆಡಿಎಸ್‌ನ ಸಹಕಾರ ಅತ್ಯಗತ್ಯ ಎಂಬುದನ್ನು ಸಿದ್ದು ಮನಗಂಡಿದ್ದರಿಂದಲೋ ಅಥವಾ ಕಾಂಗ್ರೆಸ್‌ನ ಒಳಗೆ ತನ್ನ ಕಾಲೆಳೆಯಲೆಂದೇ ಹಲವರು ಯಾವಾಗಲೂ ಹತಾರಗಳನ್ನು ಸಿದ್ಧವಾಗಿಟ್ಟುಕೊಂಡಿದ್ದಾರೆ ಎಂಬ ಕಾರಣಕ್ಕೋ ಇತ್ತೀಚೆಗೆ ಸಿದ್ದು ಸಿಕಾಪಟ್ಟೆ ಸಾಫ್ಟ್ ಆಗಿಬಿಟ್ಟಿದ್ದಾರೆ.







ಸಿದ್ದರಾಮಯ್ಯ

ಈ ಕಾರಣಕ್ಕೆ ವಿಶ್ವನಾಥ್ ಮತ್ತು ಪ್ರಸಾದ್ ಈಗ ಸಿದ್ದು ವಿರುದ್ಧ ಸಿಟ್ಟುಗೊಂಡಿದ್ದಾರೆ. ಬೇರೆ ಬೇರೆ ರೀತಿಯಲ್ಲಿ ಕಾಣಿಸಿಕೊಳ್ಳುತ್ತಿರುವ ಈ ವೈಮನಸ್ಯ ಮೊನ್ನಿನ ಜಿ.ಪಂ ಮತ್ತು ತಾ.ಪಂ ಚುನಾವಣೆಯಲ್ಲಿ ತಾರಕಕ್ಕೆ ಹೋಯಿತು. ಶ್ರೀನಿವಾಸ್ ಪ್ರಸಾದ್ ಮತ್ತು ಸಿದ್ದರಾಮಯ್ಯ ಇಬ್ಬರೂ ಹಂಚಿಕೊಂಡಿರುವ ನಂಜನಗೂಡು ತಾಲ್ಲೂಕಿನಲ್ಲಿ ಬಿಜೆಪಿಯು ದೊಡ್ಡ ಬಹುಮತದೊಂದಿಗೆ ತಾಲೂಕು ಪಂಚಾಯ್ತಿ ಚುಕ್ಕಾಣಿ ಹಿಡಿಯಲು ಬೇಕಾದ ಸೀಟುಗಳನ್ನು ಗಳಿಸಿಕೊಂಡಿತು. ಸಿದ್ದರಾಮಯ್ಯರೇ ಎಲ್ಲಾ ಟಿಕೆಟ್‌ಗಳನ್ನು ಹಂಚಿದ್ದಾರೆ, ತನಗೆ ಬೆಲೆ ಕೊಟ್ಟಿಲ್ಲ ಎಂದು ಪ್ರಸಾದ್ ಪ್ರಚಾರಕ್ಕೆ ಹೋಗಲೇ ಇಲ್ಲ. ವಿಶ್ವನಾಥ್ ಕೂಡಾ ತನಗೆ ಬೇಕಾದ ಕಡೆ ಮಾತ್ರ ಓಡಾಡಿದರು.

ಚುನಾವಣೆ ಮುಗಿದು, ಫಲಿತಾಂಶಕ್ಕೆ ಕಾಯುವಾಗ ಸಿದ್ದರಾಮಯ್ಯ ಸುದ್ದಿಗಾರರೊಂದಿಗೆ ಮಾತನಾಡುತ್ತಾ 'ರಾಜ್ಯದಲ್ಲಿ ಹೆಚ್ಚಿನ ಕಡೆ ಕಾಂಗ್ರೆಸ್ಸೇ ಗೆಲ್ಲುತ್ತದೆ, ಆದರೆ ಮೈಸೂರು ಭಾಗದಲ್ಲಿ ನಿರೀಕ್ಷೆಯಷ್ಟು ಸೀಟುಗಳು ಬರುವುದಿಲ್ಲ' ಎಂದಿದ್ದರು. ವಾಸ್ತವದಲ್ಲಿ ಕಾಂಗ್ರೆಸ್ಸಿಗೆ ನಿರೀಕ್ಷೆಗೂ ಮೀರಿದ ಸೀಟುಗಳೇ ಬಂದವು. ನಂಜನಗೂಡಿನಲ್ಲಿ ಮಾತ್ರ ಬಿಜೆಪಿಯ ಸಿದ್ದಲಿಂಗಸ್ವಾಮಿ ಗೆದ್ದಿದ್ದ. ಇದಾದನಂತರ ಹೊಸ ಜಿಪಂ ತಾಪಂ ಸದಸ್ಯರುಗಳ ಸಭೆಯಲ್ಲಿ ವಿಶ್ವನಾಥ್ ಮತ್ತು ಪ್ರಸಾದ್‌ರ ಮುಂದೆಯೇ 'ಪಕ್ಷದೊಳಗೇ ಇದ್ದುಕೊಂಡು ತಾಯ್ಗಂಡ ಕೆಲಸ ಮಾಡುವವರು ಪಕ್ಷ ಬಿಟ್ಟು ಹೋಗಿ' ಎಂದು ಸಿದ್ದು ಸಿಟ್ಟಿನಿಂದ ಮಾತನಾಡಿದ್ದರು.

ಉಪಾಧ್ಯಕ್ಷ ಸ್ಥಾನಕ್ಕೆ ಬೇಕಾದ ಅರ್ಹರು ತಮ್ಮ ಪಕ್ಷದಲ್ಲಿಲ್ಲವಾದ್ದರಿಂದ ನಮಗೇ ಅಧ್ಯಕ್ಷ ಸ್ಥಾನ ಕೊಡಿ ಎಂದು ಜೆಡಿಎಸ್‌ನವರು ಸಹಜವಾಗಿಯೇ ಕೇಳಿದರು. ಇದರ ಬಗ್ಗೆ ಸಿದ್ದರಾಮಯ್ಯ ಮೊದಲೇ ರೇವಣ್ಣ-ಕುಮಾರಸ್ವಾಮಿಯ ಹತ್ತಿರ ಮಾತನಾಡಿ ಸೆಟ್ಲ್ ಮಾಡಿಕೊಂಡಿದ್ದರೂ, ಸಿದ್ದು ಮಾತನ್ನ ತಾವೇಕೆ ಕೇಳಬೇಕೆಂಬ ಮನಸ್ಥಿತಿ ವಿಶ್ವನಾಥ್ ಮತ್ತು ಪ್ರಸಾದ್‌ರದ್ದು.

ಜೆಡಿಎಸ್ ಜೊತೆ ಸಂಧಾನಕ್ಕೆ ಹೋದವರು ಸಾಲಿಗ್ರಾಮದಿಂದ ಗೆದ್ದಿದ್ದ ಕಾಂಗ್ರೆಸ್‌ನ ಸಾವಿತ್ರಮ್ಮ ಎಂಬುವವರನ್ನೂ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಜೆಡಿಎಸ್‌ನಿಂದ ಮೀಸಲು ಎಸ್ಸಿ ಪುರುಷ ಸದಸ್ಯ ಇಲ್ಲದಿರುವುದರಿಂದ ಅದಕ್ಕೆ ಗರ್ಗೇಶ್ವರಿ ಕ್ಷೇತ್ರದ ಕಾಂಗ್ರೆಸ್ ಮಹದೇವರಿಗೆ ಬಿಟ್ಟುಕೊಟ್ಟು ಕಾಂಗ್ರೆಸ್‌ಅನ್ನು ಬೆಂಬಲಿಸಿ ಎಂದು ಜೆಡಿಎಸ್‌ಅನ್ನು ಕೇಳಿಕೊಂಡಿದ್ದಾರೆ. ಸಾಲಿಗ್ರಾಮ ಹೇಳಿ ಕೇಳಿ ಜೆಡಿಎಸ್ ಶಾಸಕ ಸಾರಾ ಮಹೇಶ್‌ನ ಸ್ವಂತಗ್ರಾಮ.

ಕಾಂಗ್ರೆಸ್‌ನ ಈ ಪ್ರಸ್ತಾಪ ಕೇಳಿದ ಜೆಡಿಎಸ್ ಜಿಲ್ಲಾಧ್ಯಕ್ಷ ಚಿಕ್ಕಮಾದು, ಶಾಸಕ ಸಾರಾ ಮಹೇಶ್ ಮತ್ತು ಮಾಜಿ ಸಚಿವ ಎಂ.ಶಿವಣ್ಣರಿಗೆ ಸಹಜವಾಗಿಯೇ ಉರಿ ತರಿಸಿದೆ. ಈ ರೀತಿ ಕಾಂಗ್ರೆಸ್‌ಗೆ ಬೆಂಬಲ ಕೊಟ್ಟು ತಮ್ಮವರು ಕೈಕಟ್ಟಿ ಕೂರುವುದು ಸಾಧ್ಯವೇ ಇಲ್ಲ. ಜೊತೆಗೆ ಜೆಡಿಎಸ್‌ನ್ನು ಮತ್ತು ಸಾರಾ ಮಹೇಶ್ ಅವರನ್ನು ರಾಜಕೀಯವಾಗಿ ಮುಗಿಸಲು ಹೆಣೆದ ತಂತ್ರ ಇದು ಎಂದು ಅವರೆಲ್ಲ ಬಗೆದಿದ್ದಾರೆ. ಆದ್ದರಿಂದ ಇದು ಸಾಧ್ಯವಿಲ್ಲ ಎಂದು ಜೆಡಿಎಸ್‌ನವರು ಪಟ್ಟು ಹಿಡಿದಿದ್ದಾರೆ. ಆದರೆ 'ಹೇಗೂ ಜೆಡಿಎಸ್ ತಮ್ಮನ್ನು ಬಿಟ್ಟು ಹೋಗಲು ಸಾಧ್ಯವಿಲ್ಲ. ಒಂದು ವೇಳೆ ಹೋದರೆ ಅವರು 'ಜಾತ್ಯತೀತತೆಗೆ ಬದ್ಧವಾಗಿಲ್ಲ' ಎನ್ನಬಹುದು' ಎಂಬುದು ವಿಶ್ವನಾಥ್ ಯೋಜನೆ.

ಆದರೆ ಸಾರಾ ಮಹೇಶ್ ಇಂತಹ ವಿಚಾರಗಳಲ್ಲಿ ಯಾವ ಮಟ್ಟಕ್ಕೆ ಬೇಕಾದರೂ ಇಳಿಯಬಲ್ಲರಾದ್ದರಿಂದ ಆತ ನೇರವಾಗಿ ಸಚಿವ ರಾಮದಾಸ್ ಮತ್ತು ಯಡ್ಡಿಯ ಉಡದಾರವಾದ ಸಿದ್ದಲಿಂಗಸ್ವಾಮಿಯೊಂದಿಗೆ ಸಂಪರ್ಕ ಸಾಧಿಸಿದ್ದಾರೆ. ಉಪಾಧ್ಯಕ್ಷ ಸ್ಥಾನವನ್ನು ಸಿದ್ದಲಿಂಗಸ್ವಾಮಿಯ ಚೇಲಾ ಕಳಲೆ ಶಿವರಾಮ್‌ಗೆ ಬಿಟ್ಟುಕೊಟ್ಟು, ಅಧ್ಯಕ್ಷ ಸ್ಥಾನಕ್ಕೆ ಜೆಡಿಎಸ್‌ನ ಸುನಿತಾ ವೀರಪ್ಪಗೌಡರನ್ನು ಆಯ್ಕೆ ಮಾಡುವ ಸಾರಾ ಸೂತ್ರಕ್ಕೆ ಬಿಜೆಪಿಯ ನಾಯಕ ಮಣಿಗಳು ಮರುಮಾತಾಡದೆ ಒಪ್ಪಿಕೊಂಡಿದ್ದಾರೆ. ಈ ಸೂತ್ರಕ್ಕೆ ಎಚ್‌ಡಿಕೆ ಸಮ್ಮತಿ ಇಲ್ಲ ಎಂದು ಯಾರೂ ಭಾವಿಸುವಂತಿಲ್ಲ.

ಸಿದ್ದರಾಮಯ್ಯನವರಿಗೆ ಒಂದು ಕಡೆಯಿಂದ ಸಿದ್ದಲಿಂಗಸ್ವಾಮಿ ಇಕ್ಕುತ್ತಿದ್ದರೆ, ಇನ್ನೊಂದು ಕಡೆ ಸ್ವಂತ ಪಕ್ಷದಲ್ಲೇ ಕಾಲೆಳೆಯುತ್ತಿರುವವರು ಹೆಚ್ಚಾಗಿದ್ದಾರೆ. ಈ ಬಾರಿ ಸ್ವಂತ ಕ್ಷೇತ್ರ ವರುಣಾವನ್ನು ಬಿಟ್ಟು ಬೇರೆಡೆಗೆ ಹೋಗಬೇಕಾದ ಅನಿವಾರ್ಯತೆ ಸಿದ್ದುಗೆ ಬರಬಹುದು. ಅದಕ್ಕೆ ಜಿಲ್ಲಾ ಪಂಚಾಯ್ತಿ ಚುನಾವಣೆ ಒಂದು ದಿಕ್ಸೂಚಿ ಅಷ್ಟೇ. ತಮ್ಮ ಒಳಜಗಳಕ್ಕಾಗಿ ಬಿಜೆಪಿಗೆ ಅಧಿಕಾರ ಬಿಟ್ಟುಕೊಡಲು ಹೇಸದ ಕಾಂಗ್ರೆಸ್ ನಾಯಕರು, ಸ್ವಂತ ಅಧಿಕಾರಕ್ಕಾಗಿ ಸಲೀಸಾಗಿ ಬಿಜೆಪಿ ಜೊತೆ ಕೈಜೋಡಿಸಬಲ್ಲ ಜೆಡಿಎಸ್ ನಾಯಕರು ಇರುವತನಕ ಗಟಾರದ ಪಾರ್ಟಿ ಬಿಜೆಪಿಗೆ ಅಧಿಕಾರವೂ ಕಾಯಂ. ಈ ನೀಚ ರಾಜಕೀಯಕ್ಕೆ ಕೊನೆ ಎಂದು?

• ಲಕ್ಷ್ಮಣ್ ಚೀರನಹಳ್ಳಿ



ಪ್ರಕಾಶರ ಗೆಳೆಯ ಶಂಕರ್ ಮತ್ತು ಬಿ.ಚಂದ್ರೇಗೌಡ...

ಪ್ರಕಾಶ್‌ಗೆ ಅಂತಿಮ ನಮನ

ಯಾವ ದೃಷ್ಟಿಯಿಂದ ನೋಡಿದರೂ ಪ್ರಕಾಶರ ನಾಯಕರಾಗಿದ್ದ ಹೆಗಡೆ, ಪಟೇಲರು, ಬೊಮ್ಮಾಯಿ, ದೇವೇಗೌಡರಿಗಿಂತ ಪ್ರಕಾಶ್ ಸಾಂಸ್ಕೃತಿಕವಾಗಿ ದೊಡ್ಡ ನಾಯಕ. ರಾಜಕಾರಣಿಗಳ ಜೊತೆ ಕೆಲವು ಗಂಟೆಗಳಿರುವುದೂ ಕಷ್ಟ. ಆದರೆ ಪ್ರಕಾಶ್ ಜೊತೆ ದಿನಗಟ್ಟಲೆ ಇರಬಹುದಿತ್ತು. ಏಕೆಂದರೆ ಅವರಲ್ಲಿ ತಾಯಿಗುಣವಿತ್ತು.


ಎಂ.ಪಿ. ಪ್ರಕಾಶ್‌ರನ್ನು ಹೂವಿನಹಡಗಲಿಗೆ ತರುತ್ತಾರೆಂದು ಗೊತ್ತಾದಾಗ ಕಡಿದಾಳು ಶಾಮಣ್ಣ ಮತ್ತು ಶ್ರೀದೇವಕ್ಕ "ಹಡಗಲಿಗೆ ನಾವೂ ಬರುತ್ತೇವೆ, ಹೋಗಿಬರೋಣ" ಎಂದು ಫೋನ್ ಮಾಡಿದರು. ಎಂ.ಪಿ. ಪ್ರಕಾಶರ ಹಿತೈಷಿ ಮತ್ತು ಗೆಳೆಯರಾದ ಶಂಕರ್ ತಮ್ಮ ಕಾರಿಗೆ ಡ್ರೈವರ್ ಗೊತ್ತು ಮಾಡಿಕೊಂಡು ನಾವೆಲ್ಲ ಹಡಗಲಿ ಕಡೆ ಹೊರಟೆವು. ಪ್ರಯಾಣ ವೇಳೆಯಲ್ಲಿ ಶಾಮಣ್ಣನವರು ಪ್ರಕಾಶ್‌ರ ಗುಣಗಾನ ಮಾಡತೊಡಗಿದ್ದರು. ಪ್ರಕಾಶ್ ಮತ್ತು ಶಾಮಣ್ಣನವರಲ್ಲಿ ಕೆಲವು ಗುಣಗಳು ಸಾಮ್ಯತೆ ಪಡೆದಿವೆ. ಇಬ್ಬರೂ ಕೂಡ ಆಬಾಲವೃದ್ಧರಿಗೆಲ್ಲಾ ಸಮಾನ ಗೌರವ ಕೊಡುವವರು. ಎಂತಹ ಸಂದರ್ಭ ಬಂದರೂ ಸಿಟ್ಟಿಗೇಳುತ್ತಿರಲಿಲ್ಲ ಮತ್ತು ಸದಾ ಕ್ರಿಯಾಶೀಲರಾಗಿ ತಮ್ಮ ಸುತ್ತಲ ವಾತಾವರಣಕ್ಕೆ ಜೀವ ತುಂಬುವವರಾಗಿದ್ದರು. ಪ್ರಕಾಶ್ ಯಾರ್‍ಯಾರನ್ನು ತಮ್ಮ ನಾಯಕರೆಂದು ಪರಿಗಣಿಸಿದ್ದರೊ ಅವರನ್ನೇ ಶಾಮಣ್ಣನವರೂ ಕೂಡ ಹಿಂಬಾಲಿಸಿದ್ದರು. (ನಂಜುಂಡಸ್ವಾಮಿ ಹೊರತಾಗಿ). ಒಂದು ಸಣ್ಣ ವ್ಯತ್ಯಾಸವೆಂದರೆ ಶಾಮಣ್ಣನವರ ಹೆಗಲ ಮೇಲೆ ಹಸಿರು ಶಾಲಿದೆ. ಯಾರ ಭುಜದ ಮೇಲಾದರೂ ಹಸಿರು ಟವಲ್ ಕಂಡರೆ ಸಾಕು ಅವರ ಮುಖ ಸ್ವಜಾತಿ ಕಂಡ ಮಿಕದ ಮುಖದಂತೆ ಅರಳಿಬಿಡುತ್ತದೆ.

"ಹಡಗಲಿಯಲ್ಲಿ ಐದು ಜನ ಹಸಿರು ಟವಲ್‌ನೋರು ಸಿಕ್ಕಿದ್ರು ಸಾಕು. ಒಂದು ಪ್ರತಿಭಟನೆ ಮಾಡೇ ಮಾಡ್ತೀನಿ" ಎಂದರು ಶಾಮಣ್ಣ.

"ಯಾರ ವಿರುದ್ಧ ಮಾಡ್ತೀರಿ?" ಎಂದೆ. "ಆ ಜನಾರ್ದನ ರೆಡ್ಡಿ ಬಂದ್ರೆ ಮಾಡೇ ಮಾಡ್ತೀನಿ" ಎಂದು ಶಾಮಣ್ಣ ಶಪಥ ಮಾಡಿದರು.

ಶಾಮಣ್ಣನಂಥವರೇ ಸಿಟ್ಟಾಗಿದ್ದಾರೆಂದರೆ ಆ ರೆಡ್ಡಿ ಇನ್ನೆಂತ ಅನಾಗರಿಕನಾಗಿ ವರ್ತಿಸಿರಬಹುದು ಎನ್ನಿಸಿತು. ತಮ್ಮ ಜೀವಿತಾವಧಿಯಲ್ಲಿ ಯಾರ ಮನಸ್ಸನ್ನು ನೋಯಿಸದೆ, ಯಾರಿಗೂ ಕಟು ಮಾತನಾಡದೆ, ವಿರೋಧಿ ನಾಯಕರಾಗಿದ್ದಾಗಲೂ ಕೂಡ ತಮ್ಮ ಎದುರಾಳಿಗಳ ಬಗ್ಗೆ ಹಗುರವಾಗಿ ಮಾತನಾಡದ ಪ್ರಕಾಶರ ಅನಾರೋಗ್ಯವನ್ನು ಉಲ್ಲೇಖಿಸಿದ ರೆಡ್ಡಿ ಪ್ರಕಾಶರನ್ನು ಅಮಾನುಷವಾಗಿ ಅಣಕಿಸಿದ್ದ. ಅಂತವನಿಗೂ ಪ್ರಕಾಶ್ ಉತ್ತರ ಕೊಡುತ್ತ "ನೀನೂ ಕೂಡ ಇಲ್ಲಿ ಶಾಶ್ವತವಾಗಿರುವವನಲ್ಲ" ಎಂದು ಸಾತ್ವಿಕವಾಗಿ ನುಡಿದಿದ್ದರು. ಆ ಸಮಯದಲ್ಲಿ ಪ್ರಕಾಶರ ಕೆಲವು ಗೆಳೆಯರು ರೆಡ್ಡಿ ವಿರುದ್ಧ ಹಂದಿ ಮೆರವಣಿಗೆ ಮಾಡಲು ತಯಾರಾಗಿದ್ದರು. ಆದರೆ ಹಂದಿಗೂ ಅವಮಾನವಾಗುವುದರಿಂದ ದುಡ್ಡಿನ ಮದದ ರೆಡ್ಡಿಯನ್ನು ಕ್ಷಮಿಸಿ ಸುಮ್ಮನಾಗಿದ್ದರು. ವಾಸ್ತವವಾಗಿ ಪ್ರಕಾಶರ ಅಭಿಮಾನಿಗಳಲ್ಲೂ ಪ್ರತೀಕಾರದ ಮನಸ್ಸಿರಲಿಲ್ಲ.

ಶಾಮಣ್ಣನವರು ಹಳ್ಳಿ ಜನಗಳ ಕಕ್ಕಸ್ಸಿನ ವಿರುದ್ಧ ಹೋರಾಡುತ್ತಿದ್ದಾಗ ಅವರ ಹೋರಾಟಕ್ಕೊಂದು ಅಂತ್ಯ ಒದಗಿ ಬಂದಂತೆ ಪ್ರಕಾಶ್ ಗ್ರಾಮೀಣಾಭಿವೃದ್ಧಿ ಸಚಿವರಾದರು. ಕೂಡಲೇ ಶಾಮಣ್ಣ ವಿಧಾನಸೌಧಕ್ಕೆ ಓಡಿಹೋಗಿ ಪ್ರಕಾಶ್‌ರನ್ನು ಕಂಡು, ಹಳ್ಳಿಗರ ಶೌಚಾಲಯಕ್ಕೆ ಸಾಲ ಕೊಡಬೇಕೆಂದು ಕೇಳಿದರು. ಆಗ ಪ್ರಕಾಶ್ "ರೀಪೇಮೆಂಟ್ ಹೇಗೆ ಶಾಮಣ್ಣ?" ಎಂದರು. "ರೀಪೇಮೆಂಟ್ ಬಗ್ಗೆ ನೀವು ಯೋಚನೆ ಮಾಡಂಗೇಯಿಲ್ಲ, ಪ್ರತಿದಿನ ಯಾವ ಕಾರ್ಯ ನಿಂತರೂ ರೀಪೇಮೆಂಟ್ ನಿಲ್ಲಲ್ಲ, ನಾನಾಗ್ಲೆ ಮನುಷ್ಯನ ಅಮೇಧ್ಯಕ್ಕಿರೊ ಫಲ ವತ್ತತೆನ ಪರೀಕ್ಷೆ ಮಾಡಿಸಿದ್ದಿನಿ. ಒಂದು ಕ್ವಿಂಟಾಲ್ ಕಕ್ಕಸ್ಸು ಮೂರು ಕ್ವಿಂಟಾಲ್ ಸುಫಲಾ ಗೊಬ್ಬರಕ್ಕೆ ಸಮ" ಎಂದರು.



ಶ್ರೀದೇವಕ್ಕ ಮತ್ತು ಶಾಮಣ್ಣ....

ಇದನ್ನು ಕೇಳಿ ಗಹಗಹಿಸಿ ನಕ್ಕ ಪ್ರಕಾಶ್ ನಂತರ ಶಾಮಣ್ಣನ ಐಡಿಯಾವನ್ನು ಗಂಭೀರವಾಗಿ ಪರಿಗಣಿಸಿ, ಅವರ ನಿರ್ಮಲ ಗ್ರಾಮದ ಕನಸಿನೊಳಕ್ಕೆ ಶೌಚಾಲಯವನ್ನೂ ಸೇರಿಸಿದರು. ಮೊದಲ ಹಂತವಾಗಿ ಪಂಚಾಯ್ತಿ ಸದಸ್ಯರಾಗುವ ಮಂದಿ ಕಡ್ಡಾಯವಾಗಿ ಶೌಚಾಲಯ ಹೊಂದಿರಬೇಕೆಂಬ ನಿಯಮವನ್ನು ಜಾರಿಗೆ ತಂದರು. ಆದರೆ ಮನುಷ್ಯನ ಉಗಮದಿಂದ ಇಲ್ಲಿಯವರೆಗೆ ಬಹಿರ್ದೆಸೆ ಕೆಲಸವನ್ನು ಒಂದು ಸಮಸ್ಯೆಯಾಗಿ ಪರಿಗಣಿಸದ ಹಳ್ಳಿ ಜನರಿಗೆ ಕಕ್ಕಸು ರೂಮು ಕಟ್ಟಿಸಿ ಅದರೊಳಕ್ಕೆ ಅವರನ್ನು ನೂಕುವುದರಲ್ಲಿ ಇಬ್ಬರೂ ಸೋತರೆಂದೇ ಹೇಳಬೇಕು. ಆದರೆ ಹಳ್ಳಿಗಳಿಗೆ ಸೊಸೆಯರಾಗಿ ಬರುತ್ತಿರುವ ಹೊಸ ತಲೆಮಾರು ಶೌಚಾಲಯದ ಕಡೆ ಈಗ ಗಮನ ಹರಿಸುತ್ತಿದ್ದಾರೆ.

ಪ್ರಕಾಶ್ ಆಡಳಿತ ಪಕ್ಷದಲ್ಲಿದ್ದು ಆಡಳಿತ ನಡೆಸಿ, ನಂತರ ವಿರೋಧಿ ಸ್ಥಾನದಲ್ಲಿ ಕುಳಿತು ಮಾತನಾಡುವಾಗ "ಇದೇನು ನಾವು ಅಲ್ಲಿದ್ದಾಗ ಮಾತನಾಡುತ್ತಿದ್ದ ಮಾತನ್ನು ಈಗವರು ಮಾತನಾಡುತ್ತಿದ್ದಾರೆ. ಸ್ಥಾನಗಳು ಬದಲಾಗಿದೆಯಷ್ಟೇ, ಸಮಸ್ಯೆ ಹಾಗೇ ಇವೆ. ಹಾಗಿದ್ದರೆ ಇದೊಂದು ನಾಟಕ, ವೇಷ ಬದಲಿಸುವ ನಾಟಕ" ಎಂದು ಬೇಸರಗೊಂಡಿದ್ದೂ ಇದೆ. ಇಂತಹ ಬೇಸರವೂ ಕೂಡ ಅವರನ್ನು ಬಹಳ ಹೊತ್ತು ಕಾಡಿಸಿದ್ದಿಲ್ಲ, ಏಕೆಂದರೆ ಅವರಲ್ಲಿ ಪುಸ್ತಕ ಸಂಗ್ರಹವಿತ್ತು, ಹಿಂದೂಸ್ತಾನಿ ಸಂಗೀತಗಾರರ ಕ್ಯಾಸೆಟ್ಟುಗಳಿದ್ದವು, ನಾಟಕ ನೋಡಲು ಹೋಗುತ್ತಿದ್ದರು, ಸಿನಿಮಾಗಳಿಗೂ ನುಗ್ಗುತ್ತಿದ್ದರು.


ಸದನದಲ್ಲವರು ಮಾತನಾಡಲು ಎದ್ದರೆಂದರೆ ಶಾಸಕರು ಅಡ್ಡಿಪಡಿಸದೆ ಸುಮ್ಮನೆ ಕೇಳುತ್ತಿದ್ದರು. ಅಲ್ಲಿ ಜಗತ್ತಿನ ದಾರ್ಶನಿಕರ ನುಡಿಗಳ ಉಲ್ಲೇಖ ಬರುತ್ತಿತ್ತು, ಕವಿಗಳ ಪ್ರಖ್ಯಾತ ಸಾಲುಗಳಿರುತ್ತಿದ್ದವು ಮತ್ತು ತಾವು ಓದಿದ ಪುಸ್ತಕಗಳ ಸಾಲುಗಳನ್ನು ಉದ್ಧರಿಸುತ್ತಿದ್ದರು. ಅವು ಚರ್ಚೆಗೆ ಎತ್ತಿಕೊಂಡ ಸಮಸ್ಯೆಗೆ ಪೂರಕವಾಗಿರುತ್ತಿದ್ದವೇ ಹೊರತು ಯಾವ ಕಾರಣಕ್ಕೂ ಹೊರಗುಳಿಯುತ್ತಿರಲಿಲ್ಲ. ಅವರ ಕಾಲದಲ್ಲಿ ಅಕಾಡೆಮಿಗಳಿಗೆ ಅಪಾತ್ರರು ಆಯ್ಕೆಯಾಗುತ್ತಿದ್ದುದು ಕಡಿಮೆ.

ಪ್ರಕಾಶ್ ಬಳ್ಳಾರಿ ಜಿಲ್ಲೆಯ ನಾಯಕರಾಗಿರಲಿಲ್ಲ, ಈ ನಾಡಿನ ಮೂಲೆ ಮೂಲೆಯ ಕಲಾವಿದರು ಸಾಹಿತಿಗಳೆಲ್ಲಾ ಪರಿಚಯವಿದ್ದರು. ಜನಪದ ಕಲಾವಿದರ ದೈತ್ಯ ಪ್ರತಿಭೆಯನ್ನು ನೋಡಿ ಅಚ್ಚರಿಪಟ್ಟಿದ್ದ ಅವರು ಅವರಿಗೆಲ್ಲಾ ಸಾವಿರಾರು ರೂಪಾಯಿಗಳ ಪ್ರಶಸ್ತಿಗಳನ್ನು ಸುಮಾರು ಹತ್ತು ವರ್ಷ ಕೊಟ್ಟರೆ, ಅವರ ಇಳಿವಯಸ್ಸಿನ ಬದುಕು ಹಸನಾಗಿ ತಮ್ಮ ಪ್ರತಿಭೆಯನ್ನು ಬೇರೆಯವರಿಗೆ ಧಾರೆ ಎರೆಯುತ್ತಾರೆಂದು ಪ್ರತಿಪಾದಿಸಿದ್ದರು.

ಹಕ್ಕಬುಕ್ಕರು ಹಂಪೆ ಕಟ್ಟಿದಷ್ಟೇ ಶ್ರಮದಿಂದ ಕಂಬಾರರೊಡಗೂಡಿ ಹಂಪೆ ಯೂನಿವರ್ಸಿಟಿ ಕಟ್ಟಿದ್ದಲ್ಲದೆ, ಹಂಪಿ ಉತ್ಸವವನ್ನು ಪ್ರಾರಂಭಿಸಿದ್ದರು. ಇದು ಮೈಸೂರು ದಸರಾಕ್ಕಿಂತಲೂ ಭಿನ್ನವಾಗಿ ಆರಂಭಗೊಂಡು ದೇಶವಿದೇಶದಲ್ಲಿ ಖ್ಯಾತಿ ಗಳಿಸತೊಡಗಿತ್ತು, ಈಗದರ ಅವನತಿ ಆರಂಭವಾಗಿದೆ!

ಯಾವ ದೃಷ್ಟಿಯಿಂದ ನೋಡಿದರೂ ಪ್ರಕಾಶರ ನಾಯಕರಾಗಿದ್ದ ಹೆಗಡೆ, ಪಟೇಲರು, ಬೊಮ್ಮಾಯಿ, ದೇವೇಗೌಡರಿಗಿಂತ ಪ್ರಕಾಶ್ ಸಾಂಸ್ಕೃತಿಕವಾಗಿ ದೊಡ್ಡ ನಾಯಕ. ರಾಜಕಾರಣಿಗಳ ಜೊತೆ ಕೆಲವು ಗಂಟೆಗಳಿರುವುದೂ ಕಷ್ಟ. ಆದರೆ ಪ್ರಕಾಶ್ ಜೊತೆ ದಿನಗಟ್ಟಲೆ ಇರಬಹುದಿತ್ತು, ಏಕೆಂದರೆ ಅವರಲ್ಲಿ ತಾಯಿಗುಣವಿತ್ತು. ಈ ಕಾರಣಕ್ಕೆ ಅವರ ಎದುರು ಸ್ಪರ್ಧಿಸಿದ್ದ ಅಭ್ಯರ್ಥಿಗಳು ಬಂದು ಪ್ರಕಾಶರ ಕಾಲಿಗೆ ಬಿದ್ದು ಆಶೀರ್ವಾದ ಪಡೆದು ಹೋಗುತ್ತಿದ್ದರು. ಪ್ರಕಾಶ್ ಕೂಡ "ಒಳ್ಳೆದಾಗಲಪ್ಪ" ಎಂದು ಹೇಳಿ ಅವರನ್ನು ಕಳಿಸುತ್ತಿದ್ದರು. ಅವರು ಚುನಾವಣೆಯಲ್ಲಿ ಸೋತಾಗಲೆಲ್ಲಾ ಎಣಿಕೆ ಮುಗಿದು ಫಲಿತಾಂಶ ಪ್ರಕಟವಾದ ನಂತರ ಗೆದ್ದವರ ಕೈ ಕುಲುಕಿ ಬರುವವರಾಗಿದ್ದರು. ಅಂತಹ ಸಜ್ಜನ ವ್ಯಕ್ತಿಯನ್ನು ಕೆಲವು ಮಾರಿಕೊಂಡ ಮತದಾರರು ಸಿರಿಗರದ ಅಹಂಕಾರಿ ಎದುರು ಸೋಲಿಸಿಬಿಟ್ಟರು.

ಶಾಮಣ್ಣ ಮತ್ತು ನಾನು ಹೀಗೆ ಮಾತನಾಡುತ್ತಿರಬೇಕಾದರೆ ಶ್ರೀದೇವಕ್ಕನ ಕಣ್ಣಲ್ಲಿ ನೀರಾಡುತ್ತಿದ್ದವು. ಲೋಹಿಯಾ ಜೊತೆಯಲ್ಲಿ ಹೋರಾಟ ಮಾಡಿದ್ದ ಶಿವಮೊಗ್ಗದ ಪೊನ್ನಮ್ಮಾಳರಿಗೆ ಪ್ರಕಾಶ್ ಅವರ ತಮ್ಮ ತಂದೆ ಮತ್ತು ದೊಡ್ಡಪ್ಪನ ಹೆಸರಲ್ಲಿ ಕೊಡುವ ಪ್ರಶಸ್ತಿಯನ್ನು ಕೊಟ್ಟಿದ್ದರು. ಆ ಸಭೆ ಮತ್ತು ತೇಜಸ್ವಿಯವರ ನೆನಪಿನ ಸಭೆಯನ್ನು ಒಂದೇ ದಿನ ಏರ್ಪಡಿಸಿದ್ದಲ್ಲದೆ 'ಜುಗಾರಿ ಕ್ರಾಸ್' ಮತ್ತು 'ಕಟ್ಟೆಪುರಾಣ' ನಾಟಕವನ್ನು ಏರ್ಪಡಿಸಿದ್ದರು.



ಪ್ರಕಾಶ್ ಅಂತಿಮ [illegible]

ಅಲ್ಲಿ ಜಮಾಯಿಸಿದ್ದ ಭಾರಿ ಜನಸ್ತೋಮದ ನಡುವೆಯಿದ್ದ ಪ್ರಕಾಶ್, ಶಾಮಣ್ಣ ಮತ್ತು ಶ್ರೀದೇವಕ್ಕನವರನ್ನು ಕಂಡಕೂಡಲೇ ಓಡಿ ಬಂದು ಅವರಿಬ್ಬರನ್ನು ಸ್ವಾಗತಿಸಿದ್ದರು. ಅಲ್ಲದೆ ಪೊನ್ನಮ್ಮಾಳರ ಕಾಲಿಗೆರಗಿದ್ದರು. ನಂತರದ ಸಭೆಯಲ್ಲಿ ಶಾಮಣ್ಣನವರ ಪಕ್ಕದಲ್ಲಿ ಕೂತಾಗ ಒಂದು ವಿಚಿತ್ರ ಬಿಕ್ಕಟ್ಟು ಎದುರಾಗಿತ್ತು. ಆದಾಗತಾನೆ ಬಿಡುಗಡೆಯಾಗಿದ್ದ ಶಂಕಿತರ ನಕ್ಸಲರ ಪಟ್ಟಿಯಲ್ಲಿನ ಮೊದಲ ಹೆಸರೇ ಶಾಮಣ್ಣನವರದಾಗಿತ್ತು. ಹೀಗೆ ಗೃಹಮಂತ್ರಿ ಮತ್ತು ಉಗ್ರ ನಕ್ಸಲ್ ಜೊತೆಯಲ್ಲೇ ಕುಳಿತಿರುವುದು ನಮಗೆಲ್ಲಾ ತಮಾಷೆಯಾಗಿ ಕಂಡು ನಕ್ಕಿದ್ದೆವು. ನಂತರ ಸದರಿ ಪಟ್ಟಿಯನ್ನು ಪ್ರಕಾ... ನಿಷ್ಕ್ರಿಯಗೊಳಿಸಿ, ನಾಶಗೊಳಿಸಲು ಆಜ್ಞಾಪಿಸಿದ್ದರು. ಇದೆ... ನೆನಪಿಗೆ ಬಂದು ಶ್ರೀದೇವಕ್ಕನ ಕಣ್ಣಲ್ಲಿ ನೀರಾಡು... ಸಹಜವಾಗಿತ್ತು.

ನಾವು ಹೋಗುವಷ್ಟರಲ್ಲಿ ಪ್ರಕಾಶರನ್ನು ತಂ... ಸ್ಟೇಡಿಯಂನಲ್ಲಿ ಇರಿಸಿದ್ದರು. ಅಲ್ಲಿನ ಎಸ್ಪಿ ಇಡೀ ... ನಿದ್ದೆಗೆಟ್ಟು ಎಲ್ಲ ವ್ಯವಸ್ಥೆಯನ್ನು ಮಾಡಿದ್ದರು. ಬಿಜಾಪುರದ... ಎಸ್ಪಿ ರಾಜಪ್ಪನವರು ಬಂದಿದ್ದರು. ಈ ರಾಜಪ್ಪನವ... ಖುದ್ದು ಎಂ.ಪಿ. ಪ್ರಕಾಶರೇ ಬಳ್ಳಾರಿ ಜಿಲ್ಲೆ ಎಸ್ಪಿಯ... ಆರಿಸಿಕೊಂಡಿದ್ದರು. ರೆಡ್ಡಿ ಮತ್ತು ರಾಮುಲು ಮೇ... ಐದಾರು ಕೇಸು ಜಡಿದ ಕಾರಣಕ್ಕೆ ರಾಜಪ್ಪನವರು ತೊಂ... ಅನುಭವಿಸಿದ್ದರು. ಒಳ್ಳೆ ಅಭಿರುಚಿಯಿದ್ದ ಅಧಿಕಾರಿಗ... ಎಲ್ಲೇ ಹೋಗಲಿ ಪ್ರಕಾಶರ ಅಭಿಮಾನಿಗಳಾಗುಳಿಯುತ್ತಿದ್ದ... ದೂರದ ಬೆಳಗಾಂನಿಂದಲೂ ಹಲವು ಜನ ಬಂದಿದ್ದ... ಎಲ್ಲಕ್ಕಿಂತ ಧಾರವಾಡದಿಂದ ಬಂದಿದ್ದ ಬಸವಲಿಂಗ... ಹಿರೇಮಠ ಪ್ರಕಾಶರ ಮೇಲೆಯೇ ಪದಕಟ್ಟಿ ಹಾಡುತ್ತಿದ್ದ... ಜೀವಹಿಂಡುವಂತಿತ್ತು. ಹಡಗಲಿಯ ರಂಗಭೂ... ಕಲಾವಿದರಂತೂ ಅನಾಥರಂತೆ ನಿಂತು ಶೋಕಿಸುತ್ತಿದ್ದ... ಅವರು ಅಭಿನಯಿಸಿದ 'ಜತೆಗಿರುವನು ಚಂದಿರ' ನಾ... ಇಡೀ ನಾಡಿನ ಗಮನ ಸೆಳೆದಿತ್ತು. ಆ ನಾಟಕವ... ಪ್ರಕಾಶ್ ಪ್ರತಿ ಬಾರಿಯೂ ನೋಡುತ್ತಿದ್ದರು. ನಾಗಮ... ಲಕ್ಕೂ ಬಂದು ಹೊಸದಾಗಿ ನೋಡುವಷ್ಟೇ ಕುತೂಹಲದಿ... ನೋಡಿದ್ದರು. ನಮ್ಮ ಕಡೆ ರಾಜಕಾರಣಿಗಳು ನಾ... ನೋಡುವುದಿಲ್ಲ, ಅಂತಲ್ಲಿ ಗೃಹಮಂತ್ರಿ ಪೂರ್ಣ ನಾ... ನೋಡಿದ್ದು ಒಂದು ಸುದ್ದಿಯಾಗಿತ್ತು.

ಶಾಮಣ್ಣನವರು ಪ್ರಕಾಶರ ಅಂತಿಮ ಯಾತ್ರೆ... ಫೋಟೋ ತೆಗೆಯುವುದರ ಜೊತೆಗೆ ಎಲ್ಲೇ ಹ... ಟವಲ್ ಕಂಡರೂ ಹೋಗಿ ಮಾತನಾಡಿಸುತ್ತಿದ್ದರು. ಅ... ಮಾತನ್ನು ನಾನು ಸೂಕ್ಷ್ಮವಾಗಿ ಗಮನಿಸಬೇಕಿತ್ತು, ಏಕೆಂ... ಆ ವಿಷಯದಲ್ಲಿ ಶಾಮಣ್ಣ ತುಂಬ ಅಪಾಯಕಾರಿ. ... ಕೈಲಿದ್ದ ಛತ್ರಿಯನ್ನೇ ಹರಿದು ಬಾವುಟ ಮಾಡಿಕೊಂ... ಪ್ರತಿಭಟಿಸಿದ್ದ ಗಿರಾಕಿ ಅವರು. ಆದರೆ ಹಾಗೇನೂ ಆಗ... ರೆಡ್ಡಿಗಳು ಯಡ್ಡಿ ಮರೆಯಲ್ಲಿ ಬಂದುಹೋದರು. ಜ... ಎಷ್ಟೇ ಸಿಟ್ಟಿದ್ದರೂ ಪ್ರಕಾಶರಂತಹ ನಾಯಕನ ಅಂತಿ... ಗಳಿಗೆಯಲ್ಲಿ ತುಂಬ ಸಂಯಮದಿಂದಲೇ ವರ್ತಿಸಿದ... ಯಡಿಯೂರಪ್ಪನಿಗೆ ಹೋಗಲು ಜಾಗ ಬಿಡಿಸುವ ಸಲು... ಪೊಲೀಸನೊಬ್ಬ ಜನರಿಗೆ ಹೊಡೆದರೂ ಸಂಯ... ತೋರಿದರು.

ಸಮಾಧಿ ಕಾರ್ಯದ ಸ್ಥಳದಲ್ಲಿ ಕುಳಿತಿದ್ದಾಗ ನ... ಹಿಂದೆ ಕುಳಿತ ಹೆಣ್ಣುಮಗಳೊಬ್ಬಳು ತಮ್ಮ ಭಾಗದ ದೇ... ಸತ್ತಂತೆ ಮಾತನಾಡುತ್ತಿದ್ದಳು. ಆಕೆ ಪಂಚಾಯ್ತಿ ಮೆಂಬರ... "ಎಷ್ಟು ಓಟಲ್ಲಿ ಗೆದ್ದಿರಿ?" ಎಂದಾಗ ಮತ ಎಣಿಕೆ ಮ... ದವರು ನೀವು ಗೆದ್ರಿ ಅಂತ ಹೇಳಿ ಕಳಿಸಿದರು ಎ... ಹೇಳಿದಳು. ಈ ಕ್ಷಣಕ್ಕೂ ಆವಳಿಗೆ ಬಿದ್ದ ಓಟಿನ ಮಾ... ಗೊತ್ತಿರಲಿಲ್ಲ. ಆಕೆಯನ್ನು ನೋಡಿ ಥೇಟ್ ನ... ಜುಮ್ಮಿಯನ್ನು ಕಣ್ಣಾರೆ ಕಂಡಂತಾಯ್ತು. ಇಂತಹ ಮುಗ್ಧ... ಹಿಡಿದು ನೊಬೆಲ್ ಪ್ರಶಸ್ತಿ ವಿಜೇತ ನಯಿಪಾಲ್‌ವ... ವಿಶ್ವಾಸ ಗಳಿಸಿದ್ದ ಪ್ರಕಾಶ್ ಇನ್ನು ನೆನಪಷ್ಟೇ ಎಂಬು... ನೆನೆಸಿಕೊಂಡಾಗ ನಿಜಕ್ಕೂ ಅನಾಥಪ್ರಜ್ಞೆ ದುತ್ತನೆ ಎದುರಾ... ಏಕೆಂದರೆ ಪ್ರಕಾಶ್‌ರಂಥವರು ಅಧಿಕಾರದಲ್ಲಿರುವುದು ... ಮನೆಯಲ್ಲಿದ್ದರೂ ಸಾಕಿತ್ತು, ಅವರಿರುವ ತನಕ ನವ... ಜಗಲಿ ಮೇಲೆ ಕುಳಿತಿದ್ದ ನಿರಾಳತೆ ನನ್ನಂಥವರಿಗೆಲ್ಲಾ ...

ಅವರಾಡಿದ 'ರಾಜಸೂಯ ಯಾಗ'ಕ್ಕೆ ತಬಲ ನುಡಿ... ಭದ್ರಾವತಿ ಹನುಮಂತಪ್ಪ ತುಮಕೂರು ಬಳಿಯ ಹ... ತಬಲ ನುಡಿಸಲು ಯಾವುದೋ ಮೆಟಡೋರಿ... ಹೋಗುತ್ತಿದ್ದ. ದಾರಿ ತಪ್ಪಿದ್ದರಿಂದ ಮಾರ್ಗ ಮಧ್ಯ... ಇಳಿಸಿ ಹೋದರು. ಹನುಮ... ದಿಕ್ಕು ತಪ್ಪಿದಂತೆ ಹೋಗುತ್ತಿ... ಪೊಲೀಸರು ಆತನನ್ನು ಎ... ಕೊಂಡು ಹೋಗಿ ಇನ್ನೇನು ಲಾ... ಹಾಕಬೇಕು ಅಷ್ಟರಲ್ಲಿ ಹನುಮ... "ನಮ್ಮ ಸಾಹೇಬರಿಗೊಂದು ಫೋ... ಮಾಡಿ ಸಾರ್" ಎಂದ. "ಯ... ಸಾಹೇಬನೋ?" ಎಂದರು ಪೊ... ಸರು. "ಎಂ.ಪಿ. ಪ್ರಕಾಶ್ ನಾಟ... ನಾನು ತಬಲ ಬಡಿತಿನಿ ಕ... ಎಂದ ಹನುಮಂತಪ್ಪ. ಕೂಡ... ಪಿ.ಸಿ.ಗಳು "ಮೊದಲೇ ಹೇಳ... ದೇನ್ರಿ. ಊಟ ಮಾಡಿದ್ರಾ... ಎಂದು ಕೇಳುತ್ತ ಊಟ ... ಕೊಟ್ಟು ಹನುಮಂತಪ್ಪನನ್ನು ಕಳಿಸಿದರು. ಅಂದಿನಿ... ಹನುಮಂತಪ್ಪನಿಗೆ ಪ್ರಕಾಶ್ ಜೊತೆ ಒಂದು ಫೋಟೋ ತೆಗೆಸಿ ಇಟ್ಟುಕೊಳ್ಳಬೇಕೆಂಬ ಮಹತ್ವಾಕಾಂಕ್ಷೆ ಇತ್ತು. ಆಸೆ ಈಡೇರಲಿಲ್ಲ, ಪ್ರಕಾಶ್‌ರನ್ನು ಯಾವ್ಯಾವುದೋ ಸ್ಥಾನ... ನೋಡಬೇಕಿದ್ದ ನಮ್ಮ ಆಸೆಗಳೂ ಮಣ್ಣುಪಾಲಾದವು.

ಯಾವ ಕಡೆಯಿಂದ ನೋಡಿದರೂ ಪ್ರಕಾಶ್ ತ... ರಾಜಕಾರಣಿ ಇಲ್ಲೆಲ್ಲೂ ಕಾಣಿಸುತ್ತಿಲ್ಲ....

• ಬಿ. ಚಂದ್ರೇಗೌ

ಯಡ್ಡಿಯ ಬುಡಬುಡಿಕೆ!

ಮತ್ತು ಆತ್ಮಹತ್ಯೆಯ ದಾರಿ ಹಿಡಿದಿರುವ ಸಮಸ್ಯೆಗಳ ಬಗೆಗೆ ಬಿಜೆಪಿಯ ರಾಷ್ಟ್ರೀಯ 2000ದಲ್ಲಿ ವಾಜಪೇಯಿ ಸರ್ಕಾರದ ರಾಷ್ಟ್ರೀಯ ಯಲ್ಲಿ ತುಂಬಾ ಸ್ಪಷ್ಟವಾಗಿ ನಿರೂಪಿಸಲಾಗಿದೆ. ಕಾರ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕೃಷಿಯಲ್ಲಿ ಲ್ಲ. ಆದ್ದರಿಂದ ಅವರು ಕೃಷಿ ಬಿಟ್ಟು ಬೇಕು. ನಿಧಾನಕ್ಕೆ ಭಾರತದ ಕೃಷಿಯಲ್ಲಿ ಕಾಂಟ್ರಾಕ್ಟ್ ಗ್ ಮತ್ತು ಕಾರ್ಪೊರೇಟ್ ಗೆ ಅವಕಾಶ ಮಾಡಿಕೊಡ ಬಿಟಿ ತಂತ್ರಜ್ಞಾನದ ಮೂಲಕ ಹಸಿರುಕ್ರಾಂತಿಗೆ ಅವಕಾಶ ಡಬೇಕು. 2004ರಲ್ಲಿ ಕಾಂಗ್ರೆಸ್ ಯುಪಿಎ ಸರ್ಕಾರ ಸಹ ಇದನ್ನೇ ಸವೇ ಮುಂದುವರೆಸಿದೆ.

ಯೂರಪ್ಪನವರ ಸರ್ಕಾರವಂತೂ ಕೃಷಿ ಬಜೆಟ್ ಭರವಸೆಗಳನ್ನು ಕ್ಷಣದಲ್ಲೇ ಕೃಷಿಯಲ್ಲಿ ಮುಂದಿನ ರ್ಷಗಳಲ್ಲಿ 50,000 ಕೋಟಿ ಬಂಡವಾಳವನ್ನು ಹೂಡಲಾಗುವ ಅದಕ್ಕಾಗಿ ಬರುವ ಜೂನ್‌ನಲ್ಲಿ ಕದಲ್ಲಿನ ವಿಶ್ವ ಬಂಡವಾಳಿಗರ ವನ್ನು ನಡೆಸುವುದಾಗಿ ಘೋಷಿ ಗೂ ಆ ನಿಟ್ಟಿನಲ್ಲಿ ಈಗಾಗಲೇ ಅತಿ ಸಣ್ಣ ರೈತರಿಂದ ವಶಪಡಿಸಿಕೊಂಡಿರುವ ಕ್ಷ ಎಕರೆಯ ಜೊತೆಜೊತೆಗೆ ಇನ್ನೂ ಒಂದು ರೆ ವಶಪಡಿಸಿಕೊಳ್ಳು ವುದಾಗಿ ಘೋಷಿಸಿದೆ. ಅಭಿವೃದ್ಧಿಯ ಹೆಸರಿನಲ್ಲಿ ರಾಜ್ಯಾದ್ಯಂತ ರಸ್ತೆಗಳಿಗೆ, ಗಳಿಗೆ, ವಿಮಾನ ನಿಲ್ದಾಣಗಳಿಗೆ ರೈತರ ಗಳನ್ನು ದೊಡ್ಡ ಪ್ರಮಾಣದಲ್ಲಿ ಕೊಳ್ಳಲಾಗುತ್ತಿದೆ. ಮೂಲಭೂತ ಸೌಕರ್ಯಗಳ ಪಟ್ಟಿಯಲ್ಲಿ ಹೆಚ್ಚಾಗುತ್ತಿರುವುದು ಎಕ್ಸ್‌ಪ್ರೆಸ್ ವಿನಃ ಸರ್ವಋತು ಗ್ರಾಮೀಣ ರಸ್ತೆಗಳಲ್ಲ. ದೊಡ್ಡ ಮಾಲ್‌ಗಳೇ ವಿನಃ ರೈತರು ಬೆಳದ ಕೃಷಿ ನ್ನು ಸಂಗ್ರಹಿಸಿಡುವ ಕೋಲ್ಡ್ ಸ್ಟೋರೇಜ್‌ಗಳಲ್ಲ. ಕೃಷಿ ಉತ್ತೇಜನ ಇನ್ನಿತರ ಹೆಸರಲ್ಲಿ ರೈತಾಪಿಯ ಅಭಿವೃದ್ಧಿಗೆ ಸಹಾಯ ಮಾಡುತ್ತಿದ್ದೇವೆ ಎಂದು ಹೇಳಿದರೂ ಅದಕ್ಕೆ ಖರ್ಚಾಗುತ್ತಿರುವ ದುಪ್ಪಟ್ಟು ರೈತರಿಗೆ ಕೊಡುತ್ತಿದ್ದ ನೀರು, ವಿದ್ಯುತ್, ಸಾರಿಗೆ, ಸೇವೆಯ ಶುಲ್ಕವನ್ನು ಏರಿಸುವ ಮೂಲಕ ಲಾಗುತ್ತಿದೆ. ಆ ಮೂಲಕ ರೈತರನ್ನು ಸುಲಿಯ

ರೀತಿ ಇದೆ ಯಡ್ಡಿ ರೈತರಿಗೆ ಕಡಿಮೆ ಬಡ್ಡಿ ಸಾಲ ಕೊಡುವ ಮತ್ತು ಉಚಿತ ವಿದ್ಯುತ್ ಯೋಜನೆಗಳು. ಇವೆಲ್ಲಾ ಅದಕ್ಕೆ ಬೇಕಾದ ಬೆಂಬಲವನ್ನು ಬಜೆಟ್ಟಿನಲ್ಲಿ ಪಡೆಯದೇ ಹೇಗೆ ರವಸೆಗಳಾಗಿ ಮಾತ್ರ ಉಳಿದವು ಎಂಬುದನ್ನು ಡು ವರ್ಷಗಳಲ್ಲಿ ನೋಡಿದ್ದೇವೆ. ಗ್ರಾಮೀಣ ಅಭಿವೃದ್ಧಿಯಲ್ಲಿ ಕರ್ನಾಟಕದ ಸ್ಥಾನ ದರಿಂದಲೇ ಸತತ ಹತ್ತನೇ ವರ್ಷವೂ ಕರ್ನಾಟಕ ರೈತರ ಆತ್ಮಹತ್ಯೆಗಳಾಗುತ್ತಿರುವ ರಾಜ್ಯಗಳಲ್ಲಿ 2009ರಲ್ಲಿ ಶೇ.2ರ ಬಡ್ಡಿ ದರದ ಸಾಲದ ಘೋಷಣೆ ಮಾಡಿದ ನಂತರವೂ ಕರ್ನಾಟಕದಲ್ಲಿ ತಡೆಯಲಾಗದೆ 1500ಕ್ಕೂ ಹೆಚ್ಚು ರೈತರು ಪಡಿಕೊಂಡಿದ್ದಾರೆ. ಇನ್ನು ಬೆಳೆದ ಬೆಳೆಗೆ ವೈಜ್ಞಾನಿಕ ಕನಿಷ್ಠ ಬೆಂಬಲ ದರ ನಿಗದಿ ಮಾಡಬೇಕೆಂದು ಕೃಷಿ ಉತ್ಪನ್ನಗಳ ಬೆಳೆಗಾರರು ಇಡೀ ವರ್ಷ ದಲ್ಲೇ ಕಳೆದರು. ಬೇಡಿಕೆಯ ಅರ್ಧ ಭಾಗವೂ ರೈತರಿಗೆ ಚುನಾವಣಾ ಸಂದರ್ಭದಲ್ಲಿ ಬಟ್ಟರೆ ದ್ಯುತ್ತಿರಲಿ 12 ಗಂಟೆಗಳ ನಿರಂತರ ಕೊಳ್ಳುವ ಗಲಿಲ್ಲ.

ವೂ ಆಡಳಿತ ವೈಫಲ್ಯವೇನಲ್ಲ, ಬದಲಿಗೆ ಇವು ಧಿ ನೀತಿಗಳ ಪರಿಣಾಮ. ಹೀಗಾಗಿ ಬೇಕಿರು ಬಜೆಟ್ಟು ಅಥವಾ ಹೆಚ್ಚಿನ ಬಜೆಟ್ಟು ಮಾತ್ರವಲ್ಲ, ತವಾಗಿ ಬದಲಾಗಿರಬೇಕಿರುವುದು ರೈತ ನೀತಿಗಳು. ಆದರೆ ಈ ರೈತ ವಿರೋಧಿ ನೀತಿಗಳ ಗ್, ಬಿಜೆಪಿ, ಜನತಾ ದಳ ಎಲ್ಲಾ ಪಕ್ಷಗಳಿಗೂ ಏಕೆಂದರೆ ಈ ದೇಶದ ಅಭಿವೃದ್ಧಿಯ ಬಗ್ಗೆ ...

ಸರ್ಕಾರ ಕೊಡುತ್ತಿರುವ ಸೇವೆ–ಸರಕುಗಳನ್ನು ಉಚಿತವಾಗಿ ಯಲ್ಲದೆ ಲಾಭದ ಬೆಲೆಗೆ ಮಾರಬೇಕು, ಪ್ರತಿಯೊಂದು ಕ್ಷೇತ್ರಗಳಲ್ಲೂ ಖಾಸಗಿ ಬಂಡವಾಳದ ಪ್ರವೇಶಕ್ಕೆ ಅವಕಾಶ ಒದಗಿಸಬೇಕು, ಕೃಷಿ ಮಾರುಕಟ್ಟೆ, ನೀರಾವರಿ, ಬೀಜ ಮಾರುಕಟ್ಟೆ, ಗೊಬ್ಬರ, ಸಾಲ, ಬೆಳೆ ಖರೀದಿ ಎಲ್ಲದರಲ್ಲೂ ಕಾರ್ಪೊರೇಟ್ ಬಂಡವಾಳಿಗರಿಗೆ ಅವಕಾಶ ಮಾಡಿಕೊಡಬೇಕು ಮತ್ತು ಸರ್ಕಾರ ಆ ಕ್ಷೇತ್ರದಿಂದ ಹಿಂತೆಗೆಯಬೇಕು. ಇವು ಸಾರಾಂಶದಲ್ಲಿ ಆ ಶಾಸನದ ತಾತ್ಪರ್ಯ. ಹೀಗಾಗಿ ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ ಸರ್ಕಾರ ಕೊಡುತ್ತಿದ್ದ ಎಲ್ಲಾ ಸಬ್ಸಿಡಿಗಳನ್ನು ತಾನು ಹೇಗೆ ಹಂತಹಂತವಾಗಿ ಹಿಂತೆಗೆದುಕೊಳ್ಳುತ್ತೇನೆಂಬ ಬಗ್ಗೆ ಸರ್ಕಾರ ಪ್ರತಿ ಬಜೆಟ್ ಮಂಡನೆ ಮಾಡುವ ಮುನ್ನ ಒಂದು ಮಧ್ಯಂತರ ವಿತ್ತೀಯ ಕಾರ್ಯಯೋಜನೆಯನ್ನು (**Mid Term Fiscal Policy-MTFP**) ಸದನದಲ್ಲಿ ಮಂಡಿಸಬೇಕು. ಅದರಲ್ಲಿ ಏನಾದರೂ ಒಂದು ವರ್ಷದಲ್ಲಿ ಏರುಪೇರಾಗಿದ್ದರೆ ಹೇಗೆ ಅದನ್ನು ತಿದುಪ್ಪಡಿ ಮಾಡಿಕೊಳ್ಳುತ್ತೇನೆಂದೂ ಸೂಚಿಸಬೇಕು.

ಈ ಶಾಸನದ ಶರತ್ತುಗಳಿಗೆ ಅಧೀನವಾಗಿಯೇ 2002ರಿಂದಲೂ ಹಂತಹಂತವಾಗಿ ಸರ್ಕಾರ ಕೊಡುತ್ತಿದ್ದ ಎಲ್ಲಾ ಸರಕು ಮತ್ತು ಸೇವೆಗಳನ್ನು ಹಿಂತೆಗೆದುಕೊಳ್ಳಲಾಗುತ್ತಿದೆ. 2015ರ ವೇಳೆಗೆ ಈ ಬಗೆಯ ಸರಕಾರಿ ಸಹಾಯ ಶೂನ್ಯಕ್ಕೆ ತಲುಪಬೇಕೆಂಬುದು ವಿಶ್ವಬ್ಯಾಂಕಿನ ಕಡ್ಡಾಯ ಶರತ್ತು. ಹೀಗಾಗಿಯೇ 2009ರಲ್ಲಿ ಸರ್ಕಾರ ಬಜೆಟ್ ಅಧಿವೇಶನದಲ್ಲಿ ಮಂಡಿಸಿದ 2009–12ರವರೆಗಿನ **Mid Term Fiscal Policy-MTFP** ಯಲ್ಲಿ ಆಹಾರ, ಸಾರಿಗೆ, ವಸತಿ ಮತ್ತು ಸಣ್ಣ ಕೈಗಾರಿಕೆಗಳಿಗೆ ಕೊಡುತ್ತಿದ್ದ ಸಬ್ಸಿಡಿಯು 2007ರಲ್ಲಿ ಶೇ.1.37 ಇದ್ದದ್ದು 2011–12ರಲ್ಲಿ ಶೇ.0.63ಕ್ಕೂ ಮತ್ತು 2012–13ರಲ್ಲಿ ಶೇ. 0. 59ಕ್ಕೂ ಇಳಿಸುವ ಭರವಸೆಯನ್ನು ನೀಡಲಾಗಿದೆ. ಅದೇರೀತಿ ವಿದ್ಯುತ್ತಿಗೆ ನೀಡಲಾಗುತ್ತಿದ್ದ ಸಬ್ಸಿಡಿಯನ್ನು 2007ರಲ್ಲಿ ಶೇ.0.98 ಇದ್ದದ್ದು 2011–12ರಲ್ಲಿ ಶೇ.0.85ಕ್ಕೂ ಇಳಿಸಿ 2012–13ನೇ ಸಾಲಿಗೆ ಶೇ.0.80ಗೆ ಇಳಿಸುವ ಯೋಜನೆಯನ್ನು ಮಂಡಿಸಲಾಗಿದೆ.

ಇದೇ ನಿಜವಾದ ಬಜೆಟ್ಟು. ಸದನದಲ್ಲಿ ಮಂಡಿಸುವುದು ಬಜೆಟ್ಟಲ್ಲ. ಚುನಾವಣಾ ಅಗತ್ಯಗಳಿಗನುಸಾರವಾಗಿ ಘೋಷಿಸಲ್ಪಡುವ ಕರಪತ್ರಗಳು!!

ಹೀಗಾಗಿ ಕೃಷಿ ಬಜೆಟ್ಟು ಎನ್ನುವುದು ಹೆಚ್ಚೆಂದರೆ ಈವರೆಗೆ ಸರ್ಕಾರವು ವಿವಿಧ ಶೀರ್ಷಿಕೆಗಳಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಕೃಷಿಗೆ ಮತ್ತು ಗ್ರಾಮೀಣ ಅಭಿವೃದ್ಧಿಗೆ ಮಾಡುತ್ತಿದ್ದ ವೆಚ್ಚವನ್ನೆಲ್ಲಾ ಒಂದೆಡೆ ಕ್ರೋಢೀಕರಿಸಿ, ನಂಜುಂಡಸ್ವಾಮಿಯವರ ಹೆಸರಿನಲ್ಲಿ ಯಾವುದಾದರೂ ಯೋಜನೆಯನ್ನು ಪ್ರಕಟಿಸಿ, ಮಿಕ್ಕಿದ್ದೆಲ್ಲವನ್ನೂ ವಿಶ್ವಬ್ಯಾಂಕಿನ ಶರತ್ತಿಗನುಗುಣವಾಗಿ ಮತ್ತು ಈಗಾಗಲೇ ಚರ್ಚಿಸಿದಂತೆ ಅತ್ಯಂತ ರೈತ ವಿರೋಧಿ ಮತ್ತು ದೈತ್ಯ ಬಹುರಾಷ್ಟ್ರೀಯ ಕಂಪನಿಗಳ ಪರವಾದ **Karnataka Fiscal Responsibility Act** ಶಾಸನಕ್ಕೆ ಬದ್ಧವಾಗಿ ನಡೆದುಕೊಳ್ಳುವ ಮತ್ತೊಂದು ಗಿಮಿಕ್ ಆಗಿದೆ.

ಹೀಗೆ ಸಾರಾಂಶದಲ್ಲಿ ಯಡಿಯೂರಪ್ಪನವರು ಅತ್ಯಂತ ರೈತ ವಿರೋಧಿಯಾದ ಕಾರ್ಪೊರೇಟ್ ಪರ ಕೃಷಿ ನೀತಿಯನ್ನೇ ಮುಂದುವರೆಸಲು ಇಟ್ಟಿರುವ ಹೊಸ ಹೆಸರೇ 'ಕೃಷಿ ಬಜೆಟ್ಟು'.

ಖಂಡಿತವಾಗಿಯೂ ಯಡ್ಡಿಯ 'ಕೃಷಿ ಬಜೆಟ್'ನಲ್ಲಿ

ನೀಡಿದೆ ಮತ್ತು ಅದನ್ನು ನಮ್ಮ ಪಕ್ಷಗಳು ಚಾಚೂ ತಪ್ಪದೆ ಪಾಲಿಸುತ್ತಿವೆಯಲ್ಲದೆ ಅದನ್ನೇ ಶಾಸನ ಮಾಡಿವೆ.

2002ರಲ್ಲಿ ಕರ್ನಾಟಕ ರಾಜ್ಯ ಸರ್ಕಾರ **Karnataka Fiscal Responsibility Act** ಎಂಬ ಶಾಸನವನ್ನು ಜಾರಿಗೆ ತಂದಿದೆ. ಅದರ ಪ್ರಕಾರ ಸರ್ಕಾರ ತನ್ನ ಬಜೆಟ್ ಮಂಡಿಸುವಾಗ ಮತ್ತು ಆರ್ಥಿಕ ನೀತಿಗಳನ್ನು ಜಾರಿಗೆ ತರುವಾಗ ಸರ್ಕಾರದ ವೆಚ್ಚಗಳನ್ನು ಕಡಿಮೆ ಮಾಡಬೇಕು,



ಕೃಷಿಪರತೆಯ ಹೆಸರಿನಲ್ಲಿ ಒಂದಷ್ಟು ಹಣ ಮತ್ತು ಯೋಜನೆಗಳು ಘೋಷಿತವಾಗುತ್ತವೆ. ಆದರೆ ಅದರ ನಿಜವಾದ ಬಣ್ಣ ಅರ್ಥಮಾಡಿಕೊಳ್ಳಲು ರೈತರು ಮತ್ತು ಜನರು ಈ ಕೆಳಗಿನ ವಿಷಯಗಳನ್ನು ಪರಿಶೀಲಿಸಬೇಕು:


1. ಈ ಬಜೆಟ್ಟು ವಿಶ್ವ ಬ್ಯಾಂಕಿನ ಆದೇಶದಂತೆ **Karnataka Fiscal Responsibility Act** ಶಾಸನಕ್ಕೆ ತಕ್ಕಂತೆ ನಡೆದುಕೊಳ್ಳುವ ಬದ್ಧತೆಯನ್ನು ಘೋಷಿಸಿರುತ್ತದೆಯೋ ಇಲ್ಲವೋ? (ಇದನ್ನು ಪತ್ತೆಹಚ್ಚುವುದು ಕಷ್ಟವೇನಲ್ಲ, ಇದು ಬಜೆಟ್ ಭಾಷಣದ ಮೊದಲ ವಾಕ್ಯಗಳಲ್ಲೇ ಇರುತ್ತದೆ.)
2. ಕೃಷಿ ಬಜೆಟ್ ಎಂಬ ಶೀರ್ಷಿಕೆಯಲ್ಲಿ ಹೆಚ್ಚುವರಿ ಹಣ ಘೋಷಣೆ ಮಾಡಿದ್ದರೆ ಅಥವಾ ಒಟ್ಟಾರೆ ಬಜೆಟ್ ಗಾತ್ರ ಒಂದು ಲಕ್ಷ ಕೋಟಿಯಾಗಿದ್ದರೆ ಹೆಚ್ಚುವರಿ ಹಣ ಸಂಪನ್ಮೂಲ ಸಂಗ್ರಹವಾಗುವ ಬಗೆ ಹೇಗೆ? ಅದು ಶ್ರೀಮಂತರ ಮೇಲೆ ಹೆಚ್ಚಿಗೆ ತೆರಿಗೆ ಹಾಕುವುದರಿಂದ ಸಂಗ್ರಹಿಸಲಾಗುತ್ತದೆಯೋ ಅಥವಾ ರೈತಾಪಿ ಮತ್ತು ಸಾಮಾನ್ಯ ಜನರ ಮೇಲೆಯೇ ಹೆಚ್ಚಿನ ತೆರಿಗೆ ಹಾಕಿ ಸಂಗ್ರಹಿಸಲಾಗುತ್ತದೆಯೋ?
3. ಎಲ್ಲಕ್ಕಿಂತ ಹೆಚ್ಚಾಗಿ ರೈತಪರ ಎಂದು ಸರ್ಕಾರ ಘೋಷಿಸುವ ಯೋಜನೆಗಳಿಗೆ ಸೂಕ್ತ ಬಜೆಟ್ ಬೆಂಬಲವಿದೆಯೋ ಅಥವಾ ಅದು ಕೇವಲ ಹಣಕಾಸು ಬೆಂಬಲವಿಲ್ಲದ ಘೋಷಣೆಯೋ?
4. ಕೃಷಿಗೆಂದು ಎತ್ತಿಡಲಾಗಿರುವ ಮೊತ್ತವು ಹೋದ ವರ್ಷಕ್ಕಿಂತ ಎಷ್ಟು ಜಾಸ್ತಿ?
5. ಕೃಷಿಗೆ ಜಾಸ್ತಿ ಹಣ ನೀಡಿದ ಮಾತ್ರಕ್ಕೆ ಅದು ರೈತಪರವಾಗುವುದಿಲ್ಲ, ಹೆಚ್ಚುವರಿ ಯಾವ ಬಾಬತ್ತಿಗೆ ಎಂಬುದು ಮುಖ್ಯ. ಉದಾಹರಣೆಗೆ ಕೃಷಿ ಸಲಕರಣೆಗಳನ್ನು ಕೊಳ್ಳಲು ನೀಡಲಾಗುವ ಸಬ್ಸಿಡಿ ಪ್ರಧಾನವಾಗಿ ಟ್ರಾಕ್ಟರ್ ಕೊಳ್ಳಲು ಹೋದರೆ ಅದು ಯಾವ ರೈತನನ್ನು ಮತ್ತು ಯಾವ ಬಗೆಯ ಕೃಷಿಯನ್ನು ಬೆಂಬಲಿಸುತ್ತದೆ ಎಂಬುದನ್ನು ಪರಿಶೀಲಿಸಬೇಕು.
6. ರೈತರಿಗೆ ವಿಮೆ, ಪಿಂಚಣಿ, ನಿರ್ದಿಷ್ಟ ಆದಾಯ ಖಾತರಿ, ಹಿಡುವಳಿ ಆಧಾರಿತ, ಬೆಳೆ ಆಧಾರಿತ, ಕಡ್ಡಾಯ ಕನಿಷ್ಠ ಆದಾಯದ ಖಾತರಿ–ಇವೇ ಇನ್ನಿತರ ವಿಷಯಗಳನ್ನು ಖ್ಯಾತ ರೈತಪರ ಅರ್ಥಶಾಸ್ತ್ರಜ್ಞ ದೇವೇಂದರ್ ಶರ್ಮಾರವರು ಬಿಜೆಪಿ–ಜೆಡಿಎಸ್ ಆಡಳಿತವಿದ್ದಾಗಲೂ ಸರ್ಕಾರಕ್ಕೆ ಸಲಹೆ ನೀಡಿದ್ದರು. ಸರ್ಕಾರ ಒಪ್ಪಿಕೊಂಡಿದ್ದಕ್ಕೆ ಅವರಿಗೆ ಸಂತೋಷವೂ ಆಗಿತ್ತು, ಆದರೆ ಅದು ಜಾರಿಗೆ ಬರಲಿಲ್ಲ, ಏಕೆಂದರೆ ಅದನ್ನು ಜಾರಿಗೆ ತರಲು ಬೇಕಾದ ಸಂಪನ್ಮೂಲ ಸರ್ಕಾರದ ಬಳಿ ಇರಲಿಲ್ಲ, ಸಂಪನ್ಮೂಲ ಇದ್ದವರಿಂದ ವಸೂಲಿ ಮಾಡುವ ರಾಜಕೀಯ ಬಿಜೆಪಿಯದ್ದೂ ಆಗಿರಲಿಲ್ಲ, ಜೆಡಿಎಸ್‌ದೂ ಆಗಿರಲಿಲ್ಲ, ಈಗಲೂ ಅಷ್ಟೆ. ಸರ್ಕಾರ ಶರ್ಮಾರವರ ಸಲಹೆಯನ್ನು ಮನ್ನಿಸಿ, ಬಿಜೆಪಿ ಸರ್ಕಾರ ನಂಜುಂಡಸ್ವಾಮಿಯವರ ಹೆಸರಿನಲ್ಲಿ ಯೋಜನೆಗಳನ್ನು ಘೋಷಿಸಬಹುದು. ಆದರೆ ಅದಕ್ಕೆ ಬೇಕಾದ ಹಣವನ್ನು ಸರ್ಕಾರ ಎಲ್ಲಿಂದ ಮತ್ತು ಹೇಗೆ ಒದಗಿಸಿದೆ ಎಂಬುದು ಸ್ಪಷ್ಟವಾಗದಿದ್ದರೆ ಅದು ಕೇವಲ ಪೊಳ್ಳು ಭರವಸೆ ಆಗಿರುತ್ತದೆ.
7. ಘೋಷಿತವಾಗುವ ಕೃಷಿ ಯೋಜನೆಗಳಲ್ಲಿ ಸಾಲ, ಹಿಡುವಳಿ, ನೀರಾವರಿ, ಉತ್ಪನ್ನ ಮಾರಾಟ ವ್ಯವಸ್ಥೆ ಬೀಜ ಮಾರುಕಟ್ಟೆ ಇವುಗಳಲ್ಲಿ ಸೂಕ್ಷ್ಮವಾಗಿ ಸರ್ಕಾರ ತಾನು ವಹಿಸಿಕೊಳ್ಳುವ ಯೋಜನೆಯೆಷ್ಟು? ಮತ್ತು ಸರ್ಕಾರಿ–ಖಾಸಗಿ ಪಾಲುದಾರಿಕೆಯ ಹೆಸರಿನಲ್ಲಿ ಲಾಭಕೋರ ಖಾಸಗಿ ಕೃಷಿ ದೈತ್ಯ ಕಂಪನಿಗಳಿಗೆ ವಹಿಸಿ ಕೊಡುವ ಯೋಜನೆಗಳೆಷ್ಟು?
8. ಒಟ್ಟಾರೆಯಾಗಿ ರಾಜ್ಯದ ಆರ್ಥಿಕತೆಯಲ್ಲಿ ನವ ಆರ್ಥಿಕ ನೀತಿ ಪ್ರಣೀತ ಬಹುರಾಷ್ಟ್ರೀಯ ಕಂಪನಿಗಳ ಪರ ಒತ್ತೆಷ್ಟು?

ಇವುಗಳನ್ನು ಕೂಲಂಕಷವಾಗಿ ಪರಿಶೀಲಿಸದೆ ಯಾವುದೇ ತೀರ್ಮಾನಕ್ಕೆ ಬರಬಾರದೆಂದು ರೈತ ಸಂಘದ ಸಂಗಾತಿಗಳಲ್ಲಿ ಈ ಲೇಖಕ ನಮ್ರ ಮನವಿ ಮಾಡಿಕೊಳ್ಳಲು ಬಯಸುತ್ತಾನೆ!

ಏಕೆಂದರೆ ಯಡಿಯೂರಪ್ಪನವರ ಮತ್ತು ಬಿಜೆಪಿಯ ಕೃಷಿ ನೀತಿಗಳೆಲ್ಲಾ ರೈತ ವಿರೋಧಿಯೇ ಆಗಿರುವಾಗ, ವಿಶ್ವಬ್ಯಾಂಕಿನ ಆದೇಶದಂತೆ ನಡೆಯುತ್ತಿರುವಾಗ ಕೃಷಿ ಬಜೆಟ್ಟು ಮಾತ್ರ ರೈತ ಪರವಾಗಿರಲು ಹೇಗೆ ಸಾಧ್ಯ? ರೈತ ಸಂಘಕ್ಕೆ ಈ ಪ್ರಶ್ನೆ ಏಕೆ ಮೂಡಲಿಲ್ಲ? ಅದೂ ನಂಜುಂಡಸ್ವಾಮಿಯವರ ಜನ್ಮದಿನದಂದು ರೈತೋತ್ಸವ ಮಾಡುತ್ತಿದ್ದಾಗ !!!???

▸▸ ಕಾರ್ಟೂನ್ ಕಾರ್ನರ್






ಬೋನಿನಲ್ಲಿ ತರಕಾರಿಗಳ ಜೊತೆಗೆ ಬಾಳೆಗೊನೆ ಇಟ್ಟು ಕಾದರು. ಸಂಜೆ ಹೊತ್ತಿಗೆ ಕೆಲವು ಮಂಗಗಳು ಕೆಳಗೆ ಬಂದು ಬೋನಿನಿಂದ ಹೊರಬಿದ್ದಿದ್ದ ತರಕಾರಿಯನ್ನು ಎತ್ತಿಕೊಂಡವು. ಮಠದೊಳಗೆ 'ತೀರ್ಥ ಪ್ರಸಾದ' ಏನೂ ಇಲ್ಲದೆ ಸಿದ್ದನಿಗೆ ಬೋರ್ ಆಗಿದ್ದರಿಂದ ಗೋವಿಂದನ ಕೈಲಿ ಸನ್ನೆ ತಂತಿ ಕೊಟ್ಟು "ಆಮೇಲೆ ಬರ್ತೀನಿ" ಅಂತ ಹೋದ. ಅದೆಲ್ಲೋ ಹೋಗಿ ಎರಡು ಕ್ವಾಟ್ರುಗಳನ್ನು ಹಾಕಿದ ಸಿದ್ದ ವಾಪಸ್ಸು ಬರಲೇ ಇಲ್ಲ.

ಮಂಗನ ಬ್ಯಾಟೆ

ಜಗದ್ಗುರುಗಳಿಗೆ ಸರ್ಕಾರ ಇಷ್ಟೆಲ್ಲ ಹೆದರುತ್ತದೆ ಎಂದು ಅಲ್ಲಿಯತನಕ ಸಿದ್ದನಿಗೆ ಗೊತ್ತಿರಲಿಲ್ಲ. ಪ್ಯಾಟೆ ತುಂಬಾ ಮಂಗಗಳು ಅದೆಷ್ಟೊ ಜನರಿಗೆ ಅನಾಹುತ ಮಾಡಿದರೂ ಯಾರೂ ಕ್ಯಾರೆ ಅಂದಿರಲಿಲ್ಲ. ಆದರೆ ಮಂಗಗಳು ಗುರುಗಳ ಮೇಲೇ ಹಾರಿದವು ಎಂದಮಾತ್ರಕ್ಕೆ, ಸರ್ಕಾರ, ಇಷ್ಟೆಲ್ಲ ಅಧಿಕಾರಿಗಳು ಸೇರಿದ್ದು ಸಿದ್ದನಲ್ಲಿ ಸೋಜಿಗ ಉಂಟುಮಾಡಿತ್ತು. ಆದರೂ ಮಂಗಗಳ ದೆಸೆಯಿಂದ ತನಗೆ ಒಲಿದ ಭಾಗ್ಯದಿಂದ ಆತ ಒಳಗೊಳಗೇ ಸಂತೋಷಗೊಂಡಿದ್ದ.

ಮಾತಿಗೆ ಎದ್ದುನಿಂತ ಸಿದ್ದ "ನಾ ಹೇಳೂದೂ ಎಂತದ್ದೂ ಇಲ್ಲ. ನಮ್ಮ ವಡೇರು ಅದಾರೆ. ಅವರೇ ಎಲ್ಲ ಹೇಳ್ತಾರೆ" ಅಂದ. ಆಗ ವಡೇರು "ಮಾತಾಡಿ, ಮಾತಾಡಿ. ನಿಮಗೆ ಏನು ಹೇಳಬೇಕೂ ಅದನ್ನೆಲ್ಲ ಹೇಳಿ" ಎಂದು ಮೊದಲ ಬಾರಿಗೆ ಸಿದ್ದನಿಗೆ ಮರ್ಯಾದೆ ಕೊಟ್ಟು ಹೇಳಿದರು.



• ಕಲ್ಕುಳಿ ವಿಠ್ಠಲ ಹೆಗ್ಡೆ


ಆಗ ಆ ಚೇಂಬರ್‌ನ ಮೂಲೆಯಲ್ಲಿ ನಿಂತಿದ್ದ ಫಾರೆಸ್ಟ್‌ಗಾರ್ಡ್ ಸಿದ್ದನ ಕಣ್ಣಿಗೆ ಬಿದ್ದ. ಅವನನ್ನು ಉದ್ದೇಶಿಸಿ "ಮಂಗನ್ನ ಬ್ಯಾಟೆ ಮಾಡಬ್ಯಾಡಿ ಅಂತ ನಮಗೆಲ್ಲ ತಾಕೀತು ಮಾಡಿದ್ರಿ. ಕಾಡಿನಲ್ಲಿದ್ದ ಮಂಗಗಳನ್ನು ತಂದು ಪ್ಯಾಟೇಲಿ ಬಿಟ್ರಿ. ಪ್ಯಾಟೆ ಮನುಷ್ಯರು ಮಂಗಗಳಿಗೆ ತಾವು ತಿನ್ನೋದನ್ನು ಕೊಟ್ರು. ಮನುಷ್ಯರ ಬುದ್ಧಿಯನ್ನು ಮಂಗಗಳಿಗೆ ಕಲ್ಸಿದ್ರು. ಅದ್ಕೆ ಅವು ಇಷ್ಟೆಲ್ಲ ಹೆಚ್ಚುಗೊಂಡವೆ. ಮಂಗಗಳನ್ನು ಮಠಕ್ಕೂ ಸೇರಿಸಿದ್ರಿ. ಮಠಕ್ಕೆ ಸೇರಿದ ಮ್ಯಾಲೆ ಮಂಗಗಳು ಕೊಬ್ಬಿ ಹೋಗ್ಯವೆ. ನಾನು ಮತ್ತು ಗೋವಿಂದಯ್ಯ ಒಂದು ಪ್ಲಾನು ಮಾಡೀವಿ. ಮಂಗನ್ನ ಬೋನಿಗೆ ತುಂಬೋದು ಸುಲಭದ ಕೆಲ್ಸಲ್ಲ. ನಾನು ಸಾಧನೆ ಮಾಡ್ತೀನಿ.ಮಂಗಗಳು ಸ್ವಲ್ಪ ಸಿಗ್ತಾವ್ರೋ, ಪೂರ್ತಿ ಸಿಗ್ತಾವ್ರೋ ಗೊತ್ತಿಲ್ಲ. ನನ್ನ ಸಂಬಳ ನನಗೇ ಕೊಡಬೇಕು" ಎಂದ.

ಹೀಗೆ ಮಾತು ಮುಂದುವರಿಸಿದ ಸಿದ್ದ "ಮಠದ ಬಾಗಿಲು ಹಾಕಬೇಕು. ಮೂರು ದಿನ ಮಂಗಗಳನ್ನು ಉಪವಾಸ ಹಾಕಬೇಕು. ಬೋನ್ ತಂದು ನಾವು ಹೇಳಿದ ಜಾಗದಲ್ಲಿ ಇಡಬೇಕು. ಮಠದ ಒಳಗೆ ಯಾರೂ ಬರಬಾರದು. ನಂದು ಮತ್ತು ಗೋವಿಂದಯ್ಯನ ಖರ್ಚು ನೋಡ್ಕೋಬೇಕು" ಎಂದೆಲ್ಲಾ ಷರತ್ತುಗಳನ್ನು ಹಾಕಿದ ಸಿದ್ದ ಕೊನೆಗೆ "ನನ್ನ ಕರಿಸಿದ್ದಕ್ಕೆ ವಡೇರಿಗೂ, ಎಲ್ಲರಿಗೂ ನಮಸ್ಕಾರ" ಎಂದು ಹೇಳಿ ಕುಳಿತುಕೊಂಡ. ಸಿದ್ದ ಹೇಳಿದ್ದ ಪ್ರತಿ ಪದವನ್ನೂ ಅಧಿಕಾರಿಗಳೆಲ್ಲ ಪರಪರ ಅಂತ ಪೇಪರ್ ಮೇಲೆ ಬರಕೊಳ್ಳುತ್ತಿದ್ದರು.

ಪಿಡಬ್ಲ್ಯೂಡಿ ಇಲಾಖೆಯವರು ಮಠದ ನೀಲನಕ್ಷೆಯನ್ನು ತಂದು ಡಿಸಿಯವರಿಗೆ ತೋರಿಸಿದರು. ಅದನ್ನು ಸಿದ್ದನಿಗೆ ತೋರಿಸಿದ ಡಿಸಿ ಅವರು ಇದು ದೇವಸ್ಥಾನ, ಇದು ಬಾಗಿಲು, ಇದು ದಾಳಿ ನಡೆದ ಸೇತುವೆ, ಇದು ಮೆಟ್ಟಿಲು ಎಂದೆಲ್ಲ ವಿವರಿಸಲಾರಂಭಿಸಿದರು. ಕೆಲಕ್ಷಣ ಕೇಳಿದ ಸಿದ್ದ ಕೊನೆಗೆ "ಅದೆಲ್ಲ ನಂಗೊತ್ತಾಗೋದಿಲ್ಲ. ನಾನು ಜಾಗ ನೋಡಿ ಹೇಳ್ತಿನಿ. ಅಲ್ಲಿಗೆ ಬೋನು ತಂದು ಇಡಿ" ಅಂದ.

ಸಿದ್ದನ ನೇತೃತ್ವದಲ್ಲಿ ಎಲ್ಲರೂ ಜಾಗ ನೋಡಲು ಹೋದರು. ಈ ಹಿಂದೆ ಸಿದ್ದ ಒಂದೋ ಎರಡೋ ಬಾರಿ ಮಾತ್ರ ಮಠದೊಳಗೆ ಹೋಗಿದ್ದ. ಎಲ್ಲರೂ ಜಾಗ ನೋಡಿದ ನಂತರ ಆಂಜನೇಯ ದೇವಸ್ಥಾನದ ಅಂಗಳದಲ್ಲಿ ಬೋನು ಇಡುವುದೆಂದು ಸಿದ್ದ ನಿರ್ಧರಿಸಿದ.

ಮಾರನೆ ದಿನದಿಂದ ಮಠದಲ್ಲಿ 'ಆಪರೇಷನ್ ಮಂಕಿ' ಪ್ರಾರಂಭವಾಗುವುದಿತ್ತು. 'ಮಂಗನ ಬ್ಯಾಟೆ ಖ್ಯಾತಿಯ ಸಿದ್ದಯ್ಯನವರ ನೇತೃತ್ವದಲ್ಲಿ ಕಾರ್ಯಾಚರಣೆ' ಎಂದೆಲ್ಲ ಪತ್ರಿಕೆಗಳು ಸುದ್ದಿ ಮಾಡಿದವು. ಮಠಕ್ಕೆ ಬರುವ ಭಕ್ತರ ಮೇಲೆ ಎರಡು ದಿನದ ನಿಷೇಧವನ್ನು ಹೇರಲಾಯಿತು. ಆ ಎರಡು ದಿನ ಯಾರೂ ಮಠಕ್ಕೆ ಬರುವಂತಿರಲಿಲ್ಲ. ಮಂಗಗಳಿಗೆ ಏನನ್ನೂ ಕೊಡುವಂತಿರಲಿಲ್ಲ. ಪಟ್ಟಣಗಳಿಂದ ಬರುವ ಭಕ್ತರನ್ನು ಊರಹೊರಗಿನ 'ಚೆಕ್‌ಪೋಸ್ಟ್'ಗಳಲ್ಲಿಯೆ ತಡೆದು ವಾಪಸ್ಸು ಕಳಿಸಲಾಯಿತು. ಹೀಗೆ ಒಂದು ರೀತಿಯಲ್ಲಿ ಮಠದಲ್ಲಿಯೇ ನಿಷೇಧಾಜ್ಞೆ ಜಾರಿಗೆ ಬಂತು.



6

ಸಿದ್ದನ ನೇತೃತ್ವದಲ್ಲಿ ಆತನ ಐಡಿಯಾ ಪ್ರಕಾರವೇ ಮೂರು ಬಾಗಿಲುಗಳಿದ್ದ ಎರಡು ಕಂಪಾರ್ಟ್‌ಮೆಂಟ್‌ಗಳಿದ್ದ ಬೋನೊಂದನ್ನು ಅಡಿಕೆ ಮರದ ದಬ್ಬೆಯಿಂದ ರಾಘವೇಂದ್ರ ಆಚಾರಿ ತಯಾರಿಸಿದ. ಅದಕ್ಕೊಂದು ಆಚಾರಿಗೆ 5000 ರೂಪಾಯಿಗಳನ್ನು ನೀಡಿದ್ದೂ ಆಯಿತು.

ಸಿದ್ದ ಸೂಚಿಸಿದ್ದಲ್ಲೇ ಬೋನನ್ನು ಇಡಲಾಯಿತು. ಬೋನಿನ ಬಾಗಿಲನ್ನು ತೆರೆದಿಟ್ಟು ಸಿದ್ದ ಅದರೊಳಗೆ ತರಕಾರಿ ರಾಶಿ ಹಾಕಿದ. ಹತ್ತಿರದಲ್ಲೇ ಇದ್ದ ಮಾನಸ್ತಂಭದ ಸಂದಿ[...] ಗೋವಿಂದ ಮತ್ತು ಸಿದ್ದ ಬೋನಿನ ಸನ್ನೆ ತಂತಿ [...] ಅಡಗಿ ಕುಳಿತರು. ಮೊದಲ ದಿನ ಸಿದ್ದನನ್ನು [...] ಮಂಗಗಳು ಗೋಪುರದಿಂದ ಕೆಳಗಿಳಿಯಲೇ ಇಲ್ಲ.

ಮಾರನೆ ದಿನ ಬೋನಿನಲ್ಲಿ ತರಕಾರಿಗಳ ಜೊ[...] ಬಾಳೆಗೊನೆ ಇಟ್ಟು ಕಾದರು. ಸಂಜೆ ಹೊತ್ತಿಗೆ [...] ಮಂಗಗಳು ಕೆಳಗೆ ಬಂದು ಬೋನಿನಿಂದ ಹೊರ[...] ತರಕಾರಿಯನ್ನು ಎತ್ತಿಕೊಂಡವು. ಮಠದೊಳಗೆ 'ತೀ[...] ಪ್ರಸಾದ' ಏನೂ ಇಲ್ಲದೆ ಸಿದ್ದನಿಗೆ ಬೋರ್ ಆಗಿದ್ದ[...] ಗೋವಿಂದನ ಕೈಲಿ ಸನ್ನೆ ತಂತಿ ಕೊಟ್ಟು "ಆ[...] ಬರ್ತೀನಿ" ಅಂತ ಹೋದ. ಅದೆಲ್ಲೋ ಹೋಗಿ ಎ[...] ಕ್ವಾಟ್ರುಗಳನ್ನು ಹಾಕಿದ ಸಿದ್ದ ವಾಪಸ್ಸು ಬರಲೇ ಇ[...]

ಸ್ವಲ್ಪ ಹೊತ್ತಿನ ನಂತರ ಗೋವಿಂದ ನೋಡು[...] ಒಂದು ಮಂಗ ಬೋನಿನ ಒಳಗೆ ಹೋಗಿ ಒಂದೊ[...] ತರಕಾರಿಯನ್ನು ಎತ್ತಿ ತಂದು ಹೊರಗಿದ್ದ ಮಂಗ[...] ಕೊಡುತ್ತಿತ್ತು, ಬೋನಿನ ಹೊರಗಿದ್ದ ಮಂಗಗಳು ಅವುಗ[...] ಹೊತ್ತುಕೊಂಡು ಹೋಗುವುದು ಮಾಡುತ್ತಿದ್ದವು. ಕತ್ತ[...] ಲಾರಂಭಿಸಿತು.

ಸಿದ್ದನ ಬಗ್ಗೆ ಗೋವಿಂದನಿಗೆ ಸಿಟ್ಟು ಬರಲಾರಂಭಿ[...] ಈ ಬಕನಾಸಿ ಸಿದ್ದನಿಗೆ ಸಿಕ್ಕಿದ ಮರ್ಯಾದೆ ಆ[...] ಹೊಟ್ಟೆಕಿಚ್ಚುಹತ್ತಿಸಿತ್ತು. ಈ ಸಿದ್ದ ಕಾಡು ಶಿಕಾರಿ[...] ತನಗೆ ಸಹಾಯಕನಾಗಿದ್ದವನು. ತಾನೆಷ್ಟು ಬಾರಿ ಶಿ[...] ಮಾಡಿದ್ದನ್ನು ಅವನ ಬಾಯಿಗೆ ಹಾಕಿರಲಿಲ್ಲ. ಆ ವ[...] ಏನೋ ರಾಜಕೀಯ ಮಾಡಿ ತನಗೆ ಮೋಸ ಮಾಡಿ[...] ಅನ್ನಿಸಿತು ಗೋವಿಂದನಿಗೆ.

ಆತ ಹಾಗೆ ಯೋಚಿಸಲು ಕಾರಣವೂ [...] ಗೋವಿಂದನಿಗೆ ಬ್ರಿಟಿಷ್ ಗನ್ ಕೊಟ್ಟು ತೋಟಕ್ಕೆ ಮ[...]ಗಳು ಬಾರದಂತೆ ಕಾಯಿ ಎಂದು ವಡೇರು ಹೇಳಿ[...] ಆದರೆ ಗೋವಿಂದ ಅದೆಷ್ಟು ಕಾದರೂ ಮಂಗಗಳ ಹಾ[...] ತಪ್ಪಿರಲಿಲ್ಲ. ಇದನ್ನು ನೋಡಿ ರೇಗಿದ ವಡೇರು [...] ಕೈಯಲ್ಲಿ ಇದು ಆಗಲ್ಲ. ಆ ಸಿದ್ದನನ್ನು ಎರಡು [...] ತೋಟ ಸುತ್ತಿಸಿದರೆ ಮಂಗನ ಹಾವಳಿ ತಡೆಯಬಹ[...] ನೀನು ಕೋವಿಯನ್ನು ಹೆಗಲ [...] ಹಾಕ್ಕೊಂಡು ತಿರಗಕ್ಕೆ ಸೈ" [...] ಗೋವಿಂದನಿಗೆ ಅವಮಾನ ಮಾಡಿ[...]

ಸಿದ್ದ ಇಲ್ಲದಿರುವಾಗ [...] ಸನ್ನೆಯನ್ನು ಎಳೆದು ಮಂಗಗಳನ್ನ ಹಿ[...] ಸಿದ್ದನನ್ನು ಯಾರು ಕೇಳ್ತಾರೆ [...] ದುರಾಲೋಚನೆ ಗೋವಿಂದನಲ್ಲಿ ಮೂ[...] ಅಷ್ಟು ಹೊತ್ತಿಗೆ ಕತ್ತಲಾಗಿತ್ತು. ಗೋ[...] ಮತ್ತೆ ಇಣುಕಿ ನೋಡಿದಾಗ ಎರಡು ಮ[...] ಮಂಗಗಳು ಬೋನಿನೊಳಗೆ ಹೋಗಿದ್ದು[...]ಸಿತು. ಆಗ ಗೋವಿಂದ ಸನ್ನೆ ತಂತಿ [...] ಬೋನಿನೊಳಗೆ ಮೂರು ಮಂ[...] ಸಿಕ್ಕೊಂಡಿದ್ದವು. ಬೋನನ್ನು ಪ್ರವೇ[...] ಗೋವಿಂದ ಸಿದ್ದ ಹೇಳಿದ್ದಂತೆ ಬೋನಿನ[...] ಬಿದ್ದಿದ್ದ ಮಂಗಗಳನ್ನು ಮಧ್ಯದ ಭಾಗಕ್ಕೆ ಸರಿಸಿದ. [...] ಮುಚ್ಚಿದ್ದ ಮುಂದಿನ ಬಾಗಿಲನ್ನು ಆತನಿಂದ ತೆಗೆ[...] ಆಗಲೇ ಇಲ್ಲ. ಗೋವಿಂದ ಬೋನಿನೊಳಗೆ ಸಿ[...]ಕೊಂಡಿದ್ದ. ಗೋವಿಂದ ಸಿದ್ದನನ್ನು ಕರೆದು ಕೂಗಿದ. ಯ[...] ಬರಲಿಲ್ಲ.

ಇವನು ಕೂಗಿದಂತೆಲ್ಲಾ ಆತನೊಂದಿಗೆ ಬೋನಿನ[...] ಸಿಕ್ಕಿ ಬಿದ್ದಿದ್ದ ಮಂಗಗಳೂ ಕೂಗಲಾರಂಭಿಸಿದವು...

(ಮುಂದುವರೆಯು[...]

ಕಿಚ್ಚು



ಇಲ್ಲಿ ....
ಹಕ್ಕಿಗಳು ಗೂಡು ಸೇರುವ ಹೊತ್ತಿಗೆ
ಸೂರ್ಯ ಬಣ್ಣ ಕಳೆದುಕೊಳ್ಳುವ ಕಾಲಕ್ಕೆ
ಆಕಾಶದಲ್ಲಿ ಚಂದ್ರ-ತಾರೆಗಳು ತಂಪೆರೆಯುವ
ಹೊತ್ತಿಗೆ
ನನ್ನ ಹಟ್ಟಿಯಲ್ಲಿ ಕನಸುಗಳು
ಬಸಿರಾಗುತ್ತವೆ

ಅಲ್ಲಿ....
ಬಣ್ಣದ ಮಿಂಚು-ಬೆಳಕುಗಳ ಲೋಕ
ಮಿರುಗುಟ್ಟುತ್ತದೆ
ಅಧಿಕಾರ-ಐಭೋಗ ಕುಪ್ಪಳಿಸುತ್ತದೆ
ಖಾಲಿ ಸೀಸೆಗಳು ಮೋಜು-ಮಸ್ತಿ
ಉಸಿರಾಡುತ್ತವೆ

ಇಲ್ಲಿ....
ಹಳಸಿದ ಅನ್ನಕ್ಕೆ ಉಪ್ಪು-ನೀರು ಕಿವುಚಿ ಕುಡಿದು
ಸತ್ತ ದನದ ಬಾಡಿಗೆ ಗುದ್ದಾಡುವಾಗ
ಬತ್ತಿ ಹೋದ ಮೊಲೆ ಹಿಂಡಿ ಅಳುವ ಕೂಸಿನ ಬಾಯ್ಮುಚ್ಚಿಸುವ
ಮಡಿಗೆ ಹೆದರಿ ಕೊಡ ನೀರಿಗೆ ಕಾಯುವ ಹೊತ್ತು
ಮೆರವಣಿಗೆ ಬಂದ ಊರ ದೇವರಿಗೆ
ಅಗಸೆ ಬಾಗಿಲಿಂದಾಚೆ ನಿಂತು ಕೈ ಮುಗಿಯುವಾಗ
ನನ್ನ ತಮಟೆಯ ಸದ್ದು ರಣಗುಟ್ಟುತ್ತದೆ

ಅಲ್ಲಿ...
ಹಾಲು-ಮೊಸರು ಹೋಳಿಗೆ-ತುಪ್ಪ
ಬಿರಿಯಾನಿ ಖಡಾಯಿ ಘಮಗುಡುತವೆ
ಕಂಠಪೂರ್ತಿ ತಿಂದು ಕಕ್ಕುತ್ತವೆ
ದೇವರ ತಲೆಮೇಲೆ ಮುತ್ತಿನ ಕಿರೀಟ-ಹಾರ
ಮಿನುಗುತ್ತವೆ.

ಇಲ್ಲಿ....
ಮುನಿದ ಮಳೆಗೆ ಬದುಕು ಮುಳುಗುವಾಗ
ಭಾವಣೆ - ಚಾದರವಿಲ್ಲದೆ ಬೆತ್ತಲೆ ನಿಂತಾಗ
ಮೈನೆರೆದ ಮಗಳ ಮಾನಮುಚ್ಚುವ ಹೊತ್ತು
ಕಣ್ಣಲ್ಲಿ ಕೆಂಡದ ಮಳೆ ಸುರಿಯುತ್ತದೆ

ಅಲ್ಲಿ....
ನಿಮ್ಮ ಬಣ್ಣದ ಬಂಗ್ಲೆಗಳು ಎದ್ದು ನಿಲ್ಲುತ್ತವೆ
ಬೆತ್ತಲೆ ಮೈಗಳ ಮರೆಯಲ್ಲಿ
ತೊಡೆ ತೆವಲುಗಳು ತೀರುತ್ತವೆ
ಅಧಿಕಾರದ ಅಮಲು ಮೆರೆಯುತ್ತದೆ.

• ಎನ್.ರವಿಕುಮಾರ್, ಶಿವಮೊ[...]

...ಮಾರಸ್ವಾಮಿ ನಚಗಂಡ್ರೆ ಹಾಳು ಬಾವಿನೆ ಗತಿ!

...ಗೂ ರೆಡ್ಡಿ ಹಾಲಿನ ರೇಟ ಏರಿಸೇಬುಟ್ಟ"
...ರ ಕಾಫಿ ಕುಡಿಯುತ್ತ.
...ರಿಸಿದ್ದನೂ?" ಎಂದ ಕಾಳಮಾವ.
...ದು ರೂಪಾಯಿ ಏರಿಸ್ಯವುನೆ ಮುಂಡೆಮಗ."
...ರಲ್ಲಿ ರೈತರಿಗೇಟು ಸಿಕ್ಕತೂ?"
...ಲ್ಲೊಂದರ್ಧ ಸಿಕ್ಕಬವುದು ಕಣಮಾವ" ಎಂದು
...ಸುತ್ತಿದ್ದಂತೆ ಚಿಕ್ಕಣ್ಣ

...ಲು ಸೀ ಮ
...ಟ್ಟೆ ಪುರಾಣ
▸ಬಿ. ಚಂದ್ರೇಗೌಡ

...ಕಾಫಿ ರೇಟ ಏರುಸ್ತಿನಿ ಕಣ್ರೊ" ಎಂದ.
...ಕಪ್ಪ ನೀನೇನು ಡೇರಿ ಹಾಲು ತಂದಿಯಾ.
...ರಿವುರ ಮನೇಲಿ ಈಸಗಳೊ ನಿನಿಗೂ ಡೇರಿ
...ಏನು ಸಮಂಧ?" ಎಂದ ಸೀರ.
...ಹಾಲಿನ ಸುದ್ದಿ ಕಟಿಗಂಡು ನಿನಿಗೇನಾಗಬೇಕೊ
...ಸರ್ಕಾರ ಹಾಲಿನ ರೇಟ ಏರಿಸ್ಯದೆ, ನಾನು
...ಏರುಸ್ತಿನಿ" ಎಂದ ಚಿಕ್ಕಣ್ಣ.
...ರುಸ್ತಿಯೊ ಚಿಕ್ಕಣ್ಣ?" ಎಂದಳು ಜುಮ್ಮಿ.
...ರ ಲೀಟ್ರಿಗೆ ಯರಡು ರೂಪಾಯಿ ಏರಿಸಿರದ್ರಿಂದ
...ದು ಕಾಫಿಗೆ ಒಂದು ರೂಪಾಯೇರುಸ್ತಿನಿ."
...ದ್ರೆ ನೀನೇ ಮಾಡಿಕಂಡು ನೀನೇ ಕುಡೀಬೇಕಾ
...
...ನು ಇಲ್ಲ ಕಣೆ. ಜನ ಯಾವ ರೇಟಿಗೂ
...ಲ್ಲ. ಅಸೋಕ ಅನ್ನೋನು ಬಸ್‌ಚಾರ್ಜ್
...ದ, ಜನ ಬಾಯಿಬುಟ್ರೇ? ಅದ್ಯಂಗೊ ಏನೊ
...ಸುದ್ದದೆ. ನೀನು ಏಟೇಬ್ಯಲೆ ಏರಸೂ ತಡಕತ್ತರೆ"
...ು.
...ಬ್ಯಾಡಪ್ಪ, ಸಿಟಿಲಿ ಕಾಫಿ ರೇಟು ಆರುಪಾಯಿ
...ದೆ."
...ಪಾಯಿ ಅಲ್ಲ ಕಣೊ ಸೀರಮಾವ, ಅರಸೀಕ್ಯರೆ
...ಬರಾಬರಿ ಎಂಟುರೂಪಾಯಿ ಮಾಡ್ಯವುನೆ.
... ಹಾಲು, ಪುಡಿ, ಸಕ್ರೆ ಯಾವುದೂ
...ಇಲ್ಲ, ಅದ್ರೂ ಎಂಟ್ರುಪಾಯಿ ಅಂದ. ನಾನು
...ಚ ಅಂತ ಬಂದೆ. ಅಂಗೆ ಜನಗಳ್ಯಲ್ಲ ಒಂತೀ
...ಗಂಡ್ರೆ ಯಲ್ಲಾ ಮುಂಡೆ ಮಕ್ಕಳು ದಾರಿಗೆ

"ವರಗಡೆ ಆಟೊಂತರ ದುಡ್ಡು ಕೊಟ್ಟು ಕಾಫಿ ಕುಡಿಯೋ ನೀವು ಇಲ್ಲಿ ಒಂದು ರೂಪಾಯಿ ಕೊಡಕ್ಕೆ ನೂರು ಮಾತಾಡ್ತಿರಪ್ಪ" ಎಂದ ಚಿಕ್ಕಣ್ಣ.

"ಎಂಟು ರೂಪಾಯಿಗೆ ಒಂದು ಲೋಟ ಕಾಫಿ ಮಾರಿದ್ರೆ ಎಷ್ಟು ಲಾಭ ಉಳಿತದೊ ಚಿಕ್ಕಣ್ಣ?"

"ಏನಿಲ್ಲ ಅಂದ್ರುವೆ ಆರುಪಾಯಿ ಉಳಿತದೆ."

"ತಗಳಪ್ಪ, ಎಲ್ಲಿಗೋಗಬೇಕಯ್ಯ ದುಡಿಯಕ್ಕೇ. ಬರೀ ಕಾಫಿ ಟೀ ಮಾರಿಕಂಡೆ ಜೀವನ ಮಾಡಬವುದಲ್ಲೋ."

"ಇಸಿಸಿ, ಚಿಕ್ಕಣ್ಣ ಮಾಡ್ತಯಿರದು ಇನ್ನೇಸ್ಲ" ಎಂದ ಸೀರನ ಮಾತಿಗೆ ಚಿಕ್ಕಣ್ಣನಿಗೆ ಬರುಬಾರದ ಸಿಟ್ಟು ಬಂತು.

"ಯಾವತ್ತಾರ ನ್ಯಟ್ಟಗೆ ದುಡ್ಡು ಕೊಟ್ಟಿದ್ದಿಯೇನೊ ನೀನು? ಹಲ್ಲು ಕಿಸೊಗೊಂಡ ಮಾತಾಡ್ತಿಯಲ್ಲ ನಾಚಿಗಾಗದಿಲವೆ?" ಎಂದ.

"ಕಾಸು ಕೊಡ್ದೆ ಇನ್ನೇನು ಉಣಸೆ ಬೀಜ ಕೊಟ್ಟದ್ದಿನೇನ್ಲ. ನಿನ್ನ ಕಾಫಿ ಕಾಗೆ ಕಣ್ಣೀರಿದ್ದಂಗಿರತದೆ. ಆದ್ರು ಕುಡುದು ದುಡ್ಡು ಕೊಟ್ಟದ್ದೀನಿ."

"ಇನ್ನು ವ್ಯಾಲೆ ನಾನು ಕಾಫಿ ಕೊಡದೂ ಬ್ಯಾಡ, ನೀನು ದುಡ್ಡು ಕೊಡದೂ ಬ್ಯಾಡ."

"ಬ್ಯಾಡ ಬುಡು."

"ಇಲ್ಲಿ ಕುಡಿಯಕ್ಕೆ ಬಂದೋರೆ ಕೊಡುಸ್ತರೆ, ಅಲವೇನೊ ಮಾವ" ಎಂದ ಉಗ್ರಿ.

"ಈ ಹಾಳು ಕಾಫಿ ಟೀಯ ಬುಟುಬುಡದೆ ವಳ್ಳೆದೇನಪ್ಪ."

"ಗುಡ್ ಐಡಿಯಾ ಚಿಗಪ್ಪ" ಎಂದುಕೊಂಡು ವಾಟಿಸ್ಸೆ ಬಂದ.

"ನಿನಿಗೆ ಬ್ಯಾರೆ ಕಾಫಿ ಟೀ ಅವಲ್ಲ ಬುಡು" ಎಂದಳು ಜುಮ್ಮಿ.

"ಅದು ನಿಜ. ಆದ್ರು ನಾನೇನೇಳ್ತಿನಪ್ಪ ಅಂದ್ರೆ, ಯಾವ ಪದಾರ್ಥದ ರೇಟು ಏರತದೊ ಅದನ್ನ ಪರಚೇಸ್ ಮಾಡಬಾರ್ದು. ಪರಿಯಾಯವಾಗಿ ಏನನ್ನಾದ್ರು ಹುಡುಕಬೇಕು. ಪರೆಗ್‌ಜಾಂಪಲ್, ಈರುಳ್ಳಿ ರೇಟೇರತು, ಆಗ ಬರೀ ಉಪ್ಪಸಾರ್ ಮಾಡಬೇಕು. ಬೆಳ್ಳುಳ್ಳಿ ರೇಟೇರಿದ್ರೆ ಮೆಣಸಿನ ಸಾರು ಮಾಡಬೇಕು. ಈ ತರ ನಾವು ಜೀವನ ಮಾಡಬೇಕು."

"ನೀನು ಮಾಡ್ತಿಬುಡು, ಕಲ್ತಿದ್ದು ಬುಡೆ ಕಲೆಗಾತಿ ಅಂದ್ರೆ ನಡಂತ್ರದಲ್ಲಿ ಬುಟ್ಟು ಏನು ಮಾಡ್ಲಿ ಅಂದಲಂತೆ" ಎಂದಳು ಜುಮ್ಮಿ.

"ನಿನ್ನ ಗಾದಿ ಮಾತು ಕುಮಾರಸ್ವಾಮಿ ಅತ್ಯಕೋಯ್ತಾ ಅದೆ ಕಣಕ್ಕ."

"ಅವುನೇನು ಮಾಡಿದಾ?"

"ಮೈಸೂರಲ್ಲಿ ತಿರಗ ಬಿಜೆಪಿ ಜ್ವತೆ ಸೇರಿಕಂಡವುನೆ."

"ಅವುಕ್ಯಾವ ಮಾನ ಮರಿಯಾದಿ ಇದ್ದತೂ?" ಎಂದ ಸೀರ.

"ಅಷ್ಟು ಹಗುರವಾಗಿ ಮಾತಾಡಬ್ಯಾಡ ಕಣೊ. ಅಂತ ಗತಿಗೆಟ್ಟ ಕ್ಯಲಸ ಮಾಡಿರದೇ ಆದ್ರೆ ಅಂತದ್ದೇನೊ ಆಗಿರತದೆ" ಎಂದ ಉಗ್ರಿ.

"ಏನು ಆಗಿಲ್ಲ ಕಣೊ ಉಗ್ರೀ. ಜಿಲ್ಲಾ ಪಂಚಾತಿ ಯಲಕ್ಷನ್ನಲ್ಲಿ ಕಾಂಗ್ರೆಸ್ಸು ಮದುಲ್ನೆ ಸ್ಥಾನ, ಜೆಡಿಎಸ್ಸು ಎರಡನೇ ಸ್ಥಾನ, ಬಿಜೆಪಿ ಮೂರನೇ ಪ್ಲೇಸಿಗೆ ಬಂದವಂತೆ. ಮೀಸಲಾತಿ ಕೈಟಗರಿ ಪ್ರಕಾರ ಜೆಡಿಎಸ್ನಲ್ಲಿ ಅಧ್ಯಕ್ಷನಾಗೋ ಕ್ಯಾಂಡೇಟೇ ಇರಲಿಲವಂತೆ. ಅದ್ಕೆ ಕಾಂಗ್ರೈಗಳು ನಮ್ಮಲ್ಲಿ ಸಫಿಸಿಯಂಟ್ ಕ್ಯಾಂಡೇಟಗಳವುರೆ, ಸಪೋರ್ಟು ಮಾಡಿ ಅಂದವಂತೆ.



ಅಂತ ಹಣೆಬರ ನಮಿಗೇನೂ ಇಲ್ಲ ಅಂತ ಕುಮಾರಣ್ಣ ನತ್ರಕೋದವಂತೆ. ಅವುನು ಬಿಜೆಪಿಗಳ ಕಾಂಟ್ಯಾಕ್ಟ ಮಾಡಿ, ಅವುರ ಜ್ವತೆ ಸೇರಿಕಂಡನಂತೆ. ಇಷ್ಟೆ ನೋಡಪ್ಪ ಮ್ಯಾಟ್ರು."

"ಅಲ್ಲಾ, ಹಿಂಗೂ ಮಾಡ್ತರ್ಲ?"

"ಅವುರು ಇರದೆ ಅಂಗಲವೆ ದ್ವಡಪ್ಪ. ಯಾರ ಜ್ವತೆಲಾದ್ರು ಮನಗಕ್ಕೆ ತಯಾರಾದೋರಿಗೆ ಯಾವ ನೀತಿ ನಿಯಮ ಇದ್ದತೇಳು?"

"ಆ ಈಶ್ವರಪ್ಪ ಅಂದಿರೊ ಮಾತು ನೋಡಿದ್ರೆ, ಅಪ್ಪ ಮಕ್ಕಳು ನ್ಯಾಣಾಯ್ಯಬೇಕಪ್ಪ."

"ಅವುನೇನಂದಾ?"

"ಜೆಡಿಎಸ್‌ನೋರು ಮನೆಬಾಗಲಿಗೆ ಬಂದಾಗ ನಾವು ಇಲ್ಲ ಅಂತ ಕಳಸಕ್ಯಾಗದೆ ಕೈ ಜೋಡಿಸಿದ್ದಿವಿ ಅಂದವುನೆ."

"ಅಂಗಿರೋಯ್ತಲ್ಲೊ, ಇವ್ರುರ ಮಾನ."

"ಅವುರಿಗೆ ಮಾನ ಮರಿಯಾದಿ ಇದ್ರೆ ಇವತ್ತಾಕಿಂತ ಸ್ಥಿತಿ ಬರದು ದ್ವಡಪ್ಪ. ಕುಮಾರಣ್ಣ ಏನು ಬೇಕಾದ್ರು ಮಾಡಬಲ್ಲ, ಯಾರ್ನಾರ ಬಾವಿಗೆ ನೂಕಿ ಆಳ ನೋಡಬಲ್ಲ ಅನ್ನದ ಈಗಾಗ್ಲೆ ತೋರಿಬುಟ್ಟವುನೆ. ಅವುನ ಮಾತಕಟಗಂಡು ಐದು ಜನ ಎಮ್ಮೆಲ್ಲೆಗಳು ಹಾಳುಬಾವಿ ಬಿದ್ರು."

"ಅವುರ ಕತಿಯೇನಾಯಿತ್ಲ?"

"ಅವುರ ಕತೆ ಮುಗಿತು ದ್ವಡಪ್ಪ, ಹೈಕೋರ್ಟು ನೀವು ಅನರ್ಹ ಜನ, ಮನಿಗೋಗಿ ಅಂದದೆ. ಅದ್ಕೆ ಕುಮಾರಣ್ಣ ನೀವೇನು ಹೆದರಬ್ಯಾಡಿ, ನಮ್ಮ ತಂದೆ ಅವ್ರುರೆ, ರೇವಣ್ಣ ಅವುನೆ, ಯಲ್ಲಾತಕಿಂತ ನಾನು ನಿಮ್ಮ ಜ್ವತೆ ಇದ್ದಿನಿ, ಆದ್ರಿಂದ ಸುಪ್ರೀಂಕೋರ್ಟಿಗೋಗಿ ಅಂದವುನಂತೆ."

"ಅವೊತ್ತಿಗೆ ಎಡೂರಪ್ಪನಾಡಳತನೆ ಮುಗಿದಿರತದೆ."

"ನಮ್ಮ ಕೋರ್ಟು ಇರದೆ ಅಂಗಲವೆ ದ್ವಡಪ್ಪ. ಅಂತೂ ಆಯ್ಕಂಡು ತಿನ್ನೊ ಕೋಳಿ ಕಾಲು ಮುರುದಾಕಿದ್ರು."

"ಅವುನ್ಯಾರೊ ಜಡಜಿ ಲಂಚ ತಗಂಡಿದ್ದೂ ಅಲ್ದೆ ಎಡೂರಪ್ಪನಿಂದ ಹೆಡತಿಗೆ ನೆಕಲೇಸ ಬವುಮಾನ ಕೊಡಿಸಿದ್ದ ಅಂದ್ರುಲ್ಲಾ, ಆ ಜೆಡಜಿ ಕೊಟ್ಟರೊ ತೀರಪೇನ ಇದು?" ಎಂದ ಸೀರ.

"ಇಂಥ ಸಿಕ್ರೇಟ್ ನಿನಿಗ್ಯಾರೇಳಿದ್ರು ಚಿಗಪ್ಪ"

"ನಮ್ಮ ಪುಡಸವಿಮ್ಮ ಹುಡುಗ ಬೆಂಗಳೂರಲ್ಲವುನೆ ಕನ್ನ, ರೌಡಿ ಕ್ಯಲಸ ಮಾಡಿಕಂಡು, ಅವುನೇಳಿದ ಕಂಡ್ರ."


"ರೌಡಿ ಕ್ಯಲಸ ಮಾಡೋರ ಮಾತ ಪೂರ ನಂಬಕ್ಕೋಗಬ್ಯಾಡ. ಅವುರ್ಯಲ್ಲ ತಾವೇ ಕಣ್ಣಾರ ನೋಡಿದೊ ಅನ್ನಂಗೆ ಮಾತಾಡ್ತರೆ ಚಿಗಪ್ಪ."

"ಈ ಪಕ್ಷೇತರ ಶಾಸಕರು ಮನಿಗೋಯ್ತರೆ, ತೀರ್ಪು ನಮ್ಮ ಪರನೆ ಬತ್ತದೆ ಅಂತ ಬಿಜೆಪಿಗಳು ಹೇಳಿಕಂಡು ತಿರುಗುತಿದ್ರು. ಅವುರು ಹೇಳಿದಂಗೆ ಆಗ್ಯದಲ್ಲೊ ವಾಟಿಸ್ಸೆ?" ಎಂದ ಉಗ್ರಿ.

"ಅದು ಸಿಂಪಲ್ ಕಣೊ ಉಗ್ರಿ. ಇತ್ತೀಚಿನ ತೀರ್ಪೆಲ್ಲಾ ಆಡಳಿತ ಮಾಡೊ ಪಕ್ಷದ ಪರಾನೇ ಬತ್ತಾ ಅವೆ. ಆ ನಂಬಿಕೆ ಮ್ಯಾಲೆ ಬಿಜೆಪಿಗಳು ಕೋರ್ಟು ತೀರ್ಪು ನಮ್ಮ ಪರಾನೇ ಬತ್ತದೆ ಅಂತ ಹೇಳಿಕೊಂಡಿದ್ರು. ಅಂಗೆ ಆಗ್ಯದೆ. ಇನ್ನೊಂದು ಇಂಪಾರ್ಟೆಂಟ್ ಮ್ಯಾಟ್ರೇನಪ್ಪಾ ಅಂದ್ರೆ, ಕೋರ್ಟು ತೀರ್ಪು ಅಡ್ವಾನ್ಸಾಗಿ ಲೀಕೌಟಾಯ್ತಾ ಅವೆ. ಎಕ್‌ಜಾಮಲ್ಲಿ ಕ್ವಶ್ಚನ್ ಪೇಪರ್ ಅವುಟಾಯ್ತವೆ ನೋಡು ಅಂಗೆ. ಟೈಪಿಸ್ಟಿಗೆ ದುಡ್ಡು ಕೊಟ್ರು ಸಾಕು, ಅವುರೆ ಹೇಳ್ತರಂತೆ. ಅಂಗೆ ಬಿಜೆಪಿಗಳು ಕಾಸು ಕೊಟ್ಟು ಅಡ್ವಾನ್ಸಾಗಿ ರಿಜಲ್ಟ ಪಡಕಂಡು ಹೇಳಿಕೊಂಡು ತಿರುಗಿರಬವುದು. ಇಲ್ದೆನೂ ಇರಬವುದು. ಎನಿಹೌ, ಈ ಕುಮಾರಸ್ವಾಮಿ ನಚ್ಚಿದ ಮೈಸೂರು ಕಾಂಗ್ರೆಸ್ಸಿನೋರು, ವಿಧಾನಸಭೆ ಪಕ್ಷೇತರ್ರು ಇಲಿ ಪಾಶಾಣ ತಗಳದೇ ವಾಸಿ ಕಣೊ!" ●


...ಸಾರ್ವಜನಿಕ ವೇದಿಕೆಯಿಂದ ಅಳು

...ಗಾದೆ, 'ಅಳುವ ಗಂಡಸನ್ನೂ ನಗುವ ಹೆಂಗಸನ್ನೂ ನಂಬಬೇಡ' ಎಂಬುದು ಅನೇಕ ಸಲ ಸುಳ್ಳಾಗುತ್ತದೆ. ...ಅಳುವ ಗಂಡಸು, ನಗುವ ಹೆಂಗಸು ಬೇರೆಯವರಿಗಿಂತ ನಂಬಲರ್ಹವಾಗಿದ್ದುದನ್ನು ನೋಡಿದವರಿದ್ದಾರೆ. ...ಸಾರ್ವಜನಿಕ ವೇದಿಕೆಯಿಂದ ಅಳುವವನನ್ನು ನಂಬಬೇಡಿ' ಎಂಬುದು ಎಂದೂ ಸುಳ್ಳಾಗುವುದಿಲ್ಲ. ಈ ಬಗ್ಗೆ ...ಗಿ ಯೋಚಿಸಿ ಹೇಳಿದವರು ಲೋಹಿಯಾ; ಅಳುವುದರ ಮೂಲಗಳನ್ನು ಕೆದಕಿ ನೋಡಿ ವಿವರಿಸಿದರು. ...ತರು ಮೊನ್ನೆ ಶಾಸನಸಭೆಯಲ್ಲಿ ತಿಮ್ಮೇಗೌಡರಿಗೆ ಸಂತಾಪ ಸೂಚಿಸುತ್ತಾ ಅತ್ತರು; ಅಳುವಿನಿಂದಾಗಿ ...ಭಾಷಣ ಮುಂದುವರಿಸಲು ಆಗುತ್ತಿಲ್ಲವೆಂದು ಕೂತರು. ಹಾಗೆಯೇ ಪತ್ರಿಕಾಗೋಷ್ಠಿಗಳಲ್ಲಿ, ನಮ್ಮ ...ರು ಅಭಿನಂದನೆ ಹೇಳಲು ಹೋದಾಗ ಬಿಕ್ಕಿಬಿಕ್ಕಿ ಅತ್ತರು. ನಾನು ಇದನ್ನೆಲ್ಲ ಕೇಳಿ ಜೋರಾಗಿ ನಕ್ಕು, 'ಅವರಿಗೆ ಅದೇನು ರೋಗ?' ಅಂದೆ. ನಿಜಕ್ಕೂ ನನಗೆ




ಸಿಟ್ಟುಬಂದಿತ್ತು. ಒಬ್ಬ ಸಾರ್ವಜನಿಕ ವೇದಿಕೆಯಿಂದ, ಶಾಸನಸಭೆಯಲ್ಲಿ ಅತ್ತಾಗ ಆತ ತನ್ನ ಬಗ್ಗೆ ಮಹಾ ವ್ಯಾಮೋಹ, ಪ್ರೀತಿಯವನು ಎಂದು ತಿಳಿದಿರುತ್ತಾನೆ. ನಿಜಕ್ಕೂ ಆತ ಗುಣದಲ್ಲಿ ಅದಕ್ಕೆ ವಿರುದ್ಧ ಇರುತ್ತಾನೆ. ನೀವು ವೇದಿಕೆಯಲ್ಲಿ ಮಾತಾಡುತ್ತಿರುವುದು ಸಾರ್ವಜನಿಕ ವಿಷಯ, ಸಾರ್ವಜನಿಕ ವ್ಯಕ್ತಿಯ ವಿಷಯ; ಆ ಮಾತು ಕೆಲಸ ಮಾಡಬೇಕಾದ್ದು ಸಾರ್ವಜನಿಕವಾಗಿ. ನಾವೆಲ್ಲರೂ ಮೆರವಣಿಗೆ, ಪ್ರತಿಭಟನೆ, ಧರಣೆ, ಸತ್ಯಾಗ್ರಹ, ಭಾಷಣ ಇತ್ಯಾದಿಯನ್ನೆಲ್ಲ ಮಾಡುವುದು ಸಾರ್ವಜನಿಕರ ಹಿತದೃಷ್ಟಿಯಿಂದ. ನಾನು ವೇದಿಕೆಗೆ ಹೋಗಿ ಮಾತಾಡುತ್ತಾ ಅತ್ತೆನೆಂದುಕೊಳ್ಳಿ. ಹಾಗೆ ಅತ್ತ ಕೂಡಲೆ ಸ್ವಂತದ, ಖಾಸಗಿಯಾದ ಭಾವನೆ ...ತ್ತದೆ; ಎಲ್ಲರ ಗಮನವನ್ನು ವೈಯಕ್ತಿಕ ನಷ್ಟ, ಲಾಭ, ಅಗಲಿಕೆ, ನೋವು ಇತ್ಯಾದಿಗೆ ...ಸಿ. ಹಾಗೆ ಸೆಳೆದ ಕೂಡಲೆ ಭಾವುಕತೆಯ ಭ್ರಷ್ಟತೆ, ಸಾರ್ವಜನಿಕ ವಿಷಯವನ್ನು ...ಳಿಸಿ ಮೆಚ್ಚುಗೆ ಪಡೆಯುವ ಗೀಳು, ಎಲ್ಲರ ವೇದಿಕೆಯನ್ನು ನನ್ನದಾಗಿಸಿಕೊಂಡ ...ರುವಾಗುತ್ತದೆ. ಆದ್ದರಿಂದ ಸಾರ್ವಜನಿಕ ವೇದಿಕೆಯ ಮೇಲೆ ನಿಂತು ಅಳುವವನು ...ರ್ಹನಲ್ಲ, ಆತ ಅಪಾಯಕಾರಿ ಕೂಡ.

..., ಇಡೀ ರಾಜಕೀಯ ಜೀವನದಲ್ಲಿ ಗಮನಿಸಿದ, ಪಾಲಿಸಿದ ಲೋಹಿಯಾ ಒಂದೇ ...ಅತ್ತರು. ಗಾಂಧೀಜಿ ಸತ್ತಾಗ ಅತ್ತು ಸಾರ್ವಜನಿಕ ಪ್ರದರ್ಶನ ಮಾಡಲಿಲ್ಲ ...ದಲ್ಲಿ ಹೋಗುವಾಗ ಕೂಡ ಅಳಲಿಲ್ಲ. ಗಾಂಧೀಜಿಯವರ ಚಿತೆಗೆ ಬೆಂಕಿ ಇಡುವ ...ಲ್ಲಿ ಎಲ್ಲೋ ಮೂಲೆಯಲ್ಲಿ ನಿಂತಿದ್ದ ಲೋಹಿಯಾ ಕಣ್ಣಲ್ಲಿ ನೀರು ಸುರಿಯತೊಡಗಿತು. ...ಗಿಗಾದ ದುಃಖ. ಅದಕ್ಕೂ ಸಾರ್ವಜನಿಕ ಪ್ರದರ್ಶನಕ್ಕೂ ಸಂಬಂಧವಿರಲಿಲ್ಲ.



ಸಾಹಿತಿಯನ್ನು ಕುರಿತು ರಾಜಕಾರಣಿ

ರಾಜಕಾರಣಿಗಳು ಎಲ್ಲೆಲ್ಲೂ ಒಂದೇ ತರಹ. ಅವರ ನುಡಿಕಟ್ಟು, ಭಾಷಣದ ಶೈಲಿ, ಜನರೊಂದಿಗೆ ಮಾತಾಡುವ ರೀತಿ, ಭರವಸೆಗಳಿಂದ ತಪ್ಪಿಸಿಕೊಳ್ಳುವ ರೀತಿ-ಎಲ್ಲ ದೇಶಗಳಲ್ಲೂ ಒಂದೇ ರೀತಿ ಇರುತ್ತದೆ. 'ಪರಿಶೀಲಿಸೋಣ' 'ನೋಡೋಣ' ಎನ್ನುವುದರಿಂದ ಹಿಡಿದು, ಬರೀ ಕಿಲೋಮೀಟರ್ ದೂರದಲ್ಲಿ ಸ್ವರ್ಗ ಇದೆ, ಅದನ್ನು ನಿಮಗೆ ತಂದುಕೊಡಲು ಈಗಿನ ರಾಜಕಾರಣಿಗಳಿಗೆ ಏನಾಗಿದೆ, ನನ್ನನ್ನು ಆರಿಸಿ ನೋಡಿ ತೋರಿಸ್ತೀನಿ-ಇತ್ಯಾದಿ ಮಾತುಗಳ ಜೊತೆಗೆ ಈ ರಾಜಕಾರಣಿಗಳಲ್ಲಿ ಬಹುಪಾಲು ಜನ ಸಾಹಿತ್ಯ ಕುರಿತು ಮಾತಾಡುವುದು ಒಂದೇ ರೀತಿ ಇರುತ್ತದೆ. ನಾನು ಬಲ್ಲ ರಾಜಕಾರಣಿಗಳಲ್ಲಿ ಗೋಪಾಲ ಗೌಡರು ಸಾಹಿತ್ಯದ ಬಗ್ಗೆ ಚೆನ್ನಾಗಿ ಮಾತಾಡುತ್ತಿದ್ದರು. ಕೆಲವೇ ಕ್ಷಣಗಳಲ್ಲಿ ಸಾಹಿತಿಯನ್ನು ತಮ್ಮವನನ್ನಾಗಿ ಮಾಡಿಕೊಳ್ಳುತ್ತಿದ್ದರು. ಸಾಹಿತಿಗಳ ಗುಟ್ಟು ಅನೇಕರಿಗೆ ಗೊತ್ತಿಲ್ಲ; ನಂಬುವ ರೀತಿಯಲ್ಲಿ ಅವರನ್ನು ಹೊಗಳಿದರೆ ಅವರಿಗೆ ಖುಷಿಯಾಗುತ್ತದೆ; ಅವರ ಸಾಹಿತ್ಯವನ್ನು ವಿಶ್ಲೇಷಿಸಿ ಒಳ್ಳೆಯ ಗುಣ ತೋರಿಸಿದರಂತೂ ಕುಣಿದಾಡಿ ರಾಜಕಾರಣಿಯ ಸೇವಕರಾಗಿಬಿಡುತ್ತಾರೆ. ಆದರೆ



ಬಹುಪಾಲು ರಾಜಕಾರಣಿಗಳು ಸಾಹಿತ್ಯವೊಂದು ಬಡಗಿ ಕೆಲಸ, ಕಮ್ಮಾರರ ಕೆಲಸ ಎಂಬಂತೆ ತಿಳಿದಿರುತ್ತಾರೆ; ದೇಶಕ್ಕೆ ಅವರೂ ಬೇಕಾಗಬಹುದು ಎಂಬಂತೆ ಇರುತ್ತಾರೆ. ಕೆಲವರ ಶೈಲಿ ನೋಡಿ. ಕೋಣಂದೂರು ಲಿಂಗಪ್ಪ ಕುಕವಿಯ ರೀತಿಯಲ್ಲಿ ಕಾವ್ಯವನ್ನು ಕೂಗುತ್ತಾರೆ; ಇಬ್ರಾಹಿಂ ಶರಣನಾದ ರೀತಿಯಲ್ಲಿ ವಚನಗಳನ್ನು ಹೇಳಿ ರಂಜಿಸಿದರೂ ನಂಬಲರ್ಹವಾಗದೆ ಇರುತ್ತಾರೆ. ಮೊಯ್ಲಿ ಕೋಣಂದೂರು ಲಿಂಗಪ್ಪನ ರೀತಿ; ಲಲಿತಾನಾಯಕಿಯ ಗೋಳು ನೋಡುವುದು ಉಳಿದಿದೆ. ಮೊನ್ನೆ ಕುವೆಂಪು ಅವರ ಪ್ರತಿಮೆಯನ್ನು ಅನಾವರಣ ಮಾಡಿದ ನಿಜಲಿಂಗಪ್ಪನವರು ಮಾತನಾಡಿದ್ದು ಕುತೂಹಲಕರವಾಗಿತ್ತು. ಇದ್ದಕ್ಕಿದ್ದಂತೆ, "ಕುವೆಂಪು ಅವರ ರಾಮಾಯಣದರ್ಶನದಲ್ಲಿ ಒಬ್ಬಳು ಸರ್ವೆಂಟು ಬರ್ತಾಳಲ್ಲ-ಅವಳ ಹೆಸರೇನು? ಯಾರೋ ಅಂದರು, 'ಮಂಥರೆ'. ಅವಳ ಪಾತ್ರ ಎಷ್ಟು ಚೆನ್ನಾಗಿ ತಂದಿದ್ದಾರೆ..." ಮುಂತಾಗಿ ಮಾತಾಡಿದ್ದು ಹಾಸ್ಯಾಸ್ಪದವಾಗಿತ್ತು. ಆರು ತಿಂಗಳ ಹಿಂದೆ ನಿಟ್ಟೂರು ಶ್ರೀನಿವಾಸರಾವ್ ನನ್ನ ಸಾಹಿತ್ಯ ಕುರಿತು ಮಾತಾಡಲು ಆರಂಭಿಸಿದರು; ನಾನು ಹೆದರಿಕೊಂಡು ಕೇಳುತ್ತಿದ್ದಾಗ ತಿಳಿಯಿತು-ಅವರು ನನ್ನ ಒಂದೇ ಒಂದು ಕತೆ ಕೂಡ ಓದಿದಂತಿರಲಿಲ್ಲ!

ಸಾಹಿತ್ಯ ಅಂದರೆ ಮಾತನ್ನು ಬಳಸುವ ರೀತಿ. ಸಾಹಿತಿಯಲ್ಲಿ ಮಾತು ಕೃತಿಯಾಗಿ ಬರಬೇಕು; ರಾಜಕಾರಣಿಯಲ್ಲಿ ಕೃತಿ ಮಾತಾಗಿ ಹರಿಯಬೇಕು. ಅದು ಆಗುವುದೇ ಇಲ್ಲ.

ಜನವರಿ 18, 1995

ಪೂಜೆ ಬದಲು ಮಾಟ ಮಾಡ್ಸಿ

ಈಗ ಎಲ್ಲೆಡೆ ಕ್ರಿಕೆಟ್ ಜ್ವರ. ಆದರೆ ಆ ರೋಗ ಬಡಿದಿರೋದು ಆಟಗಾರರಿಗಲ್ಲ, ಜನತೆಗಂತೆ! ವಿಚಿತ್ರ ಅಂದರೆ ರೋಗಿ ಬದಲು ಆಟಗಾರರೇ ಚಿಕಿತ್ಸೆ ಪಡೀತಿದಾರೆ!

ಹಿಂದೆಲ್ಲ ವಿಶ್ವಕಪ್ ಬಂತು ಅಂದರೆ ದೇವಸ್ಥಾನಗಳಲ್ಲಿ ಜನವ್ರೋ ಜನ ಇರುತ್ತಿದ್ದರು. ಭಾರತ ವಿಶ್ವಕಪ್ ಗೆದ್ದು ಬರಲಿ ಎಂದು ಹೋಮಹವನ, ಪೂಜೆ ಪುನಸ್ಕಾರ ನಡೆಸೋರು. ಅವೇನೂ ನಿರೀಕ್ಷಿತ ಫಲ ನೀಡಲಿಲ್ಲ ಎಂದೋ ಏನೋ ಈಗ ಯಾರೂ ಅವುಗಳತ್ತ ಗಮನ ಹರಿಸಿದಂತಿಲ್ಲ. ಜನ ಬಿಟ್ಟರು ಅಂತ ಆಟಗಾರರೂ ಸುಮ್ಮನಿರಲು ಆಗುವುದಿಲ್ಲವಲ್ಲಾ. ಹರಭಜನ್ ಸಿಂಗ್ ಈಗ ಶನೇಶ್ವರನ್ನ ಹಿಡ್ಕಂಡವ್ನೆ. ಹೋಗಿಹೋಗಿ ಶನೇಶ್ವರನ್ನ ಯಾಕಪ್ಪ ಹಿಡಿದ ಇವನು ಅಂದರೆ ಅವನದ್ದು ಕುಂಭ ರಾಶಿಯಂತೆ. ಆ ರಾಶಿಯೋರು ನವಮಿ ದಿವಸ ಶನೇಶ್ವರನನ್ನ ಪೂಜಿಸಿದರೆ ಒಳ್ಳೆಯದಾಗುತ್ತಂತೆ!

ಶನೇಶ್ವರನ ಅಂತರಾಳ ತಿಳ್ಕೊಂಡಿರೋನು ಬಜ್ಜಿ ಜೊತೆ ಇದ್ದನಂತೆ. ಏನು ಮಾಡಿದ್ರೆ ಶನೇಶ್ವರ ಭಾರತಕ್ಕೆ ಗೆಲುವು ತಂದು ಕೊಡ್ತಾನೆ ಅನ್ನೋದನ್ನ ತಿಳ್ಕೊಂಡಿದ್ದನಂತೆ. ಹಿಂಗಿಂಗೆ ಈ ದೇವರಿಗೆ ಎಳ್ಳು ಅಂದ್ರೆ ಪ್ರೀತಿ, ಅದ್ಕೆ 'ಎಳ್ಳುದೀಪ' ಹಚ್ಚಿಸು ಅಂದನಂತೆ. ಬಜ್ಜಿ ಹಂಗೇ ಮಾಡಿದ್ನಂತೆ. ಆಮೇಲೆ 'ಅಖಂಡ ದೀಪ'ದ ಹತ್ತಿರ ಕರೆದುಕೊಂಡು ಹೋದನಂತೆ. ಆ ದೀಪದಲ್ಲಿರೋ ಎಣ್ಣೆಯಲ್ಲಿ ನಿನ್ನ ಪ್ರತಿಬಿಂಬ ನೋಡಿಕೊ ಅಂದನಂತೆ. ಅವನು ಹಂಗೇ ಮಾಡಿದನಂತೆ. ಆನಂತರ ದೀಪ ಹಚ್ಚಿಸು ಅಂದನಂತೆ. ಅವನು ಹಚ್ಚಿಸಿದನಂತೆ, ಈಗ ಜ್ಯೋತಿ ನೋಡು ಅಂದನಂತೆ. ಅವನು ನೋಡಿದನಂತೆ. ಯಾಕೆ ಜ್ಯೋತಿ ನೋಡಬೇಕು ಅಂದ್ರೆ ಶನೇಶ್ವರ ದೇವಸ್ಥಾನದಲ್ಲಿ ಎಣ್ಣೆಯಲ್ಲಿ ಪ್ರತಿಬಿಂಬ ನೋಡಿ 'ಜ್ಯೋತಿದರ್ಶನ' ಮಾಡಿದರೆ ದುಷ್ಟಶಕ್ತಿಗಳೆಲ್ಲ ಸರ್ ಅಂತ ಹೊರಟುಹೋಗ್ತವಂತೆ!

ಈ ದೇವರುಗೀವರು ಆಟ ಎಲ್ಲ ನಮ್ಮ ರಾಜ್ಯದಲ್ಲಿ ನಡೆಯೋ ಹಾಗೆ ಕಾಣುತ್ತಿಲ್ಲ, ಒಂದು ವಿಷಯ ಹೇಳ್ತೀನಿ. ದೇವಣ್ಣೋರು ಇದಾರಲ್ಲ.... ಅದೇ ದೇವೇಗೌಡರ ಸುಪುತ್ರ ವಾಮಾಚಾರದಲ್ಲಿ ಎತ್ತಿದ ಕೈ ಅಲ್ವಾ. ಅವರೇನು ಮಾಡಿದರಂತೆ ಅಂದರೆ ಕುಮಾರಸ್ವಾಮಿ ಶರಾಯಿ ಜೋಬಿಗೆ ಮಂತ್ರಿಸಿದ ನಿಂಬೆಹಣ್ಣು ಹಾಕಿಬುಟ್ಟರಂತೆ. ಯಾವಾಗ ಅಂತಿರಾ. ಬಿಜೆಪಿ-ಜಾತ್ಯತೀತ ದಳ ಮಧುಚಂದ್ರ ಅರ್ಧ ಮುಗಿದಿತ್ತಲ್ಲ ಆವಾಗ. ಕುಮಾರಸ್ವಾಮಿಯವರು ಯಡಿಯೂರಪ್ಪನವರಿಗೆ ಅಧಿಕಾರ ವಹಿಸಿಕೊಡಬೇಕು ಅಂತ ವಿಧಾನಸೌಧದಲ್ಲಿ ಕಾದಿದ್ದರಂತೆ. ಆಗೇನಾಯಿತಂತೆ ಅಂದ್ರೆ.... ಮಂತ್ರಿಸಿದ ನಿಂಬೆಹಣ್ಣು ಇತ್ತಲ್ಲ ಅದು ಅವರ ಬುದ್ಧೀನೆ ಚಂಚಲ ಮಾಡಿತು. ಏನೋ ಮಂಕು ಬಡಿದ ಹಾಗಾಯ್ತಂತೆ. ಅಧಿಕಾರ ಹಸ್ತಾಂತರ ಮಾಡ್ತೀನಿ ಅಂತ ಕುಂತಿದ್ದೋರು 'ಕೊಡಾಕಿಲ್ಲ ಅಧಿಕಾರವ' ಅಂದುಬಿಟ್ಟಂತೆ!

ನೋಡಿದಿರಾ ಮಂತ್ರದ ನಿಂಬೆಹಣ್ಣಿನ ಶಕ್ತೀನ.. ಹೆಂಗಾದರೂ ಮಾಡಿ ಮಂತ್ರಿಸಿದ ನಿಂಬೆಹಣ್ಣನ್ನು ವಿದೇಶೀ ಕ್ರಿಕೆಟ್ಟಿಗರ ಶರಾಯಿ ಜೋಬು ತಲುಪಿಸಿದರೆ ಅವರೆಲ್ಲ ಹಂಗೇ ಮಗ್ಗ ಮಲಗೋದು ಖಾತರೀನೆ ಅಲ್ವಾ.....!



ಕ್ಲೀನ್‌ಗಳೇ ಎಲ್ಲ ಡರ್ಟಿಗಳೇ ಇಲ್ಲ

ಚರ್ಚ್ ಮೇಲಿನ ದಾಳಿ ಕುರಿತು ಸೋಮಶೇಖರ ಆಯೋಗ ನೀಡಿರುವ ವರದಿ ವಿರೋಧಿಸಿ ಪ್ರತಿಭಟನೆಗಳು ನಡೀತಾ ಅವೆ. ಈ ಆಯೋಗ ತಪ್ಪಿತಸ್ಥರು ಯಾರು ಅನ್ನೋದ ಕಂಡುಹಿಡಿಯೋದರ ಬದಲಿಗೆ ತಪ್ಪಿತಸ್ಥರು ಯಾರು ಅಲ್ಲ ಅಂತ ಹೇಳೋದ್ರಲ್ಲೆ ತೃಪ್ತಿ ಕಂಡದಂತೆ. ಅರೆ ಇದ್ರಲಿ ಪ್ರತಿಭಟಿಸೋದು ಏನದೆ ಅಂತಾವ. ಅವರೂ ಪೊಲೀಸ್ನೋರ ತರಾನೆ ಮಾಡವ್ರೆ. ಅವರೇನು ಮಾಡ್ತಾರೆ ಗಲಭೆಕೋರರರು ಅಂತ ಅನುಮಾನ ಬಂದೋರ್ನೆಲ್ಲ ತರುಬತರ್ತಾರೆ. ಆಮೇಲೆ ಒಬ್ಬೊಬ್ಬರ್ನೆ ವಿಚಾರಿಸ್ತಾ ಹೋಗ್ತಾರೆ. ಇವ್ನು ಅದ್ಯೋದೋನಲ್ಲ ಅಂತ ಮನವರಿಕೆ ಆದ್ಮೇಲೆ ಬುಡ್ತಾರೆ. ಇನ್ನೊಬ್ಬನ್ನ ವಿಚಾರಣೆ ಮಾಡ್ತಾರೆ. ಇವ್ನೂ ಅದ್ಯೋದೋನಲ್ಲ ಅಂತ ತಿಳಿದಮೇಲೆ ಅವನ್ನ ಬಿಟ್ಬು ಮೂರನೆಯವನ್ನ ಹಿಡ್ಕತಾರೆ. ಹಿಂಗೆ ಒಬ್ಬೊಬ್ಬರ್ನೆ ವಿಚಾರಣೆ ಮಾಡಿಮಾಡಿ ಕೊನೆಗೆ ಅಪರಾಧಿಗಳನ್ನ ಕಂಡುಹಿಡೀತಾರೆ. ಆಯೋಗದವರೂ ಹಂಗೇ ಮಾಡವ್ರೆ. ಮೊದಲು ಹಿಂದೂಪರ ಸಂಘಟನೆಗಳ ಮೇಲೆ ಆರೋಪ ಇತ್ತಲ್ಲ, ಅವರ ಕುಲಗೋತ್ರ ಎಲ್ಲಾನೂ ವಿಚಾರಿಸವ್ರೆ. ಆಗ ಅಲ್ಲಿರೋರೆಲ್ಲ ಸತ್ಕುಲ ಪ್ರಸೂತರು, ಸದ್ಗುಣಸಂಪನ್ನರು ಅಂತ ದೊಡ್ಡದೊಡ್ಡ ಕುರ್ಚೀಲಿ ಕುಂತಿದ್ರಲ್ಲ ಅವರೆಲ್ಲ ಸರ್ಟಿಫಿಕೇಟ್ ಕೊಟ್ಟವ್ರೆ. ಇಂತಿಂತೋರೆಲ್ಲ ಹಿಂಗೇಳಿದ್ಮೇಲೆ ಇವ್ರು ಅದ್ಯೋದೋರಲ್ಲ ಅಂತ ಅವರ ಕೈಬಿಟ್ಟವ್ರೆ. ಅಧಿಕಾರಿಗಳದ್ದೇನಾದ್ರೂ ಕಿತಾಪತಿ ಇದ್ದಾತಾ ಅಂತ ನೋಡವ್ರೆ. ಕಾನೂನ ಪರಿಪಾಲಿಸೋ ಜನ ಅವ್ರು, ಹಿಂಗೆಲ್ಲ ಮಾಡಿರೋದಿಲ್ಲ ಅನ್ಸದೆ. ಅವರ್ನೂ ಕೈಬುಟ್ಟವ್ರೆ. ಭಾಜಪ ಸರ್ಕಾರ ಏನಾದ್ರೂ ಕೈ ಆಡಿಸಿರಬಹುದಾ ಅಂತ ತಡ್ಕವ್ರೆ. ಅಲ್ಲಿರೋರೆಲ್ಲ ಬಾಯ್ಬುಟ್ರೆ ದೇವರ ಹೆಸರು ಹೇಳೋರು, ಹಿಂಗೆ ದೇವರ ಜಪ ಮಾಡೋರು ಹಿಂಗೆಲ್ಲ ಮಾಡಾರ ಅಂತ ಅವರ್ಗೂ 'ಕ್ಲೀನ್ ಚಿಟ್' ಕೊಟ್ಟವ್ರೆ. ಹಿಂಗೆ ಯಾರ್ಯಾರ ಮೇಲೆ ದಾಳಿ ಮಾಡಿದ ಆರೋಪ ಇತ್ತೊ ಅವರೆಲ್ಲ 'ಇವರ್ಗೂ ಕ್ಲೀನ್ ಚಿಟ್' 'ಇವರ್ಗೂ ಕ್ಲೀನ್ ಚೀಟ್' ಅಂತ ಬರ್ದವ್ರೆ. ಹಂಗಾರೆ 'ಡರ್ಟಿ ಚಿಟ್' ಯಾವನೂ ಇಲ್ವೆ, ಇದೆಲ್ಲ ಇದ್ಕಿದ್ದಂಗೆ ನಡೆದುಹೋಯ್ತಾ ಅಂದ್ರೆ.... 'ಡರ್ಟಿ ಚಿಟ್'ನೋವ್ರನ್ನ ಹಿಡಿದು ಹಾಕ್ತಿದ್ರೋ ಏನೋ. ಮತ್ಯಾಕೆ ಹಿಡೀಲಿಲ್ಲ ಅಂದ್ರೆ ಅಷ್ಟರಲ್ಲಿ ಏನಾಗಿತ್ತು ಅಂದ್ರೆ ಆಯೋಗ ಶುರು ಆಗಿ ಎರಡೂವರೆ ವರ್ಷ ಆಗಿತ್ತು, ಇನ್ನೂ ತಡ ಮಾಡಿದ್ರೆ ನ್ಯಾಯದಿಂದಲೇ ವಂಚಿಸಿದಂಗಾಯ್ತದಲ್ಲ ಅಂತಾವ ತರಾತುರೀಲಿ ವರದಿ ಒಪ್ಸವ್ರೆ. ಇವು ನಮ್ಗೆ ಒಪ್ಗೆ ಇಲ್ಲ ಅಪರಾಧಿಗಳ್ಯಾರು ಅನ್ನೋದ್ನ ತಿಳಿಸ್ಲೇಬೇಕು ಅಂತ ಚಂಡಿ ಹಿಡಿದ್ರೆ ಹೆಂಗೆ ಹೇಳಿ ... ನೀವೇಯ. ಟೈಂಸಾಲ್ದು ಕಣ್ರೀ.....

ಮಧ್ಯಂತರ ವರದೀಲಿ ಅದು ಯಾರು ಯಾರೋ ... ಗಲಭೇಲಿ ಶಾಮೀಲಾಗವ್ರೆ ಅಂತ ಹೇಳಿತ್ತಂತೆ. ... ಅವುರ್ಗೆ 'ಕ್ಲೀನ್ ಚಿಟ್' ಕೊಟ್ಟಿದ್ದಲ್ಲಾ ಅಂತಾ... ಹಿಂಗೇಳೋದು ಸರಿ ಇಲ್ಲ ಬುಡಿ. ಮಧ್ಯಂತರ ವರದಿ ಅಂತ ನೀಡೋದೆ, ಲಗುಬಗಿ ತಿಳಿಯೋಕೆ. ಇದೊಂತ... ಟೆಸ್ಟ್ ಡೋಸ್ ಇದ್ದಂಗೆ. ಅದಯಾಕೆ ಕೊಡ್ತಾರೆ ಹೇ... ಈ ರೋಗಿ ಇದಕ್ಕೆ ಅಲರ್ಜಿನೋ ಏನೋ ತಿಳ್ಕೋ... ಆಕಸ್ಮಾತ್ ಅಲರ್ಜಿ ಆದ್ರೆ ಡಾಕ್ಟರೇನ್ಮಾಡ್ತಾರೆ. ... ಬಿಸಾಕಿ ಬ್ಯಾರೇದ ಕೊಡ್ತಾರೆ. ಆಯೋಗದವರೂ ಅದ... ಮಾಡವ್ರೆ. ಅಲರ್ಜಿ ಆಗುತ್ತೆ ಅಂತ ಗೊತ್ತಾಗದೆ. ಅ... ಅದೇನ್ಮಾಡ್ತು, ಓಹೋ ತಪ್ಪಿತಸ್ತರು ಇವರೇಯ ಅಂ... ಬೊಟ್ಟು ಮಾಡಿ ತೋರ್ಸಿದ್ರೆ ಮನಸ್ಸಿಗೆ ಬೇಜಾರಾಯ್ತು... ಅಂದ್ಬುಟ್ಟು ಎಲ್ಲಾ ಒಳ್ಳೇರೇಯೆ ಅಂತ ಬರೀತು!

ಇದು ಯಾಕೆ ಹಿಂಗೆ ಮಾಡಿದ್ರು ಅಂ... ಆಯೋಗಗಳು ಕೆಲಸ ಮಾಡೋದೆ ಹಿಂಗೆ ಕಣ್ರಿ. ಇದೇ... ಮೊದಲನೇಯದೂ ಅಲ್ಲ, ಕೊನೇದೂ ಅ... ಕಾಲ್ದಿಂದಾಲೂ ಹಿಂಗೇ ನಡೀತಾ ಇರೋದು. ಆಯೋ... ರಚಿಸೋದೆ 'ಎಲ್ಲ ನ್ಯಾಯಯುತವಾಗಿ, ಕಾನೂನುಬದ್ಧವಾ... ನಡೆದಿದೆ' ಎಂದು ಬರೆಸಿಕೊಳ್ಳಲು. ಯಾವ್ದೋನಾದ... ಸರ್ಕಾರಾನ ಇಕ್ಕಟ್ಟಿಗೆ ಸಿಗಿಸಲಿ ಅಂತ ಆಯೋ... ರಚಿಸುತ್ತಾನಾ... ಇದೆಲ್ಲ ಗೊತ್ತಿದ್ದೂ ಗೊತ್ತಿದ್ದೂ ಪ್ರತಿಭಟಿಸ... ಅಂದ್ರೆ ಅವರ ತಲೆ ಒಳಗೆ ಏನಿದ್ದಾತು ಅಂತಾವ.....

ಎಚ್.ಎಲ್. ಕೇಶವಮೂರ್ತಿ



ಅಣಕ

ಲಿಂಗಾಯತರು ಹಿಂದೂಗಳಲ್ಲ, ಜಾತಿಭೇದ ನಮ್ಮ ಆಚರಣೆಯಲ್ಲ

ಹೊಗಳಿಕೆ ತೆಗಳಿಕೆ

ಸಕಾರಣಕ್ಕಾಗಿ ತಮಗಿರುವ ವಿವೇಚನಾ ಅಧಿಕಾರವನ್ನು ಬಳಸಿ ರಾಜ್ಯಪಾಲರು ಚಿದಾನಂದ ಮೂರ್ತಿಯವರಿಗೆ ಗೌರವ ಡಾಕ್ಟರೇಟ್ ಪದವಿಯನ್ನು ತಡೆಹಿಡಿದಿದ್ದನ್ನು ಸಾಹಿತ್ಯ ಸಮ್ಮೇಳನದಲ್ಲಿ ದೊಡ್ಡ ವಿಷಯವಾಗಿ ಪರಿವರ್ತಿಸಲು ಶ್ರೀ ಅನಂತಮೂರ್ತಿಯವರು ಮತ್ತು ಶ್ರೀ ಚಂಪಾರವರು ಕಾರಣಕರ್ತರಾದರು. ಈ ಮಹಾಶಯರೇ ಹಿಂದೆ ಅನೇಕ ಸಂದರ್ಭಗಳಲ್ಲಿ ಚಿದಾನಂದಮೂರ್ತಿಯವರ 'ಹಿಂದೂತ್ವ' ಪರ ವಾದವನ್ನು ಮತ್ತು ವಿಕೃತವಾದ ಮಂಡನೆಯನ್ನು ಖಂಡಿಸಿದ್ದರು ಮತ್ತು ಪ್ರಸ್ತುತ ಭಾಷಣದಲ್ಲೂ ಸ್ಪಷ್ಟಪಡಿಸಿದರು. ಇದನ್ನೇ ಕಾರಣವಾಗಿಟ್ಟುಕೊಂಡು ಸಮ್ಮೇಳನದಲ್ಲಿ ಇತರರು ರಾಜ್ಯಪಾಲರ ಕ್ರಮವನ್ನು ಪ್ರಶ್ನಿಸಿ ಎಲ್ಲಿಂದಲೋ ಬಂದವರಿಗೆ ಈ ನಾಡಿನ ಸಂಸ್ಕೃತಿ ಮತ್ತು ವಿದ್ವತ್ ಹೇಗೆ ಪರಿಚಯವಾಗುತ್ತೆ ಎನ್ನುವಷ್ಟರಮಟ್ಟಿಗೆ ಹೋಯಿತು.

ನಮ್ಮ ದೇಶದ ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಪಾಲರು ಕೇಂದ್ರದಿಂದ ನೇಮಕಗೊಂಡರೂ ನಮ್ಮ ದೇಶದವರೇ ಆಗಿರುತ್ತಾರೆ ಮತ್ತು ನಮ್ಮ ದೇಶದ ಭಾಷೆ-ಸಂಸ್ಕೃತಿಗಳ ಪರಿಚಯವಿದ್ದೇ ಇರುತ್ತದೆ. ಅಷ್ಟಕ್ಕೂ ನಮ್ಮ ರಾಜ್ಯಪಾಲರು ಘನ ವಿದ್ವಾಂಸರು ಮತ್ತು ಕಾನೂನು ಪಂಡಿತರೂ ಆಗಿದ್ದಾರೆ. ಇಂತಹವರು ರಬ್ಬರ್ ಸ್ಟಾಂಪಿನಂತೆ ನಡೆದುಕೊಳ್ಳದೆ ತಮಗೆ ರಾಜ್ಯಾಂಗದತ್ತವಾಗಿರುವ ಅಧಿಕಾರದಡಿಯಲ್ಲಿ ಕಾರ್ಯನಿರ್ವಹಿಸಿದ್ದಾರೆ. ಚರ್ಚ್ ಮೇಲಿನ ದಾಳಿಯನ್ನು ಬೆಂಬಲಿಸಿ ಹೇಳಿಕೆ ನೀಡಿದ ಕಾರಣಕ್ಕಾಗಿ ತಡೆಹಿಡಿಯಲಾಗಿದೆ ಎಂಬ ಸ್ಪಷ್ಟನೆಯನ್ನು ರಾಜ್ಯಪಾಲರು ನೀಡಿದ್ದಾರೆ. ಇಷ್ಟಾದರೂ ಬಲವಂತದಿಂದ ಪಡೆಯುವ ಗೌರವ ಡಾಕ್ಟರೇಟ್‌ನಲ್ಲಿ ಸ್ವಾರಸ್ಯ ಅದೇನಿದೆಯೋ? ಚಿದಾನಂದಮೂರ್ತಿಯವರಿಗೇ ಗೊತ್ತು

-ಎಚ್.ಕೆ. ಈರಪ್ಪ, ಬೆಂಗಳೂರು

ನಿಜಕ್ಕೂ ಸುಸ್ತಾಗಿ ಬಿಡುವಂಥದ್ದು 'ಲಿಂಗಾಯತರು ಹಿಂದೂಗಳಲ್ಲ' ಈ ಸಂದರ್ಶನದಲ್ಲಿ ಮಾತೆ ಮಹಾದೇವಿಯವರ ಪ್ರಬುದ್ಧ ನುಡಿ ವಿಚಾರಗಳ ಮಂಡನೆಯ ಕಂಡು! ಈ ಅದ್ಭುತ ಬದಲಾವಣೆ ಕ್ಷಣಿಕವಲ್ಲ ಎಂಬಂತಿದೆ. ಕಾದು ನೋಡುವಾ. 'ಲಿಂಗಾಯತರು ಹಿಂದೂಗಳಲ್ಲ' ಎಂಬಂಥ ನುಡಿಯನ್ನು 'ನಡೆ' ರೂಪದಲ್ಲಿ ಕಾಣಿಸಿ ಹಿಂದೂಧರ್ಮದಿಂದ ಶೋಷಿಸಲ್ಪಟ್ಟ ಸಂಸ್ಕೃತಿ ನಿಷ್ಠ ತಳ ಸಮುದಾಯಗಳಿಗೆ ಲಿಂಗಾಯತ ಧರ್ಮ ನೀಡಿದವರು ಬಸವಣ್ಣನವರು ಮತ್ತು ಅನುಭವ ಮಂಟಪವು. ಈ ಮಾನವೀಯ ತಿಳಿಜಲವನ್ನು ಕುಡಿಯಲಾಗದ 'ಲಿಂಗಾಯತ ವೈದಿಕರು' ಜಾತಿಪದ್ಧತಿ ಭೇದಭಾವವನ್ನು ಕಟ್ಟಿ, ಜಾತಿಗಳ ನಿರ್ಮಿಸಿ ಹಿಂದೂಧರ್ಮದ ಶೂದ್ರರಾದರು. ಧರ್ಮವಾಗಿ ಶ್ರೇಷ್ಠವೆನಿಸಿದ್ದ ಲಿಂಗಾಯತ ಧರ್ಮ ಜಾತಿಯಾಗಿ ಅತಿಕೆಟ್ಟ ಜಾತಿಯೆಂಬ ಹೆಸರು ಪಡೆಯಿತು.

ಗುಲಗಂಜಿ ಗಾತ್ರದ ಸಮಾಧಾನವೆನೆಂದರೆ, ಈಗಲೂ ಅಲ್ಲಲ್ಲಿ ಬಸವಣ್ಣನ ಜಾತ್ಯತೀತ ಮೌಲ್ಯವನ್ನು ಪ್ರತಿಪಾದಿಸುವ ಬೌದ್ಧಿಕ ಶ್ರೀಮಂತಿಕೆಯ ಮಠಗಳು 'ಲಿಂಗಾಯತರು ಹಿಂದೂಗಳಲ್ಲ, ಜಾತಿಭೇದ ನಮ್ಮ ಆಚರಣೆಯಲ್ಲ' ಎನ್ನುತ್ತವೆ. ದುರಂತವೆಂದರೆ, ಕೋಟ್ಯಾಧೀಶ ಯಾವುದೇ ಸರ್ಕಾರದ ಹಣಕ್ಕೆ ಬಾಯಿಬಿಡುವ ಶ್ರೀಮಂತ ಲಿಂಗಾಯತ ಮಠದ 'ವೈದಿಕತ್ವ-ಗೋವುಗಳು' ನಾವು ಹಿಂದೂ ಧರ್ಮಕ್ಕೆ ಸೇರಿದವರೆಂದು ಘರ್ಜಿಸುತ್ತಿದೆ! ಸಂಸ್ಕೃತ ಭಾಷೆಯ, ಸಂಘಪರಿವಾರದ ಹಿಂಬಾಲವೂ ಆಗಿದೆ... ಇದನ್ನು ಕತ್ತರಿಸಬೇಕಿದೆ.

ಅಲ್ಲಮ, ಅಕ್ಕಮಹಾದೇವಿ, ಬಸವಣ್ಣನ 12ನೇ ಶತಮಾನವು, 14ನೇ ಶತಮಾನದ ಮಂಟೇಸ್ವಾಮಿ ಮಲೆಮಾದೇಶ್ವರ ಪರಂಪರೆಯ ಸೊಲ್ಲು ಎಲೆಮರೆಕಾಯಿಯಂತೆ ಇನ್ನೂ ಬೆಳಗುತ್ತಾ ತೆಳುವಾಗಿ ಉಸಿರಾಡುತ್ತಿದೆ ಎನ್ನುವುದಕ್ಕೆ ಮಾತೆ ಮಹಾದೇವಿಯವರು ಸ್ಪಷ್ಟಪಡಿಸಿದ ವಿಚಾರಗಳೇ ಸಾಕ್ಷಿ. ಈ ಹಾದಿಯಲ್ಲಿ ಈಗಾಗಲೇ ವೀರಭದ್ರಚೆನ್ನಮಲ್ಲಸ್ವಾಮಿ ಮುರುಘಾಮಠ ಶಿವಮೂರ್ತಿ ಸ್ವಾಮಿ, ಸಾಣೇಹಳ್ಳಿ ಪಂಡಿತಾರಾಧ್ಯ ಸ್ವಾಮಿ ಇಂಥವರು ಸಾಗಿದ್ದಾರೆ, ಸಾಗುತ್ತಿದ್ದಾರೆ...

ಈಗಾಗಲೇ ಹಿಂದೂ ಧಾರ್ಮಿಕತೆಯಲ್ಲಿ ಅದರ ಹೆಸರುಗಳಲ್ಲಿ ಆಚರಣೆಗಳಲ್ಲಿ ಹರಕೆಗಳಲ್ಲಿ ಕಾವಿಬಣ್ಣದಲ್ಲಿ ನೂರಾರು ದೇವರ ಭಕ್ತಿಯಲ್ಲಿ ಏಕವಾಗಿ ಬ್ರೈನ್‌ವಾಷ್ ಆಗಿರುವಂಥದ್ದನ್ನು 'ತಿದ್ದಿ' ಹೊರತರುವ ಸವಾಲು ಬಹುಮುಖರೂಪದ್ದು...

ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಮೂರು ಕೋಟಿ ದೇವರು ಎಂದು ಬಡಬಡಿಸುವ ಹಿಂದೂ ಧರ್ಮಿಷ್ಠ ವ್ಯಾಪಾರಿಗಳಿಗೆ ಬಸವಣ್ಣನ ಉತ್ತರ ಹೀಗಿದೆ:

ನಂಬದ ಹೆಂಡತಿಗೆ ಗಂಡನೊಬ್ಬನೆ ಕಾಣಿರೋ
ನಂಬಬಲ್ಲ ಭಕ್ತರಿಗೆ ದೇವನೊಬ್ಬನೇ ಕಾಣಿರೋ
ಬೇಡ ಬೇಡ, ಅನ್ಯ ದೈವದ ಸಂಗಹೊಲ್ಲ!
ಬೇಡ ಬೇಡ, ಪರದೈವ ಸಂಗಹೊಲ್ಲ!
ಬೇಡ ಬೇಡ, ಅನ್ಯ ದೈವವೆಂಬುದು ಹಾದರ ಕಾಣಿರೋ,
ಕೂಡಲಸಂಗಮದೇವ ಕಂಡತೆ ಮೂಗು ಕೊಯ್ವ ಕಾಣಿರೋ

ಜಾತಿಯತೆ, ಅಸ್ಪೃಶ್ಯತೆ, ಹಿಂಸೆ, ಭೇದಭಾವ ಇವು ಹಿಂದೂಧರ್ಮದ ತಾಯಿಬೇರು. ಇದರ ಜೊತೆಗೆ ಎಲೆ, ಬೇರು, ಬಿಳಲು ಬಹು ವಿಕಾರದಲ್ಲಿ ವಿಸ್ತರಿಸುತ್ತಿದೆ.; 'ಏಕತೆ'ಯ ಅಸ್ತ್ರ ಬಳಸಿ. ಬಿ.ಆರ್. ಅಂಬೇಡ್ಕರ್ ಹೇಳುತ್ತಾರೆ 'ಅಸ್ಪೃಶ್ಯರು ಹಿಂದೂಗಳಲ್ಲ; ಒಂದು ವಿಭಿನ್ನ ಸಮಾಜ' ಎಂದು.

ಅಂದಿನ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪರಿಗೆ ಡಾ.ಅಂಬೇಡ್ಕರ್ ಈ ರೀತಿ ಪತ್ರ ಬರೆದಿದ್ದರು. "ಬಸವಣ್ಣ ಒಬ್ಬ ಶ್ರೇಷ್ಠ ತತ್ವಜ್ಞಾನಿ ಹಾಗೂ ಸಂತರಾಗಿದ್ದರು. ಅವರ ವಿಚಾರಗಳು ವಚನಗಳು ವಿಶ್ವದಾದ್ಯಂತ ಹರಡಬೇಕಿತ್ತು. ಆದರೆ ನೀವು ಲಿಂಗಾಯತ ಜನ ಅವರನ್ನು ನಿಮ್ಮ ಜಾತಿಯ ಮುಖಂಡರನ್ನಾಗಿ ನಿಮ್ಮ ಸಮುದಾಯದ ನಿಮ್ಮ ರಾಜ್ಯದ ಸೀಮೆಯನ್ನು ದಾಟದಂತೆ ಮಾಡಿ ಬಿಟ್ಟಿರಿ" ಎಂದು. ದಲಿತರಿಗೆ ಮೀಸಲಾತಿ ನೀಡುವುದನ್ನು ವಿರೋಧಿಸುತ್ತಿದ್ದ ಎಸ್.ನಿಜಲಿಂಗಪ್ಪನವರಿಗೆ ಅಂಬೇಡ್ಕರ್ ಅರ್ಥವಾಗಿರಲಿಲ್ಲ, ಹಾಗೆ ಬಸವಣ್ಣನೂ ಕೂಡ...

ಯಡಿಯೂರಪ್ಪರ ನಡೆ-ನುಡಿ-ಲೂಟಿ-ದೇವರು ಎಲ್ಲವೂ ಪಕ್ಕಾ ಬ್ರಾಹ್ಮಣ ಪಂಚಾಚಾರ್ಯ ಶೈಲಿಯಲ್ಲಿದೆ. ಕೆ.ವಿ.ಅಕ್ಷರರ ಕೀಳು ಬರವಣಿಗೆ ಕೂಡಾ...

-ಮೂರ್ನಾಡ್ ರಾಮ್ ಸಿ., ಮಡಿಕೇರಿ

ತಪ್ಪು ಮಾಡಿದವರನ್ನ ಶಿಕ್ಷಿಸಬಾರದೇ?

23.02.11 ರ ಸಂಚಿಕೆಯಲ್ಲಿ 'ದಲಿತ ವಿರೋಧಿ ಸಿಇಓ ಸುಂದರ್ ಧನದಾಹಿಯೂ ಹೌದು' ಎಂಬ ತಲೆಬರಹದಡಿ ನನ್ನ ಮೇಲೆ ಮಾಡಿದ ಆರೋಪಗಳು ಸತ್ಯಕ್ಕೆ ದೂರವಾದವುಗಳಾಗಿವೆ. 'ಪತ್ರಿಕೆ'ಯ ಕಾಯಂ ಓದುಗನೂ ಆಗಿರುವ ನನಗೆ ಇದರಿಂದ ನೋವಾಗಿದೆ. ನನ್ನನ್ನು ದಲಿತ ವಿರೋಧಿ ಎಂದು ಬಿಂಬಿಸಿರುವುದೇ ವಾಸ್ತವವನ್ನು ಮರೆಮಾಚಲು ಅವಕಾಶ ನೀಡಿದಂತಾಗಿದೆ. ತಪ್ಪು ಮಾಡಿದ ಅಧಿಕಾರಿಗಳು, ನೌಕರರು ಯಾವುದೇ ಜಾತಿಗೆ ಸೇರಿದವರಾಗಿದ್ದರೂ ಸೂಕ್ತ ಶಿಕ್ಷೆ ಅನುಭವಿಸಬೇಕಾಗುತ್ತದೆ. ಈ ರೀತಿಯಲ್ಲೇ ಅನೇಕರು ಶಿಕ್ಷೆಗೆ ಗುರಿಯಾಗಿದ್ದಾರೆ. ಚಾಮರಾಜನಗರ ಜಿಲ್ಲೆಯಲ್ಲಿ ಶೇ. 60 ರಷ್ಟು ಪರಿಶಿಷ್ಟ ಜಾತಿ-ವರ್ಗದ ನೌಕರರಿರುವುದರಿಂದ ಶಿಕ್ಷೆಯಲ್ಲಿ ಅವರ ಪಾಲೇ ಜಾಸ್ತಿಯಿರಬಹುದು. ಆ ಕಾರಣಕ್ಕಾಗಿಯೇ ಶಿಕ್ಷೆಗೆ ಗುರಿಪಡಿಸಿದವರನ್ನು 'ದಲಿತ ವಿರೋಧಿ' ಎಂದು ಬಿಂಬಿಸುವುದು ಆರೋಗ್ಯಕಾರಿ ಬೆಳವಣಿಗೆಯಲ್ಲ.

ಇನ್ನುಳಿದಂತೆ ಪ್ರಮುಖ ಕಡತಗಳಿಗೆ ಸಹಿ ಹಾಕುವ ಅಧಿಕಾರ ಇರಬೇಕಾದವರ ಬಳಿಯೇ ಇದೆ. ಪರ್ಸೆಂಟೇಜ್ ಫಿಕ್ಸ್ ಮಾಡಿ ಹಣ ಮಾಡಿಕೊಳ್ಳುತ್ತಿದ್ದೇನೆಂಬ ಆರೋಪದಲ್ಲೂ ಹುರುಳಿಲ್ಲ. ಇಂಗುಗುಂಡಿಯಲ್ಲೂ ಲಕ್ಷಾಂತರ ರೂಪಾಯಿ ಕೊಳ್ಳೆ ಹೊಡೆಯಲಾಗಿದೆಯೆಂಬ ಗುರುತರ ಆರೋಪವನ್ನೂ ಮಾಡಲಾಗಿದೆ. ಆದರೆ ಈ ಬಗೆಗಿನ ದಾಖಲೆಗಳು ಪಾರದರ್ಶಕವಾಗಿದ್ದು ಅದನ್ನು ಪರಿಶೀಲಿಸಬಹುದು. ನಾನು ಅಧಿಕಾರ ವಹಿಸಿಕೊಂಡ ಮೇಲೆ ಅಧಿಕಾರಿ/ನೌಕರರ ಹಾಜರಾತಿ ಮುಂತಾದವುಗಳನ್ನು ಬಿಗಿಗೊಳಿಸಿದ ಪರಿಣಾಮವಾಗಿಯೇ ಈ ರೀತಿ ಅಪವಾದಗಳಿಗೆ ಗುರಿಯಾಗಬೇಕಾಗಿ ಬಂದಿದೆ. ಈ ವಿಚಾರಗಳ ಬಗ್ಗೆ ಗುಮಾನಿಗಳಿದ್ದರೆ ತನಿಖೆ ನಡೆಸಬಹುದು.

-ಕೆ. ಸುಂದರ ನಾಯ್ಕ, ಮುಖ್ಯಕಾರ್ಯನಿರ್ವಾಹಕ ಅಧಿಕಾರಿ, ಜಿ.ಪಂ., ಚಾಮರಾಜನಗರ



ಕೂಲ್ ಮಗಾ ಕೂಲ್!

...ಸಿಗೆಯಲ್ಲಿ ಕೂಲ್" ಹೀಗೆಂದು ...ಮು ತಿರುಗಾಡುತ್ತಿದ್ದಾರೆ ಗೋಲ್ಡನ್ ...ೇಶ್. ಅವರ ಚೊಚ್ಚಲ ನಿರ್ದೇಶ...ಲ್' ಚಿತ್ರ ಆರಂಭದಲ್ಲಿ ವಾದ ...ಳಲ್ಲಿ ಸಿಲುಕಿಕೊಂಡಿದ್ದರೂ ...ದರ ಚಿತ್ರೀಕರಣ ಯಶಸ್ವಿ ...ುಕ್ತಾಯಗೊಂಡಿದೆ. ಅದರ ...ಗಣೇಶ್ ಮೊನ್ನೆ ಶಬರಿ ...ಯಾತ್ರೆ ಮಾಡಿ ಅಯ್ಯಪ್ಪನ ...ಪಡೆದು ವಾಪಸ್ಸಾಗಿದ್ದಾರೆ. ... ಜೀವನದಲ್ಲಿ ನಡೆದ ...ಲ್ಲಾ ಅನಿರೀಕ್ಷಿತವಾದದ್ದು. ...ರೋ ಆದದ್ದು, ಮದುವೆ ... ಹಾಗೆಯೇ ನಿರ್ದೇಶಕ ...ದ್ಧಿ ಪಡೆದದ್ದು ...ಎಂದು ಗಣೇಶ್ ...್ ಶೈಲಿಯಲ್ಲಿ ...ಾತನಾಡಿದರು. ಹಾಗಂತ ಮುಂದೆಯೂ ನಿರ್ದೇಶಕ ...ಮುಂದುವರೆಯಬೇಕೆಂಬ ಕ್ರೇಜ್ ಅವರಿಗೆ ಇಲ್ಲವಂತೆ; ... ಒಂದೇ ಚಿತ್ರಕ್ಕೆ ನಿರ್ದೇಶಕನ ಕೆಲಸದಿಂದ ಸುಸ್ತಾಯಿ...ು ಅಲ್ಲವಂತೆ.

...ಮ್ಮ ಕೂಲ್ ಚಿತ್ರದಲ್ಲಿ ನಿರ್ದೇಶಕ ಮತ್ತು ಹೀರೋ ...ಮೂರು ಪ್ರೇಕ್ಷಕರ ಮನಸ್ಸನ್ನು ಗೆಲ್ಲುತ್ತಾರೆ?" ಎಂಬ ...ಗಣೇಶ್ ಕೂಲಾಗಿ ಉತ್ತರಿಸಿದ್ದು ಹೀಗೆ: "ನಾನು ...ಲ್ಲಿ ಯಾರಿಗೂ ಸಂದೇಶ, ಪಾಠ ಹೇಳಲು ಹೊರಟಿಲ್ಲ. ...ಳಲು ಇದು ಸರಿಯಾದ ವಯಸ್ಸೂ ಅಲ್ಲ. ನನ್ನ ...ನ್ನ ಸಿನಿಮಾ ಎರಡು ಗಂಟೆ ಹತ್ತು ನಿಮಿಷಗಳ ...ಪೂರ್ಣವಾಗಿ ರಂಜಿಸುತ್ತದೆ. ನನ್ನ 'ಕೂಲ್' ಚಿತ್ರ ...ಾಗಿಯೂ ಇಡೀ ಕುಟುಂಬದ ಸದಸ್ಯರು ಕುಳಿತು ...ುವಂತಿದೆ."

...ಹಾಗೆ ಕಳೆದ ವರ್ಷ ಗಣೇಶ್ ಬಗೆಗಿನ ಕ್ರೇಜ್ ...ಪಾತಾಳಕ್ಕಿಳಿಯಿತು. ಪರಿಣಾಮವಾಗಿ ಬಾಕ್ಸಾಫೀಸ್‌ನಲ್ಲಿ ...ಚಿತ್ರಗಳು ಮುಗ್ಗರಿಸಿದವು. ಈ ಕಾರಣದಿಂದಲೋ ...'ಕೂಲ್' ಚಿತ್ರ ಸಂಪೂರ್ಣಗೊಳ್ಳಲು ಸುಮಾರು ...ಗಳೇ ಹಿಡಿದಿದೆ.

...ಂಬರುವ ದಿನಗಳಲ್ಲಿ ಕ್ರಿಕೆಟ್ ಹಬ್ಬ ಮತ್ತು ಪರೀಕ್ಷಾ ...ತೆ ಇರುತ್ತಾದ್ದರಿಂದ 'ಕೂಲ್' ಚಿತ್ರದ ಬಿಡುಗಡೆಯನ್ನು ...ಹಾಕಿದ್ದೇವೆ. ಈ ಕ್ರಿಕೆಟ್‌ನೊಂದಿಗೆ ಈಗ ಮನ...ೂ ಮಿಕ್ಸ್ ಆಗಿರುವುದರಿಂದ ಮತ್ತು ಮನರಂಜನೆ ...ಡುವ ನಮ್ಮ ಜನ ಕೂಡಾ ಕ್ರಿಕೆಟ್‌ನಲ್ಲಿ ಭಾಗವಹಿ...ದರಿಂದ ಇಂದು ಕ್ರಿಕೆಟ್ ಬರೀ ಒಂದು ಆಟವಾಗಿ ... ಅದು ಮನರಂಜನೆಯ ಮಾಧ್ಯಮವೂ ಹೌದು.


ಆ ಕಾರಣದಿಂದಲೇ ನಾನು ಕ್ರಿಕೆಟ್ ಹಬ್ಬ ಮುಗಿದ ನಂತರವೇ 'ಕೂಲ್' ಬಿಡುಗಡೆ ಮಾಡುತ್ತೇನೆ" ಎಂದು ಗಣೇಶ್ ಹೇಳಿದರು.

"ಈ ಚಿತ್ರದ ನಾಯಕ, ನಿರ್ದೇಶಕ ಮತ್ತು ನಿರ್ಮಾಪಕ ಹೀಗೆ ನೀವು ಮೂರು ಪಾತ್ರಗಳಲ್ಲಿ ಕಾಣಿಸುವುದರಿಂದ ಚಿತ್ರದ ಸೋಲು ಅಥವಾ ಗೆಲುವಿಗೆ ನೀವೇ ಕಾರಣರಾಗುತ್ತೀರಲ್ಲವೇ?" ಎಂಬ ಪ್ರಶ್ನೆಗೆ ಗಣೇಶ್ ಉತ್ತರಿಸಲಿಲ್ಲ. ಬದಲಾಗಿ ಹೊಟ್ಟೆ ತುಂಬಾ ನಕ್ಕು "ನೋಡಿ ಸಾರ್, ಬೇಸಿಗೆಯ ಝಳ ಝಳ ಬಿಸಿಲಿನಲ್ಲೂ ನಾನು 'ಕೂಲ್' ಚಿತ್ರ ಬಿಡುಗಡೆ ಮಾಡುತ್ತೇನೆ ಅಂದರೆ ನಾನೆಷ್ಟು ಕೂಲಾಗಿದ್ದೇನೆ ಎಂದು ನೀವೇ ಊಹಿಸಿ" ಎಂದರು.

ಒಂದು ಮಾತಂತೂ ನಿಜ: ಗಣೇಶ್ ಈ ಹಿಂದಿನಂತೆ ಗಾಂಧಿನಗರದ ನಿರ್ಮಾಪಕ ಮತ್ತು ನಿರ್ದೇಶಕರ ಡಾರ್ಲಿಂಗ್ ಆಗಿ ಉಳಿದಿಲ್ಲ. ಇದೇ ಹೊತ್ತಿಗೆ 'ಕೂಲ್' ಚಿತ್ರಕ್ಕೆ ಸಂಬಂಧಿಸಿದಂತೆ ಗಲಾಟೆ ನಡೆದಾಗ ನಿರ್ದೇಶಕರ ಸಂಘವು ಗಣೇಶ್ ವಿರುದ್ಧ ಸಮರ ಸಾರಿತ್ತು. ಇಂತಹ ಕ್ಲಿಷ್ಟಕರ ಸಂದರ್ಭದಲ್ಲಿ ನಾಯಕನ ಜವಾಬ್ದಾರಿಯ ಜೊತೆಗೆ ನಿರ್ದೇಶನದ ಜವಾಬ್ದಾರಿಯನ್ನೂ ವಹಿಸಿಕೊಂಡ ಗಣೇಶ್ ಪಾಲಿಗೆ ಈ ಚಿತ್ರ 'ಮಾಡು ಇಲ್ಲವೇ ಮಡಿ' ಆಗಿದೆ. 'ಕೂಲ್' ಚಿತ್ರ ಬಾಕ್ಸಾಫೀಸ್‌ನಲ್ಲಿ ಗೆದ್ದರೆ ನಿರ್ಮಾಪಕರು ಮತ್ತು ನಿರ್ದೇಶಕರುಗಳು ಹಳೆಯ ಕಹಿಗಳನ್ನು ಮರೆತು ಮತ್ತೆ ಗಣೇಶನ ಮನೆ ಬಾಗಿಲು ತಟ್ಟಬಹುದು. ಒಂದು ವೇಳೆ 'ಕೂಲ್' ಮುಗ್ಗರಿಸಿದರೆ ಗಣೇಶ್ ಏಕಾಂಗಿಯಾಗುವ ಸಾಧ್ಯತೆ ಇದ್ದೇ ಇದೆ. 'ಕೂಲ್' ಗಣೇಶ್ ಪಾಲಿಗೆ ತಂಗಾಳಿ ಆಗುತ್ತದೋ ಅಥವಾ ಸುಡುವ ಕೆಂಡವಾಗುತ್ತದೋ ಎಂದು ನೋಡುವುದಕ್ಕೆ ಬೇಸಿಗೆತನಕ ಕಾಯಬೇಕು.

● ಶೆಣೈ

ಸೌಂದರ್ಯಾಳ ಸಿನೆಮಾ ಸದ್ದಡಗಿದೆ



ಜಯಮಾಲಾ ಮಗಳು ಸೌಂದರ್ಯ ನಟಿಸುತ್ತಿರುವ ತೆಲುಗು ಚಿತ್ರ ಅರ್ಧಕ್ಕೆ ನಿಂತುಹೋಗಿದೆಯೇ? ಹೀಗೊಂದು ಚರ್ಚೆ ಗಾಂಧಿನಗರದಲ್ಲಿ ನಡೆಯುತ್ತಿದೆ.


ಕೆಲವರ ಪ್ರಕಾರ ಆ ಚಿತ್ರ ಆರಂಭವಾಗಲೇ ಇಲ್ಲ! ಇನ್ನೂ ಕೆಲವರ ಪ್ರಕಾರ ಆ ಚಿತ್ರ ಅರ್ಧಕ್ಕೆ ನಿಂತುಹೋಗಿದೆ. ಹಾಗೆಯೇ ಇನ್ನೂ ಹಲವರ ಪ್ರಕಾರ ಚಿತ್ರದ ನಾಯಕಿ ಸೌಂದರ್ಯ ಈಗ ಮತ್ತೆ ತನ್ನ ವಿದ್ಯಾಭ್ಯಾಸಕ್ಕೆ ಹಿಂದಿರುಗಿದ್ದಾಳೆ. ಅವರಲ್ಲಿ ಯಾರು ಸರಿ ಗೊತ್ತಿಲ್ಲ. ಆದರೆ ಒಂದು ಮಾತಂತೂ ನಿಜ: ಆ ಚಿತ್ರದ ಬಗ್ಗೆ ಎಲ್ಲೂ ಅಂತಹ ದೊಡ್ಡ ಸುದ್ದಿ ಕೇಳಿಬಂದಿಲ್ಲ.

ಯಾರೇ ಒಬ್ಬರು ಚಿತ್ರರಂಗದಲ್ಲಿ ಎಷ್ಟೇ ಪವರ್‌ಫುಲ್ ಆಗಿದ್ದರೂ ಕೆಲವೊಮ್ಮೆ ಸಂದರ್ಭಗಳು ಅವರನ್ನು ಹಿಂಡಿಹಿಪ್ಪೆಯಾಗಿಸಿದ್ದ ಅನೇಕಾನೇಕ ಉದಾಹರಣೆಗಳಿವೆ. ಕನ್ನಡ ಚಿತ್ರರಂಗದಲ್ಲಿ ಸುಮಾರು ಮೂರು ದಶಕಗಳ ಕಾಲ ನಾಯಕಿಯಾಗಿ ರಾರಾಜಿಸಿದ, ಅನಂತರ ಫಿಲ್ಮ್ ಚೇಂಬರ್‌ನ ಅಧ್ಯಕ್ಷೆಯಾಗಿಯೂ ಮೆರೆದ ಜಯಮಾಲಾ ತನ್ನ ಮಗಳನ್ನು ಪರಭಾಷೆಯಿಂದ ಚಿತ್ರರಂಗಕ್ಕೆ ಪರಿಚಯಿಸುವ ಸಾಹಸಕ್ಕೆ ಕೈಹಾಕಬಾರದಿತ್ತು ಎಂಬ ಮಾತು ಈ ಸಂದರ್ಭದಲ್ಲಿ ಕೇಳಿಬರುತ್ತಿದೆ. ಯಾಕೆಂದರೆ ಸೌಂದರ್ಯ ಕನ್ನಡ ಚಿತ್ರರಂಗದಿಂದಲೇ ನಾಯಕಿಯಾಗಿ ಚಿತ್ರರಂಗಕ್ಕೆ ಆರಂಗ್ರೇಟಂ ಮಾಡಿದ್ದರೆ ಯಾವ ಸಮಸ್ಯೆಯೂ ಇರುತ್ತಿರಲಿಲ್ಲ.

ಅದೇನೇ ಇರಲಿ, ಸೌಂದರ್ಯ ಎಂಬ ಈ ಅಪ್ಪಟ ಕನ್ನಡದ ಹುಡುಗಿ ಆದಷ್ಟು ಬೇಗ ಕನ್ನಡದಲ್ಲಿ ನಾಯಕಿಯಾಗಿ ಚಿಗುರಲಿ..... ●



ಶಮ್ಮಿ ಇನ್ ಲವ್?



ತಮಿಳು ಹೀರೋ ಆರ್ಯನ ಜತೆ ಕನ್ನಡದ ಹುಡುಗಿ ಶರ್ಮಿಳಾ ಮಾಂಡ್ರೆ ಸಿಕ್ಕಸಿಕ್ಕಲ್ಲಿ ಡೇಟಿಂಗ್ ನಡೆಸುತ್ತಿದ್ದಾಳಂತೆ. ಇದನ್ನು ಕಂಡವರು "ಇವರಿಬ್ಬರೂ ಹೊಸ ಲವರ್‌ಗಳಾಗಿದ್ದಾರೆ" ಎಂದು ಗುಲ್ಲೆಬ್ಬಿಸಿದ್ದಾರಂತೆ. ಮಂಗಳೂರಿನ ಹುಡುಗ ವಿನಯ್ ರೈ ನಟಿಸುತ್ತಿರುವ ತಮಿಳಿನ 'ತಿಳ್ಳು ಮುಳ್ಳು' ಚಿತ್ರದಲ್ಲಿ ಶರ್ಮಿಳಾ ಮಾಂಡ್ರೆ ಹೀರೋಯಿನ್ನು. ಈ ಚಿತ್ರದಲ್ಲಿ 'ನಾನ್ ಕಡವುಲ್' ಖ್ಯಾತಿಯ ಆರ್ಯ ಕೂಡಾ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದಾನೆ.

ಆದರೆ ಈ ವಿಚಾರವಾಗಿ ಸ್ವತಃ ಮಾಂಡ್ರೆಯನ್ನು ಯಾರಾದರೂ ಪ್ರಶ್ನಿಸಿದರೆ ಹುಡುಗಿ ಎಗರೆಗರಿ ಬೀಳುತ್ತಾಳಂತೆ. "ನಾನು ನಟಿಸಿದ ಎಲ್ಲಾ ಚಿತ್ರಗಳ ನಾಯಕರ ಜತೆ ನಾನು ಫ್ರೆಂಡ್ಲಿಯಾಗಿರ್ತೀನಿ. ಆರ್ಯ ಕೂಡ ಒಬ್ಬ ಫ್ರೆಂಡ್. ನಾನು 'ಕರಿಚಿರತೆ' ಚಿತ್ರದ ಶೂಟಿಂಗ್‌ನಲ್ಲಿ ತೊಡಗಿದ್ದಾಗ ಅದೇ ಲೊಕೇಶನ್‌ನಲ್ಲಿ ಆರ್ಯನ ಚಿತ್ರವೂ ಚಿತ್ರೀಕರಣಗೊಳ್ಳುತ್ತಿತ್ತು. ಆಗ ನಾವಿಬ್ಬರೂ ಪ್ರತ್ಯೇಕವಾಗಿ ಭೇಟಿಯಾಗಿದ್ದೆವು. ಹೀಗಾಗಿ ಇಂಥ ರೂಮರುಗಳು ಹಬ್ಬಿರಬಹುದು. ದಯವಿಟ್ಟು ನನ್ನ ಮಾತು ನಂಬಿ ನಂಬಿ ನಂಬಿ" ಎಂದು ಟೇಬಲ್ಲು ಕುಟ್ಟುತ್ತಿದ್ದಾಳೆ.

ಖಳನಾಯಕನೇ ಹೀರೋ



ಮೊನ್ನೆ ಪ್ರಜ್ವಲ್ ದೇವರಾಜ್ ನಟಿಸಿರುವ 'ಕೋಟೆ' ಚಿತ್ರ ಬಿಡುಗಡೆಯಾಯಿತು. ಆ ಚಿತ್ರ ಬಿಡುಗಡೆಯಾದ ಮರುದಿನವೇ ಅದರ ನಿರ್ಮಾಪಕ ಮಂಜುನಾಥ್ ಒಂದು ಪತ್ರಿಕಾಗೋಷ್ಠಿ ಕರೆದರು. ಅಂತಹ ಗೋಷ್ಠಿಯನ್ನು ಗಾಂಧಿನಗರದ ಭಾಷೆಯಲ್ಲಿ 'ಫಿಲ್ಮ್ ಸಕ್ಸಸ್ ಪ್ರೆಸ್‌ಮೀಟ್' ಎಂದು ಕರೆಯುತ್ತಾರೆ. ಆದರೆ ಒಂದೇ ದಿನದಲ್ಲಿ ಚಿತ್ರ ಯಶಸ್ಸು ಕಾಣುತ್ತದೆ ಎಂಬ ತೀರ್ಮಾಣಕ್ಕೆ ನಿರ್ಮಾಪಕ ಹೇಗೆ ಬಂದರೋ ಗೊತ್ತಿಲ್ಲ. ಆದರೂ 'ಕೋಟೆ' ಚಿತ್ರ ಒಮ್ಮೆ ನೋಡಿದರೆ ಯಾವುದೇ ಮೋಸವಿಲ್ಲ.

'ಫಿಲ್ಮ್ ಸಕ್ಸಸ್ ಪ್ರೆಸ್ ಮೀಟ್' ವಿಷಯಕ್ಕೆ ಬರುವುದಾದರೆ ಚಿತ್ರ ಗೆದ್ದಿದ್ದರೂ ಅಂದು ಅದರ ನಾಯಕ ಪ್ರಜ್ವಲ್ ಮುಖದಲ್ಲಿ ಮಂದಹಾಸವಿರಲಿಲ್ಲ! ಅದರ ಬದಲಿಗೆ ಆತ ಆತಂಕದಲ್ಲಿರುವಂತೆ ಕಂಡಿತು. ಹಲವರ ಪ್ರಕಾರ ಇದಕ್ಕೆ ಕಾರಣವೇನು ಗೊತ್ತಾ?

ಬಹುತೇಕ ವಿಮರ್ಶಕರು 'ಕೋಟೆ' ಚಿತ್ರದ ಖಳನಾಯಕ ರವಿಶಂಕರ್ ಪಾತ್ರವನ್ನು ಯದ್ವಾತದ್ವಾ ಕೊಂಡಾಡಿದ್ದಾರೆ. ಅಷ್ಟೇ ಅಲ್ಲ, ಆ ಚಿತ್ರ ಯಶಸ್ವಿಯಾಗಿ ಪ್ರದರ್ಶನ ಕಾಣುವುದಕ್ಕೆ ಖಳನಾಯಕ ರವಿಶಂಕರ್ ಪಾತ್ರವೇ ಕಾರಣ ಎಂದು ಗಾಂಧಿನಗರದ ಜನರೂ ಮಾತನಾಡಿಕೊಳ್ಳುತ್ತಿದ್ದಾರೆ. ಹೀಗಾಗಿ ಒಬ್ಬ ಖಳನಾಯಕನ ದೆಸೆಯಿಂದ ಚಿತ್ರ ತುಂಬಿದ ಪ್ರದರ್ಶನ ಕಾಣುತ್ತಿದೆ ಎಂದರೆ ಯಾವ ಹೀರೋ ತಾನೇ ಅದನ್ನು ಸಂತೋಷದಿಂದ ಕ್ರೀಡಾಮನೋಭಾವದಿಂದ ಸ್ವೀಕರಿಸುತ್ತಾನೆ ಹೇಳಿ. ಹೀಗಾಗಿ ಚಿತ್ರ ಗೆದ್ದರೂ ನಾಯಕ ಪ್ರಜ್ವಲ್ ಹೆಚ್ಚುಮೋರೆ ಹಾಕಿ ಕುಳಿತುಕೊಂಡಿದ್ದರು.

ಕಡ್ಡಿ ಪುಡಿ!

ಶಿವರಾಜ್‌ಕುಮಾರ್ ದುನಿಯಾ ಸೂರಿ ನಿರ್ದೇಶನದಲ್ಲಿ ನಟಿಸಲಿದ್ದಾರೆ. ಚಿತ್ರದ ಹೆಸರೇ 'ಕಡ್ಡಿ ಪುಡಿ'. ಆದರೆ ಈ ಚಿತ್ರ ಆರಂಭವಾಗುವುದೇ 2012ರ ಕೊನೆಗೆ. ಸಿನಿಮಾ ಆರಂಭವಾಗಲು ಇನ್ನೂ ಎರಡು ವರ್ಷ ಟೈಂ ಇದ್ದರೂ ಸೂರಿ ಚಿತ್ರದ ಸಿದ್ಧತೆಯನ್ನು ಈಗಾಗಲೇ ಆರಂಭಿಸಿದ್ದಾರೆ. ಚಿತ್ರಕಥೆ ಮತ್ತು ಕಥೆಯನ್ನು ಹೆಣೆಯುವ ಕಾಮಗಾರಿ ಆರಂಭಗೊಂಡಿದೆ. ಈಗಾಗಲೇ 'ಜಾಕಿ'ಯಲ್ಲಿ ಪುನೀತ್ ರಾಜ್‌ಕುಮಾರ್ ಅವರನ್ನು ನಿರ್ದೇಶಿಸಿರುವ ದುನಿಯಾ ಸೂರಿ ಅವರ ನೆಕ್ಸ್ಟ್ ಸಿನಿಮಾ 'ಅಣ್ಣಾ ಬಾಂಡ್'. ಅದರಲ್ಲೂ ಪುನೀತ್ ಹೀರೋ. ಅದಾದಮೇಲೆ ದರ್ಶನ್ ನಟಿಸಲಿರುವ 'ಕೆಂಡ ಸಂಪಿಗೆ' ಅರಳಲಿದೆ.



ರಿಯಲ್ ಹೀರೋ ರಾಯಣ್ಣ!



'ಸಂಗೊಳ್ಳಿ ರಾಯಣ್ಣ' ಚಿತ್ರೀಕರಣದ ಸಂದರ್ಭದಲ್ಲಿ ಪೋಷಕನಟ ಶ್ರೀನಿವಾಸ್ ಮೂರ್ತಿ ಕುದುರೆಯಿಂದ ಬಿದ್ದು ಗಾಯಮಾಡಿಕೊಂಡಿದ್ದು ಅಷ್ಟೇನೂ ದೊಡ್ಡ ಸುದ್ದಿಯಾಗಲಿಲ್ಲ. ಇದಕ್ಕೆ ಕಾರಣ ಟಿವಿ ಚಾನೆಲ್‌ಗಳು ಇದನ್ನು 'ಬ್ರೇಕಿಂಗ್ ನ್ಯೂಸ್' ಎಂದು ಹೈಲೆಟ್ ಮಾಡದಿದ್ದದ್ದೇ ಇರಬಹುದು!

ಸದ್ಯ 'ಸಂಗೊಳ್ಳಿ ರಾಯಣ್ಣ' ಚಿತ್ರತಂಡ 25 ದಿನಗಳ ಕಾಲ ಜೈಪುರದಲ್ಲಿ ಠಿಕಾಣಿ ಹೂಡಿದೆ. ಯುದ್ಧ ದೃಶ್ಯವೊಂದರ ಚಿತ್ರೀಕರಣಕ್ಕಾಗಿ ಸುಮಾರು 500ಕ್ಕೂ ಹೆಚ್ಚು ಕುದುರೆಗಳು, ಐವತ್ತಕ್ಕೂ ಹೆಚ್ಚು ಆನೆಗಳನ್ನು ಉಪಯೋಗಿಸಲಾಗಿದೆಯಂತೆ. ಅಂದಹಾಗೆ ಆ ಯುದ್ಧದ ಸೀನ್ ಅನ್ನು ಚಿತ್ರೀಕರಿಸುತ್ತಿರುವಾಗ ಕುದುರೆಯಿಂದ ಬಿದ್ದ ಶ್ರೀನಿವಾಸಮೂರ್ತಿಗೆ ಅಂತಹ ದೊಡ್ಡ ಏಟೇನೂ ಆಗಲಿಲ್ಲ. ಇದಕ್ಕೆ ಮುಖ್ಯ ಕಾರಣ ಶ್ರೀನಿವಾಸಮೂರ್ತಿ ತೋರಿಸಿದ ಚಾಕಚಕ್ಯತೆ ಮತ್ತು ಸಮಯಸ್ಫೂರ್ತಿ. ಅದರ ಜೊತೆಗೆ ಕುದುರೆ ಸವಾರಿಯಲ್ಲಿ ಎಕ್ಸ್‌ಪರ್ಟ್ ಆಗಿರುವ ನಟ ದರ್ಶನ್ ನೀಡಿದ ಸಾಂದರ್ಭಿಕ ಚಿಕಿತ್ಸೆ ಶ್ರೀನಿವಾಸಮೂರ್ತಿ ಎದ್ದು ಮತ್ತೆ ನಟಿಸುವಂತೆ ಮಾಡಿತಂತೆ. ನಾಲ್ಕೈದು ವರ್ಷಗಳ ಹಿಂದೆ 'ಗಂಡುಗಲಿ ಕುಮಾರರಾಮ' ಚಿತ್ರೀಕರಣದ ಸಂದರ್ಭದಲ್ಲಿ ಕಾರ್ಮಿಕ ನಾಯಕ ಅಶೋಕ್ ಇದೇ ರೀತಿ ಕುದುರೆಯಿಂದ ಬಿದ್ದು ಸೊಂಟ ಮುರಿದುಕೊಂಡಿದ್ದರು. ಅದಾದ ಸ್ವಲ್ಪ ಸಮಯ ಅಶೋಕ್ ನಟನೆಗೆ ವಿರಾಮ ಹೇಳಬೇಕಾಗಿತ್ತು.

ಶ್ರೀನಿವಾಸಮೂರ್ತಿ ಪ್ರಕಾರ ಕನ್ನಡ ಚಿತ್ರರಂಗದಲ್ಲಿ ಕುದುರೆ ಸವಾರಿ ಮಾಡಲು ಯೋಗ್ಯವಾದ ಮೈಕಟ್ಟು, ಶಾರೀರ ಹೊಂದಿರುವುದು ದರ್ಶನ್ ಮಾತ್ರ. "ರಾಜ್‌ಕುಮಾರ್‌ಗಿಂತಲೂ ಕುದುರೆ ಸವಾರಿ ದರ್ಶನ್‌ಗೆ ಹೆಚ್ಚು ಚೆನ್ನಾಗಿ ಕಾಣಿಸುತ್ತದೆ" ಎಂದು ಶ್ರೀನಿವಾಸಮೂರ್ತಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ನಿಜ, ದರ್ಶನ್‌ಗೆ ಉತ್ತಮವಾದ ಮೈಕಟ್ಟು, ಎತ್ತರವಾದ ಪರ್ಸನಾಲಿಟಿ ಇದೆ. ಆದರೆ ದರ್ಶನ್‌ಗೆ ನಿಜವಾಗಿಯೂ ಕುದುರೆ ಸವಾರಿ ಅಷ್ಟೊಂದು ಸುಲಭವಾಗಲು ಮುಖ್ಯ ಕಾರಣ ಮೈಸೂರಿನಲ್ಲಿರುವ ಆತನ ತೋಟದಲ್ಲಿ ಕುದುರೆ ಸಾಕಿರುವುದು. ಅಷ್ಟೇ ಅಲ್ಲ, ಸಮಯ ಸಿಕ್ಕಾಗಲೆಲ್ಲಾ ದರ್ಶನ್ ಕುದುರೆಯನ್ನೇರಿ ಪಕ್ಕದ ಹಳ್ಳಿಗೆ ಹೋಗಿ ಬರುವುದನ್ನು ಒಂದು ಹವ್ಯಾಸ ಮಾಡಿಕೊಂಡಿದ್ದಾರೆ. ಮೊನ್ನೆ ಜೈಪುರದಿಂದ ಶೂಟಿಂಗ್ ಮುಗಿಸಿ ವಾಪಸ್ ಬೆಂಗಳೂರಿಗೆ ಬರುವ ಮೊದಲು ದರ್ಶನ್ ಅಲ್ಲಿಯ ಹತ್ತು ಕುದುರೆಗಳನ್ನು ಖರೀದಿಸಿದರಂತೆ. ಬೇರೆಲ್ಲ ನಾಯಕ ನಟರುಗಳಿಗಿಂತ ವಿಭಿನ್ನವಾಗಿ ಕಾಣಿಸುವ, ಮಾತನಾಡುವ ದರ್ಶನ್ ವೃತ್ತಿಜೀವನ ಈಗ ಕವಲುದಾರಿಯಲ್ಲಿದೆ. ಕಳೆದ ಮೂರ್ನಾಲ್ಕು ಚಿತ್ರಗಳ ಸೋಲಿನಿಂದ ಇನ್ನೂ ಚೇತರಿಸಿಕೊಳ್ಳದ ದರ್ಶನ್ ಭವಿಷ್ಯ 'ಸಂಗೊಳ್ಳಿ ರಾಯಣ್ಣ' ಚಿತ್ರವನ್ನು ಅವಲಂಬಿಸಿದೆ ಎಂದರೆ ತಪ್ಪಾಗಲಾರದು. •

'ಮದುವೆ ಮನೆ'ಯಲ್ಲಿ 'ಶ್ರದ್ಧಾ'ಂಜಲಿ!

'ಯಜಮಾನ' ಸಿನಿಮಾ ತೆಗೆದು ಅಪಾರ ಲಾಭ ಮಾಡಿ, ಅನಂತರ 'ಹುಚ್ಚ'ನಾಗಿ ಕೊನೆಗೆ 'ಮರುಜನ್ಮ'ವೆತ್ತಿದ್ದ ನಿರ್ಮಾಪಕ ರೆಹಮಾನ್ ಈಗ ತಲೆಮರೆಸಿಕೊಳ್ಳುವುದೊಂದು ಬಾಕಿ ಎಂಬಂತಾಗಿದೆ.




ರೆಹಮಾನ್ ನಿರ್ಮಿಸುತ್ತಿರುವ 'ಮದುವೆ ಮನೆ' ಆರಂಭವಾಗಿ ಅದಾಗಲೇ ಹತ್ತಿರತ್ತಿರ ವರ್ಷವೇ ಆಗುತ್ತಿದೆ. ಆದರೂ 'ಮದುವೆ' ಮುಗಿಯುವ ಸೂಚನೆ ಕಾಣುತ್ತಿಲ್ಲ. ಮೊದಲೇ ನಾಯಕ ನಟ ಗಣೇಶನ ಸಿನಿಮಾಗಳು ಒಂದರ ಹಿಂದೆ ಒಂದು ಕಾಲೆತ್ತಿಕೊಳ್ಳುತ್ತಿವೆ. ಇಂಥಾದ್ದರಲ್ಲಿ ವರ್ಷಗಟ್ಟಲೆ ಚಿತ್ರೀಕರಣ ನಡೆದರೆ ನಿರ್ಮಾಪಕನ ಪಾಡೇನಾಗಬೇಡ?

ಅಸಲಿಗೆ ಈ ಚಿತ್ರ ಇಷ್ಟು ದಿನ ಎಳೆಯಲು ಮತ್ತು ಖರ್ಚು ಏರಿಕೊಳ್ಳಲು ಮುಖ್ಯ ಕಾರಣ ಗಣೇಶನಲ್ಲ, ಆ ಎಲ್ಲ ಕ್ರೆಡಿಟ್ಟೂ ಈ ಬಾರಿ ನಾಯಕಿ ಶ್ರದ್ಧಾ ಆರ್ಯಗೆ ಸಲ್ಲುತ್ತದೆ. ಯಾವುದೋ ದಟ್ಟಡವಿಯ ಮಧ್ಯ 'ಮದುವೆ ಮನೆ'ಯ ಚಿತ್ರೀಕರಣ ಒಂದು ವಾರ ನಡೆದಿತ್ತಂತೆ. ಈ ಒಂದು ವಾರದಲ್ಲಿ ನಾಯಕಿ ಶ್ರದ್ಧಾ ಆರ್ಯಳಿಗೇ ಬರೋಬ್ಬರಿ ಐವತ್ತು ಲಕ್ಷ ರೂಪಾಯಿ ಖರ್ಚಾಗಿದೆಯಂತೆ. ಶ್ರದ್ಧಾ ಒಬ್ಬಳಿಗೇ ಎಂಟು ಜನ ಅಸಿಸ್ಟೆಂಟುಗಳಿದ್ದಾರಂತೆ. ತಲೆಬಾಚಿ, ಗಾಳಿ ಬೀಸಿ, ಛತ್ರಿ ಹಿಡಿಯುವುದರಿಂದ ಹಿಡಿದು ಮೂಗಿನ ಸಿಂಬಳ ಸೀಟುವ ತನಕ ಎಲ್ಲದಕ್ಕೂ ಈಕೆ ಅಸಿಸ್ಟೆಂಟುಗಳನ್ನಿಟ್ಟುಕೊಂಡಿದ್ದಾಳಂತೆ.

ಈಕೆಯನ್ನು 'ಮದುವೆ ಮನೆ' ಚಿತ್ರಕ್ಕೆ ನಾಯಕಿಯಾಗಿ ಕರೆತರುವುದಕ್ಕಿಂತ ಯಾವುದಾದರೂ 'ಶ್ರದ್ಧಾಂಜಲಿ' ಎನ್ನುವ ಸಿನಿಮಕ್ಕೆ ಎಳೆತಂದಿದ್ದರೇ ಅರ್ಥಪೂರ್ಣವಾಗಿರುತ್ತಿತ್ತೇನೋ..! •

ಭೀಮಾ ತೀರದಲ್ಲಿ ಓಂ ವರ್ಕ್!



ಅಪಘಾತದಿಂದ ಚೇತರಿಸಿಕೊಂಡಿರುವ ಓಂ ಪ್ರಕಾಶ್ ಮತ್ತೆ ಮೈಕೊಡವಿ ನಿಂತಿದ್ದಾರೆ. ಅದೂ ಭೀಮಾ ತೀರದಲ್ಲಿ..!

'ಭೀಮಾತೀರದ ಹಂತಕರು' ಕೃತಿಯನ್ನು ಆಧರಿಸಿ ಸಿನಿಮಾ ಮಾಡಬೇಕೆಂಬುದು ಓಂ ಪ್ರಕಾಶ್ ರಾವ್ ಕನಸಾಗಿತ್ತು. ಹೀಗಾಗಿ ಚಿತ್ರಕತೆಯನ್ನೂ ತಯಾರು ಮಾಡಿದ್ದರು. ಆದರೆ ಲೊಕೇಶನ್ ನೋಡಲು ಹೋದಾಗ ಅಲ್ಲಿನ ರಕ್ತ ಚರಿತ್ರೆಯ ಬಗ್ಗೆ ಇನ್ನೊಂದಿಷ್ಟು ಮಾಹಿತಿ ಸಿಕ್ಕಿದೆಯಂತೆ. ಹೀಗಾಗಿ ಭೀಮೆಯ ದಡದಲ್ಲಿ ನಡೆದ ಮಾರಣಹೋಮಗಳ ಬಗ್ಗೆ, ನೈಜ ಘಟನೆಗಳ ಬಗ್ಗೆ ಅಲ್ಲಿನ ಸ್ಥಳೀಯರನ್ನೇ ಸತತ ಹತ್ತು ದಿನಗಳಿಂದ ಸಂದರ್ಶಿಸಲು ನಿಂತಿದ್ದಾರೆ ಪ್ರಕಾಶ್.

ಈ ಹಿಂದೆ ಸಾಮಾನ್ಯವಾಗಿ ಓಂ ಪ್ರಕಾಶ್ ಸಿದ್ಧಗೊಂಡ ಸ್ಕ್ರಿಪ್ಟು ಹಿಡಿದು ಶೂಟಿಂಗ್ ಮಾಡುತ್ತಿದ್ದರು. ಯಾಕೆಂದರೆ ಸಿನಿಮಾಗೆ ಬೇಕಾದ ಹೋಂವರ್ಕ್ ಮಾಡುವುದೆಂದರೆ ಅವರಿಗೆ ಒಂಥರಾ ಅಲರ್ಜಿ ಇತ್ತು. ಆದರೆ ಈ ಬಾರಿ ತಮ್ಮ ಡ್ರೀಂ ಪ್ರಾಜೆಕ್ಟ್‌ಗೋಸ್ಕರ ಪ್ರಕಾಶ್ 'ಓಂ'ವರ್ಕ್ ಶುರು ಮಾಡಿದ್ದಾರೆ!

ಪರ್ಸನಲ್ ಜೀವನದಲ್ಲಿ ಓಂ ಎಷ್ಟೇ ಯಡವಟ್ಟು ಮಾಡಿಕೊಂಡಿದ್ದರೂ, ಪ್ರೊಫೆಷನ್ ವಿಚಾರಕ್ಕೆ ಬಂದರೆ ಅವರು ಅಪ್ಪಟ 'ಕೆಲಸಗಾರ'!

'ಭೀಮಾತೀರದಲ್ಲಿ...' ಚಿತ್ರವನ್ನು ನಿರ್ದೇಶಿಸಲು ಹೆಚ್ಚೂಕಮ್ಮಿ ಓಂ ಪ್ರಕಾಶ್ ವ್ಯಕ್ತಿತ್ವವನ್ನೇ ಹೊಂದಿರುವ ರವಿ ಶ್ರೀವತ್ಸ ಕೂಡಾ ಕನಸು ಕಂಡಿದ್ದರು. ಆದರೆ ಕಡೆಯದಾಗಿ ಭೀಮೆ ಪ್ರಕಾಶ್ ಕೈ ಹಿಡಿದಿದ್ದಾಳೆ. ಈ ಚಿತ್ರದಲ್ಲಿ ನಾಯಕನಾಗಿ ದುನಿಯಾ ವಿಜಿ ನಟಿಸುತ್ತಿದ್ದು ಈಗಾಗಲೇ ಚಿತ್ರವಿಚಿತ್ರ ಫೋಟೋ ಶೂಟ್ ಕೂಡಾ ಮುಗಿದಿದೆ.

• ಅರುಣ್

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44